ಶೂದ್ರ

ಮಳೆ ಮಿಂಚು ಗೆರೆಗೆ
ಮುಗಿಲ ಮರೆ ನಿಂತೇ
ಕಾಯುತ್ತಿರುತ್ತವೆ ಯುಗಾಂತರ—ವೈದೇಹಿ

ಈ ಸಂಚಿಕೆಯಲ್ಲಿ :

ಮಿಖಾಯಿಲ್ ಶೊಲೆಕೊವ್ – ಡಾ|| ಕೆ. ಆರ್. ಸಂಧ್ಯಾರೆಡ್ಡಿ – ಕೆ.ಪಿ. ಮೃತ್ಯುಂಜಯ – ಸ್ವಾಮಿನಾಥ – ಮಾಧವ ಕುಲಕರ್ಣಿ – ಶಾಂತಾ ನಾಗರಾಜ್ – ಎಚ್. ಎಸ್. ಭೀಮನಗೌಡರ–ಬಿಳುಮನೆ ರಾಮದಾಸ್ ವತ್ಸಲಾ–ಜರಗನಹಳ್ಳಿ ಶಿವಶಂಕರ್ – ಒಳನೋಟ : ಜಿ.ಟಿ. ನಾಗರಾಜು ಶಿವರಾಮಯ್ಯ–ಬಿದರಹಳ್ಳಿ ನರಸಿಂಹಮೂರ್ತಿ–ನೊ. ಸಂ. ತಿಮ್ಮೇಗೌಡ ರಮೇಶ್ ಬಂದಗದ್ದೆ–ಶಂಕರ ಮೊಕಾಶಿ ಪುಣೇಕರ – ಪುಸ್ತಕ ವಿಮರ್ಶೆ : ಎಲ್.ಎನ್. ಮುಕುಂದರಾಜ್–ಕೆ.ವಿ. ಸುಬ್ಬಣ್ಣ–ಕನಸಿಗೊಂದು ಕಣ್ಣು

ಬೆಲೆ : 5-00 ರೂ. ದೂರವಾಣಿ : 643337

ಮುಕ್ತಚರ್ಚೆಗಾಗಿ 'ಶೂದ್ರ' ತಿಂಗಳ ಪತ್ರಿಕೆ

ಸಂಚಿಕೆ : 5-6 ನವೆಂಬರ್ 1991 ಡಿಸೆಂಬರ್ ಸಂಪುಟ : 18

ಸಹಾಯಕ ಸಂಪಾದಕರು : ನಿರ್ಮಲಾ ರೆಡ್ಡಿ – ಉತ್ತನೂರು ರಾಜಮ್ಮ, ವಿ. ಶೆಟ್ಟಿ
ಕೆ. ಎನ್. ಅರುಣ್ – ಸ. ರಘುನಾಥ್
ಜರಗನಹಳ್ಳಿ ಶಿವಶಂಕರ್–ಎಲ್. ಎನ್. ಮುಕುಂದರಾಜ್

ಶೂದ್ರಕ್ಕೆ ಚಂದಾ ಕಳಿಸಿ. ಅಜೀವ ಚಂದಾ ಬಾಬ್ತು ಕಂತುಗಳಲ್ಲಿ ಕೊಡುವವರು ಸ್ವಲ್ಪ ಜಾಗ್ರತೆ ಕೊಟ್ಟರೆ ಒಳಿತು. ಚಂದಾದ ರೀತಿಯಲ್ಲಿ ನಾಲ್ಕೈದು ವರ್ಷ ಕೊಟ್ಟರೆ ನಿಜವಾಗಿಯೂ ತೊಂದರೆಯಾಗುತ್ತದೆ. ಶೂದ್ರ ಬರದಿದ್ದರೆ ಪತ್ರ ಬರೆಯಿರಿ. ಚಂದಾ ವನ್ನು ಎಂ. ಓ. ಮೂಲಕ ಕಳುಹಿಸುವವರು ದಯವಿಟ್ಟು ಕೌಂಟರ್ ಭಾಗದಲ್ಲಿ ವಿಳಾಸ ಬರೆಯಿರಿ. ಲೇಖನ ಮತ್ತು ಕವನ ಕಳುಹಿಸುವವರು ರಿಪ್ಲೈ ಕಾರ್ಡಿಡಿ. ಚೆಕ್ ಮೂಲಕ ಕಳುಹಿಸುವವರು 10 ರೂ. ಹೆಚ್ಚುವರಿ ತುಂಬಿ.

ಹಿಂದೆ ಶೂದ್ರಕ್ಕೆ 200 ರೂ.ಗಳ ಆಜೀವ ಚಂದಾ ಕೊಟ್ಟಿದ್ದಾರೆ. ಅದರಲ್ಲೂ ಬಹುಪಾಲು ಮಂದಿ ಕಂತುಗಳಲ್ಲಿ. ಈಗ ಆಜೀವ ಚಂದಾ 400/– ರೂ. ಆಗಿದೆ ಕಳೆದ ವರ್ಷದಿಂದ. ತಿಂಗಳ ಪತ್ರಿಕೆಯಾಗಿ ವರ್ಷಕ್ಕೆ 800ಕ್ಕೂ ಹೆಚ್ಚು ಪುಟಗಳನ್ನು ಕೊಡುತ್ತಿದೆ. ಅನ್ಯಥಾ ಭಾವಿಸದೆ ಮಿಕ್ಕ ಹಣವನ್ನು ಕೊಟ್ಟರೆ ಅನುಕೂಲವಾದೀತು. —ಸಂ.

ನೀವು ಕಳಿಸುವ ಚಂದಾ ಶೂದ್ರದ ಬೆಳವಣಿಗೆಯ ಸಂಕೇತ

ಮುಖಚಿತ್ರ : ಪಾಲ್‌ಕ್ಲೇಯು ವಲಸೆ ಹೋಗುವ ಮೀನುಗಳು

ವಾರ್ಷಿಕ ಚಂದಾ : 50-00 ರೂ. ಪುಸ್ತಕ ಭಂಡಾರಗಳಿಗೆ 60-00 ರೂ.
ಆಜೀವ ಚಂದಾ : 400-00 ರೂ. (ನಾಲ್ಕು ಕಂತುಗಳಲ್ಲಿ) 450-00 ರೂ.

ಶೂದ್ರ ಶ್ರೀನಿವಾಸ್, ನಂ. 1, 3 ನೇ ಕ್ರಾಸ್, ಬಾಲಾಜಿನಗರ, ಸುದ್ದುಗುಂಟೆಪಾಳ್ಯ,
ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560 029

ಲೇಖಕರು ಕನಸು ಕಂಡರೆ ಸಾಲದು....

— ಮಿಖಾಯಿಲ್ ಶೊಲೆಕೊವ್

ಪರ್ವತಗಳಿಂದ ಪ್ರವಹಿಸುವ ಜಲಧಾರೆಗಳ ನಾಡಿನಲ್ಲಿ ಹುಟ್ಟಿದ ಒಂದು ನಾಣ್ಣುಡಿ ಹೇಳುತ್ತದೆ : "ಆಳವಿಲ್ಲದ ನದಿಗಳು ಮಾತ್ರ ಹೆಚ್ಚು ಸದ್ದು ಮಾಡುತ್ತವೆ."

ಬಿರುಸಿನ ಚರ್ಚೆ ಮತ್ತು ವಿವಾದಾತ್ಮಕ ಭಾಷಣಗಳಿಂದ ಕೂಡಿರುತ್ತಿದ್ದ ಪ್ರಾದೇಶಿಕ ಹಾಗೂ ಜಿಲ್ಲಾ ಬರಹಗಾರರ ಸಮಾವೇಶದ ಕೋಲಾಹಲ, ಆವೇಶಗಳು ಮುಗಿದುಹೋಗಿವೆ. ರಿಪಬ್ಲಿಕನ್ ಮಟ್ಟದಲ್ಲಿ ನಡೆಯುತ್ತಿದ್ದ ಸಮಾವೇಶಗಳು ಬಹಳ ನಿರ್ಬಂಧಿತವಾಗಿರುತ್ತಿದ್ದವು. ಹಲವಾರು ದೊಡ್ಡ ಮತ್ತು ಚಿಕ್ಕ ಉಪನದಿಗಳನ್ನು ಸೇರಿಸಿಕೊಂಡು ಹರಿಯುವ ಮಹಾನದಿಗೆ ಹೋಲಿಸಬಹುದಾದ ನಮ್ಮ ಈ ಅಖಿಲ ಸಂಯುಕ್ತ ಒಕ್ಕೂಟವು ನಿಜವಾದ ಗಾಂಭೀರ್ಯದಿಂದ, ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಶುಭಸೂಚಕವಲ್ಲದ ಶಾಂತಿಯಿಂದ ಮುಂದುವರೆಯುತ್ತಿದೆ.

ಭಾಷಣಕಾರರ ಮುಖಗಳು ನಿರ್ಭಾವುಕವಾಗಿವೆ. ವರದಿಗಳು ಕಟ್ಟುನಿಟ್ಟಾಗಿ ಔಪಚಾರಿಕವಾಗಿವೆ. ಬಹಳಷ್ಟು ಬರಹಗಾರರ ಭಾಷಣಗಳನ್ನು ಬಹಳ ಎಚ್ಚರಿಕೆಯಿಂದ ರೂಪಿಸಲಾಗಿದೆ. ಸಾಮಾನ್ಯವಾಗಿ ವಾದ-ಪ್ರತಿವಾದದಲ್ಲಿ ತೊಡಗಿದ ಗಂಡಸರಿಗಿಂತ ಹೆಚ್ಚು ಉದ್ರೇಕಗೊಳ್ಳುವ ಸ್ವಭಾವದವರಾದ ಲೇಖಕಿಯರು ಮತ್ತು ಕವಯಿತ್ರಿಯರೂ ಸಹ, ಒಂದೆರಡು ಅಪವಾದಗಳನ್ನು ಬಿಟ್ಟು – ಮೌನಮುದ್ರೆಯಲ್ಲಿ ಇದ್ದಾರೆ. ನಮ್ಮ ಪ್ರೀತಿಯ ಮತ್ತು ಆಕ್ರಮಣಕಾರೀ ಪ್ರವೃತ್ತಿಯ ಈ ಹೆಂಗಸರು, ಪ್ರಾಥಮಿಕ ಸಭೆಗಳಲ್ಲಿ ತಮ್ಮ ವಾಕ್‌ಶಕ್ತಿಯನ್ನೆಲ್ಲ ಖರ್ಚು ಮಾಡಿಕೊಂಡು ಸುಸ್ತಾಗಿ ಕುಳಿತಿದ್ದಾರೆಯೇ ? ಅಥವಾ ಈ ಒಕ್ಕೂಟದ ಮುಕ್ತಾಯದಲ್ಲಿ ಹೊಸ ಸ್ಫೋಟನೆಗಾಗಿ ತಮ್ಮ ಶಕ್ತಿಯನ್ನು ಕಾಯ್ದಿಡುತ್ತಿದ್ದಾರೆಯೆ ? ಬರಹಗಾರ್ತಿಯರಾದರೂ ಸೂಕ್ಷ್ಮ ತಿಳುವಳಿಕೆ ಉಳ್ಳ ಹೆಂಗಸರು ಇಲ್ಲಿ ಕಾಣುತ್ತಿಲ್ಲ. ಮುಂದೆ ಇವರು ಏನು ಮಾಡುತ್ತಾರೆ ಎಂಬ ಬಗ್ಗೆ ಏನೂ ಹೇಳಲಾಗಿಲ್ಲ. ಅಥವಾ ನಾನಾದರೂ ಹೇಳಲಾರೆ.

1954ರಲ್ಲಿ ಸೋವಿಯತ್ ಬರಹಗಾರರ ಎರಡನೇ ಅಖಿಲ ಸಂಯುಕ್ತ ಸಮಾವೇಶದಲ್ಲಿ ಶೊಲೆಕೊವ್ ಮಾಡಿದ ಭಾಷಣ

ಅನು : ಡಾ॥ ಕೆ. ಆರ್. ಸಂಧ್ಯಾರೆಡ್ಡಿ. ನಂ. 1044, 'ಸಮಯಾ' 4ನೇ ಅಡ್ಡರಸ್ತೆ
8ನೇ ಮುಖ್ಯರಸ್ತೆ, ಶ್ರೀನಿವಾಸನಗರ, ಬೆಂಗಳೂರು-560 050

ಈ ಸಮಾವೇಶ 7ನೇ ದಿನಕ್ಕೆ ಕಾಲಿಟ್ಟಿದೆ. ಆದರೆ ವಾತಾವರಣ ಏನೂ ಬದಲಾಗಿಲ್ಲ. ವ್ಯಾಲೆಂಟಿನ್ ಒವೆರ್‌ಚಿನ್‌ನ ಭಾಷಣ ಮಾತ್ರ ಸ್ವಲ್ಪ, ಆದರೂ ನಿರ್ಜೀವ ಚಲನೆಯನ್ನಷ್ಟೇ ಉಂಟುಮಾಡಿತು. ಹಾಗಾದರೆ 20 ವರ್ಷಗಳಿಂದ ನಮ್ಮ ತಲೆಕೆಡಿಸಿದ ಸಮಸ್ಯೆಗಳೆಲ್ಲವೂ ಪರಿಹಾರವಾಗಿವೆ ಎಂದರ್ಥವೆ? ಈಗ ನಮ್ಮ ಸಾಧನೆ, ತಪ್ಪುಗಳನ್ನು ಪಟ್ಟಿಮಾಡುವುದು, ತಪ್ಪುಗಳನ್ನು ಪರಿಶೀಲಿಸಿ, ಸರ್ವಾನುಮತದಿಂದ ಪುನಃ ಲೇಖನಿ ಹಿಡಿದು ಬರೆಯುತೊಡಗುವುದಷ್ಟೆ ನಮ್ಮ ಕೆಲಸವೆ? ಇಲ್ಲ, ಇದಲ್ಲ....

ನಮ್ಮ ಒಟ್ಟಾರೆ ಸಾಧನೆಗಳ ಬಗ್ಗೆ ಈವರೆಗೆ ಸಾಕಷ್ಟು ಹೇಳಲಾಗಿದೆ. ನಮ್ಮ ಬಹುಮುಖೀ ಸೋವಿಯೆತ್ ಸಾಹಿತ್ಯ ಕಳೆದ 20 ವರ್ಷಗಳಲ್ಲಿ ಬಹಳ ಉತ್ತಮವಾದದ್ದನ್ನೇ ಸಾಧಿಸಿದೆ ಮತ್ತು ಅನೇಕ ಪ್ರತಿಭಾನ್ವಿತ ಲೇಖಕರು ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದ್ದಾರೆ ಎಂಬ ಬಗ್ಗೆ ಎರಡನೇ ಮಾತಿಲ್ಲ. ಆದರೆ ಸಾಹಿತ್ಯಿಕ ಪತ್ರಿಕೆಗಳ ಪುಟಗಳು ಕೆಸರಿನಂತಹ ಮಧ್ಯಮ ದರ್ಜೆಯ ಸಾಹಿತ್ಯ ಉಕ್ಕುಕ್ಕಿ ಹರಿದು ನಮ್ಮ ಮಾರುಕಟ್ಟೆಗಳನ್ನು ತುಂಬುತ್ತಲೇ ಇದೆ ಎಂಬುದನ್ನು ಮರೆಯುವಂತಿಲ್ಲ. ಈ ಕೊಳಚೆಯನ್ನು ಒಂದು ಭದ್ರವಾದ ಅಣೆಕಟ್ಟಿನಿಂದ ತಡೆಗಟ್ಟದೇ ಹೋದರೆ ನಮ್ಮ ಗಂಭೀರ ಲೇಖಕರು ಬಹು ದೀರ್ಘ ಪರಿಶ್ರಮದಿಂದ ಸಂಪಾದಿಸಿದ ಓದುಗರ ಗೌರವವನ್ನು ಕಳೆದುಕೊಳ್ಳಬೇಕಾಗುತ್ತದೆ.

ಕಳೆದ ವರ್ಷಗಳ ಅಂದರೆ ಯುದ್ಧಾನಂತರದ ಅವಧಿಯತ್ತ ಹಿನ್ನೋಟ ಹರಿಸೋಣ. ಯುದ್ಧದ ಸಮಯದಲ್ಲಿ ಸಹಜವಾಗಿಯೇ ಬೃಹತ್ ಕಾದಂಬರಿಯನ್ನು ಬರೆಯುವಂತಹ ಯೋಚನೆಯನ್ನೂ ಕೂಡ ಬಹಳಷ್ಟು ಲೇಖಕರು ಮಾಡಲಿಲ್ಲ. ಏಕೆಂದರೆ ಕಾದಂಬರಿಯ ಕಥಾಸಂವಿಧಾನವನ್ನು ಬಹು ದೀರ್ಘ ಹಾಗೂ ಪರಿಶ್ರಮದ ಅವಲೋಕನದಿಂದ ಗ್ರಹಿಸಬೇಕಾಗುತ್ತದೆ. ಬಹಳ ಪ್ರಯಾಸ ಪಡಬೇಕಾಗುತ್ತದೆ. ಭಾಷೆಯಲ್ಲಿ ಪರಿಪೂರ್ಣ ಪಕ್ವತೆ ಬೇಕಾಗುತ್ತದೆ. ಶೈಲಿ ನಿರ್ದಿಷ್ಟವಾಗಿರಬೇಕಾಗುತ್ತದೆ. ಯುದ್ಧಕಾಲದಲ್ಲಿ ಬರಹಗಾರನ ಲೇಖನಿ ಒಂದು ಆಯುಧವಾಗಿತ್ತು. ಆಕಾರದ ಪರಿಪೂರ್ಣತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಮಯವಿರಲಿಲ್ಲ. ಲೇಖಕರ ಮುಂದೆ ಇದ್ದುದು ಒಂದೇ ಗುರಿ: ವೈರಿಯನ್ನು ನೇರವಾಗಿ ಇರಿಯುವಂತೆ ತಮ್ಮ ಲೇಖನಿಯ ಗುರಿ ಇಡುವುದು, ನಮ್ಮ ಸೈನಿಕರಿಗೆ ಬೆಂಬಲ ಕೊಡುವುದು. ಸೋವಿಯತ್ ಜನತೆಯ ಹೃದಯದಲ್ಲಿ ಶತ್ರುವನ್ನು ಸುಟ್ಟುಹಾಕುವಂತಹ ದ್ವೇಷ ಉರಿಯುತ್ತಿರುವಂತೆ ಮತ್ತು ತಮ್ಮ ಮಾತೃಭೂಮಿಯ ಬಗ್ಗೆ ಭಾವೋದ್ರೇಕದ ಪ್ರೀತಿ ಜ್ವಲಿಸುತ್ತಿರುವಂತೆ ನೋಡಿಕೊಳ್ಳುವುದು. ಎಲ್ಲರಿಗೂ ತಿಳಿದಿರುವಂತೆ ನಮ್ಮ ಬರಹಗಾರರು ಈ ಕೆಲಸವನ್ನು ಸರಿಯಾಗಿ ಮಾಡಿದ್ದಾರೆ. ಆದರೆ ಯುದ್ಧದ ನಂತರವೂ ಬಹಳಷ್ಟು ಬರಹಗಾರರು ಇದೇ ಓಟದ ವೇಗವನ್ನು ಮುಂದುವರೆಸಿಕೊಂಡು ಬಂದರು. ಅದೇ ಅಜಾಗರೂಕತೆಯ ಅವಸರದ ಬರವಣಿಗೆಯಲ್ಲಿ ತೊಡ

ಗಿಸಿಕೊಂಡರು. ಇದರ ಫಲಿತಾಂಶವಾಗಿ ಬಹಳಷ್ಟು ಕೃತಿಗಳ ಕಲಾತ್ಮಕ ಮಟ್ಟ ತೀವ್ರವಾಗಿ ಇಳಿಯಿತು. ಯುದ್ಧಕಾಲದಲ್ಲಿ ಓದುಗ ಯಾವುದನ್ನು ಕ್ಷಮಿಸಲು ಸಿದ್ಧವಾಗಿದ್ದನೋ ಅದನ್ನು ಯುದ್ಧಾನಂತರ ಸರಿಯೆಂದು ಅಂಗೀಕರಿಸಲು ಸಿದ್ಧವಿರಲಿಲ್ಲ. ಫಡಿಯೇವ್, ಫೆದಿನ್, ಉಜ್ಹೋವ್, ಪಾವ್‌ಲೆಂಕೊ, ಗ್ಲಾಡ್‌ಕೊವ್, ಲಿಯೊನಾವ್, ಫಾಸ್ಟೊವ್‌ಸ್ಕಿ, ಯುಂಪಿಟ್ಸ್, ಟ್ವಾರ್ಡೊವ್‌ಸ್ಕಿ, ಯಾಕುಬ್ ಕೊಲಾಸ್, ಗಂಚಾರ್, ನೆಕ್ರಸೊವ್ ಮುಂತಾದವರ ಪ್ರತಿಭಾನ್ವಿತ ಸಾಹಿತ್ಯ 'ಸಾಹಿತ್ಯಿಕ ಗರ್ಭಪಾತ' ಎಂದು ಸೂಕ್ತವಾಗಿ ಕರೆಯಬಹುದಾದಂಥ ಕೃತಿಗಳ ಕೀಳಂತನವನ್ನು ಮರೆಸಿ ಸ್ವಲ್ಪ ಸಮಾಧಾನ ತಂದಿತು.

ನಮ್ಮ ಕೃತಿಗಳ ಮಟ್ಟದ ಒಟ್ಟಾರೆ ಕುಸಿತಕ್ಕೆ ಯುದ್ಧಕಾಲದಲ್ಲಿ ಬೆಳವಣಿಗೆಯಾದ ಅವಸರದ ಪ್ರವೃತ್ತಿಯೇ ಏಕೈಕ ಅಥವಾ ಮುಖ್ಯವಾದ ಕಾರಣವೆಂದು ಹೇಳಬರುವುದಿಲ್ಲ. ನನ್ನ ಮನಸ್ಸಿಗೆ ತೋಚುವ ಒಂದು ಮುಖ್ಯ ಕಾರಣವೆಂದರೆ ಬರಹಗಾರರ ಮಟ್ಟದಲ್ಲಿ ವಿಸ್ಮಯಕಾರಿಯಾದ ಮತ್ತು ಅಕಾರಣಿಕವಾದ ಕುಸಿತ ಹಾಗೂ ವಿಮರ್ಶಕರ ಮಾನದಂಡದಲ್ಲಾದ ಕುಸಿತವೂ ಇದಕ್ಕೆ ಕಾರಣ. ತೀರಾ ಬೇಜವಾಬ್ದಾರಿಯು ಹಾಗೂ ಏನೇನೂ ಇರದ ಮಧ್ಯಮ ದರ್ಜೆಯ ಕಾದಂಬರಿಗಳ ಮಾತಿರಲಿ, ನಿಜವಾಗಿಯೂ ಕೆಟ್ಟ ಲೇಖಕರೆನಿಸಿಕೊಂಡವರನ್ನೂ ಸಹ ಹೆಸರಾಂತ ಲೇಖಕರು ಮೀರಿಸಿದರು. ತೀರಾ ಸಾಮಾನ್ಯ ಓದುಗರಲ್ಲಿ ಕೀಳು ಅಭಿರುಚಿ ಉಂಟುಮಾಡುವ, ನಮ್ಮ ಯುವ ಜನರನ್ನು ಭ್ರಷ್ಟಗೊಳಿಸುವ ಹಾಗೂ ಸಾಹಿತ್ಯಿಕ ಮೌಲ್ಯಮಾಪನದಲ್ಲಿ ನಿಷ್ಠುರರಾದ ಮತ್ತು ರಾಜಿ ಮಾಡಿಕೊಳ್ಳದ ಸ್ವಭಾವದ ಅರ್ಹ ಓದುಗರ ದೃಷ್ಟಿಯಲ್ಲಿ ಕೆಟ್ಟ ಹೆಸರು ಪಡೆಯುವಂಥ ಕೊಳಚೆ ಸಾಹಿತ್ಯ ಸೃಷ್ಟಿಯಾದಾಗ ಇವರು ಕೆರಳಿ ಮಾತಾಡಲಿಲ್ಲ.

ಇರಲಿ, ಕೆಲವು ವಿಮರ್ಶಕರ ವಿಷಯದಲ್ಲಿ ಈ ಸ್ಥಿತಿ ಇನ್ನೂ ಹೀನಾಯವಾಗಿತ್ತು. ಒಬ್ಬ ಪ್ರತಿಷ್ಠಿತನಾದ, ಜೊತೆಗೆ ಬಹುಮಾನಿತನೂ ಆದ ಲೇಖಕ ಒಂದು ಕೊಳೆತ ಪುಸ್ತಕ ಪ್ರಕಟಿಸಿದಾಗ ಈ ಅಸಭ್ಯತೆಯನ್ನು ನೋಡಿ ಅನೇಕ ವಿಮರ್ಶಕರು ಶೂನ್ಯ ನೋಟ ಬೀರಿದರು, ಎಷ್ಟೋ ವೇಳೆ ಕಿರಿಕಿರಿಯಿಂದ ಮುಖ ತಿರುಗಿಸಿದರು. ಇವರಲ್ಲಿ, ಓದುಗ ಜನ ತತ್ತರಿಸುವಂಥ ವಿಲಕ್ಷಣ ಪರಿವರ್ತನೆಯನ್ನು ಕಂಡರು : ಉತ್ಕಟ 'ವಿಸೇರಿಯನ್ನ'ರು [ವಿಸೇರಿಯನ್ ಬೆಲಿನ್‌ಸ್ಕಿ (1811-1848) ರಾಜಿಯಾಗದ ಮನೋಭಾವಕ್ಕೆ ಹೆಸರಾದ ಪ್ರಸಿದ್ಧ ರಶಿಯನ್ ವಿಮರ್ಶಕ] ಧಿಡೀರನೆ ಕೆಂಪಾಗಿ ನಾಚುವ ಹೆಂಗಳೆಯರಾದರು. ಕೆಲವರು ನಾಚಿಕೆಯಿಂದ ಮೌನವಾಗಿ ಉಳಿದರು. ಇನ್ನೂ ಕೆಲವರು ತಮ್ಮ ವಿವೇಕವನ್ನು ಮರೆತು, "ಸ್ವಲ್ಪ ಬಂಡವಾಳ" ಮಾಡಿಕೊಳ್ಳುವ ಉದ್ದೇಶದಿಂದ ಈ 'ಆರಾಧ್ಯ ದೈವ'ದ ಮೇಲೆ ಮುಗಿಬಿದ್ದು ಅವನ ಯೋಗ್ಯತೆಗೆ ಮೀರಿದ, ಅಳತೆ ಮೀರಿದ ಹೊಗಳಿಕೆಯ ಸುರಿಮಳೆ ಕರೆದರು. ಹೋಗಲಿ, ನಮ್ಮ ಪತ್ರಿಕೆಗಳು ಎಂದಾದರಾಗಲಿ ಖ್ಯಾತ

ಲೇಖಿಕನೊಬ್ಬ ಬರೆದ ಕೀಳು ದರ್ಜೆಯ ಕೃತಿಯ ಬಗ್ಗೆ ಯಾವುದೇ ರಿಯಾಯಿತಿ ವಿನಾಯಿತಿಗಳಿಲ್ಲದೆ ಒಂದೇ ಒಂದು ಲೇಖನವನ್ನಾದರೂ ಪ್ರಕಟಿಸಿವೆಯೆ ? ಎಂದಿಗೂ ಇಲ್ಲ. ಇದೇ ದುರಂತ. ವಿನಾಯಿತಿಯ ಹಕ್ಕನ್ನು ಅನುಭವಿಸುವ ಯಾವುದೇ ವ್ಯಕ್ತಿ ನಮ್ಮಲ್ಲಿರ ಕೂಡದು, ನಮಗದು ಬೇಡವೂ ಬೇಡ.

ಲಿಟರೇಚರ್ನಾಯಾ ಗೆಜೆಟಾದಂತಹ ಪತ್ರಿಕೆ ಓದುಗರ ಅಭಿಪ್ರಾಯವನ್ನು ರೂಪಿಸ ಬೇಕು ಎಂದು ಹೇಳಲಾಗುತ್ತದೆ. ಈ ಪತ್ರಿಕೆ ನಮ್ಮ ಸಾಹಿತ್ಯಕ್ಕೆ ಒಂದು ಕೀಲಿಕೈ ಇದ್ದಂತೆ. ಸಾಹಿತ್ಯದ ಬಗ್ಗೆ ಯಾವುದೇ ಪೂರ್ವಾಗ್ರಹಪೀಡಿತವಲ್ಲದ ಪರಿಚಯವನ್ನು ಪಡೆದುಕೊಳ್ಳುವುದಕ್ಕೆ ಇದೊಂದು ಸಾಧನ. ಆದರೆ, ಸಾಹಿತ್ಯ ವಿಮರ್ಶೆಗೆ ಬಹು ಮುಖ್ಯ ಕೊಡುಗೆ ನೀಡಿದ ಕಾಮ್ರೇಡ್ ಸಿಮೊನೊವ್‌ಗೆ ಬಹಳ ಋಣಿಯಾಗಿರುವ, ಆತ ನನ್ನು ಸೂರ್ಯನೇ ಎಂದು ಭಾವಿಸುವ, ಆತನ ಕೋರೈಸುವ ಬೆಳಕಿಗೆ ಕಣ್ಣು ಮುಚ್ಚಿ ಕೊಳ್ಳುವಂತಹ ವ್ಯಕ್ತಿಯೊಬ್ಬನ ಮಾಲಿಕತ್ವದಲ್ಲಿರುವ ಈ ಪತ್ರಿಕೆ ಹೇಗೆ ಪೂರ್ವಾಗ್ರಹ ಪೀಡಿತವಾಗದಿರಲು ಸಾಧ್ಯ ?

ಭವಿಷ್ಯದ ಬಗ್ಗೆ ಆಲೋಚಿಸುತ್ತ, ನಮ್ಮ ಒಕ್ಕೂಟಕ್ಕೆ ಎಂಥ ಮಾದರಿಯ ರಾಜಕೀಯ ನಾಯಕ ಬೇಕು ಎಂದು ಯೋಚಿಸುವಾಗ ನಾವು ಬಹಳಷ್ಟು ಮಂದಿ ಕಾಮ್ರೇಡ್ ಪಾಲಿಕಾರ್ಪೊವ್‌ನನ್ನು ಕೃತಜ್ಞತೆಯಿಂದ ಮತ್ತು ದುಃಖದಿಂದ ನೆನಪಿಸಿ ಕೊಳ್ಳುತ್ತೇವೆ: ಕೃತಜ್ಞತೆಯಿಂದ ಏಕೆಂದರೆ, ಆತ ಯಾವುದೇ ಗುಂಪುಗಾರಿಕೆಗೆ ಒಳ ಗಾಗದ ಕಾರಣಕ್ಕಾಗಿಯಾದರೂ ನಮ್ಮ ಸಾಹಿತ್ಯದ ಸರ್ವತೋಮುಖ ಬೆಳವಣಿಗೆಗೆ ಬಹುದೊಡ್ಡ ಕಾಣಿಕೆ ನೀಡಿದ ಎಂಬುದಕ್ಕಾಗಿ, ದುಃಖದಿಂದ ಏಕೆಂದರೆ ನಮ್ಮ ಉದಾ ಸೀನತೆಯಿಂದಾಗಿ ಆತನನ್ನು ನಮ್ಮ ದುರದೃಷ್ಟಕ್ಕೆ ಲೇಖಕ ಮತ್ತು ಸಂಚುಗಾರ ಕೌಶಲ ಗಳೆರಡನ್ನೂ ರೂಢಿಸಿಕೊಂಡ ಸಾಹಿತ್ಯಿಕ ಪೋರ–ಪೋರಿಯರು ಜೀವಂತವಾಗಿ ತಿಂದು ಹಾಕಿದರಲ್ಲಾ ಎಂಬುದಕ್ಕಾಗಿ. ಈ ಪೋರರು ಬರವಣಿಗೆಯ ತಾಪತ್ರಯದಿಂದ ಮುಕ್ತ ರಾದಾಗ ಮಸಲತ್ತುಗಳ ಕ್ಷೇತ್ರಕ್ಕೆ ಧುಮುಕುತ್ತಾರೆ. ಎಷ್ಟೋ ವೇಳೆ ಮೊದಲನೆಯದ ಕ್ಕಿಂತ ಎರಡನೆಯ ಕೌಶಲದಲ್ಲೆ ಹೆಚ್ಚು ಯಶಸ್ವಿಯಾಗುತ್ತಾರೆ.

ಈಗ ಪುನಃ ವಿಮರ್ಶಕರ ವಿಷಯಕ್ಕೆ ಬರೋಣ: ಒಬ್ಬ ಮಧ್ಯಮ ದರ್ಜೆಯ, ಹೆಚ್ಚು ಪ್ರಸಿದ್ಧನಲ್ಲದ ಅಥವಾ ಉದಯೋನ್ಮುಖ ಲೇಖಕನ ಒಂದು ದುರ್ಬಲ ಕಥೆ ಪ್ರಕಟಗೊಂಡರೆ ಈ ವಿಮರ್ಶಕರಲ್ಲಿ ಪುನಃ ಜೀವಂತಿಕೆ ಮೈದಳೆಯುತ್ತದೆ. ಇಜಾರಗಳನ್ನು ಪುನಃ ಮೇಲೇರಿಸಿಕೊಂಡು ಸಜ್ಜಾಗುತ್ತಾರೆ – ಈ ರೂಪಕವನ್ನು ಕ್ಷಮಿಸಿ – ಇವರ ತಾರಸ್ವರ ಗೀತೆಗಳು ಅಧಿಕಾರಾತ್ಮಕ ಮಂದ್ರಸ್ವರಗಳಾಗಿ ಬದಲಾಗುತ್ತವೆ. ತಮ್ಮೆಲ್ಲ ಶಕ್ತಿಯನ್ನು ಬಳಸಿ ಚಾವಟಿಯನ್ನು ಹರಿಯಬಿಡುತ್ತಾರೆ. ಈಗ ರ್‍ಯಾರಿಕೊವ್ ಸಹ ಮೊರೊವ್‌ಸ್ಕಿ ರಸ್ತೆಯಿಂದ (ಸೋವಿಯತ್ ಬರಹಗಾರರ ಒಕ್ಕೂಟದ ಮಂಡಳಿಯ

ಪ್ರಧಾನ ಕಛೇರಿ ಇರುವ ರಸ್ತೆ) ಬರಬಹುದಾದ ಬೊಬ್ಬೆಯ ಹೆದರಿಕೆಯಿಲ್ಲದೆ ಬಹಳ
ಸಂತೋಷದಿಂದ ಈ ಲೇಖನಗಳನ್ನು ಪ್ರಕಟಿಸುತ್ತಾನೆ. ವಿಮರ್ಶಕರು ಮುಂದೆ ಬಂದು
ತಮ್ಮ ಅನುಗ್ರಹದ ನುಡಿಗಳ ಚಮತ್ಕಾರ ಹಾಗೂ ವಿಷಯುಕ್ತ ಕಟುಹಾಸ್ಯದ ಪ್ರಖರ
ಪ್ರದರ್ಶನ ನೀಡುತ್ತಾರೆ.

ಪ್ರಖ್ಯಾತರಾದವರಿಗೆ ತೈಲ, ಸವಿರಸಗಳ ಅಭಿಷೇಕ ನಡೆಸಿದವರು ಬಹುಮಾನ
ಗಳಿಸದ ಮತ್ತು ಆ ಕಾರಣಕ್ಕಾಗೇ ಪ್ರಖ್ಯಾತರಾಗದ ಬಡ ಕಿರಿ ಲೇಖಕರ ಮೇಲೆ
ನಿರ್ಗಂಧ ದ್ರವವನ್ನೂ ಸುರಿಯುತ್ತಾರೆ. ಮೊದಲ ಹೊಡೆತದಿಂದ ಕಂಗಾಲಾಗಿರುವ
ಈ ಬಡಪಾಯಿ ಇನ್ನೂ ತತ್ತರಿಸುತ್ತಿರುವಾಗಲೇ ಅವನ ಮೇಲೆ ಹೊಡೆಯಲು ಇನ್ನೊಬ್ಬ
ವಿಮರ್ಶಕನೂ ತಯಾರಾಗಿ ನಿಂತಿರುತ್ತಾನೆ.

ಈ ಸಭೆಯಲ್ಲಿ ಅನೇಕರು ಈಗಾಗಲೇ ನಮ್ಮ ಸಾಹಿತ್ಯದ ಬಂದೂಕುಗಳ ಬಗ್ಗೆ –
ಅಂದರೆ ಐದೋ ಹತ್ತೋ ಅಗ್ರಗಣ್ಯ ಲೇಖಕರ ಬಗ್ಗೆ ಮಾತಾಡಿದ್ದಾರೆ. ಹಳೆ ಸೈನಿಕರು
ಮಾಡುವಂತೆ ನಮ್ಮ ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸಿಕೊಳ್ಳುವುದಕ್ಕೆ ಇದು ಸಕಾಲವಲ್ಲವೆ?
ಬುಲೆಟುಗಳನ್ನು ಬಂದೂಕಿನ ಕೊಳವೆಯೊಳಗೆ ಬಹು ದೀರ್ಘ ಕಾಲ ಇರಿಸಿದರೆ ಅದರಲ್ಲೂ
ಮಳೆ ಅಥವಾ ಹಿಮದ ಹವಾಮಾನದಲ್ಲಿಟ್ಟರೆ ಅವು ಆಕ್ಸಿಡೈಸ್ ಆಗಿ ತುಕ್ಕು ಹಿಡಿಯು
ತ್ತವೆ ಎಂಬುದು ಯಾರಿಗೆ ಗೊತ್ತಿಲ್ಲ? ಹಾಗಿದ್ದಲ್ಲಿ ಈ ಹಳೆಯ ತುಕ್ಕು ಹಿಡಿದ ಬುಲೆಟು
ಗಳನ್ನು ತೆಗೆದು ಹೊಸ ಬುಲೆಟುಗಳನ್ನು ತುಂಬಬೇಕಲ್ಲವೆ? ಹಳೆಯ ಬುಲೆಟುಗಳನ್ನು
ಎಸೆಯಬೇಕೆಂದು ಸೂಚಿಸುವ ಕೆಲಸವನ್ನು ನಾನೆಂದಿಗೂ ಮಾಡುವುದಿಲ್ಲ. ಈ ಬುಲೆಟು
ಗಳೂ ಮತ್ತೆ ಉಪಯೋಗಕ್ಕೆ ಬರುತ್ತವೆ. ಆದರೆ ಹಾಗೆ ಮರುಬಳಕೆ ಮಾಡಬೇಕಾದರೆ
ಅವುಗಳನ್ನು ಕ್ಷಾರದ್ರಾವಣದಲ್ಲಿ ತೊಳೆಯುವುದು ಅಥವಾ ಇದು ಸಾಕಾಗದಲ್ಲಿ ಉಪ್ಪು
ಕಾಗದದಿಂದ ಉಜ್ಜುವುದು ಅನಿವಾರ್ಯ. ಚಿಂತೆ ಬೇಡ, ಅವರ ಚರ್ಮವೇನೂ ಇದ
ರಿಂದ ಸುಲಿದುಬರುವುದಿಲ್ಲ. ಈ ಹಳೆಯ ಬುಲೆಟುಗಳನ್ನು ಯಾವುವೇ ಕಾರಣಕ್ಕೂ
ತಿರಸ್ಕರಿಸುವುದು ಸರಿಯಲ್ಲ. ಇದರಲ್ಲಿ ಯಾವುದಾದರೂ ಸರಿಯಾಗಿ ಹಾರಲೂಬಹುದು.

ಒಂದೇ ಒಂದು ಬಂದೂಕನ್ನು ಹೊಂದಿರುವ ಸಿಪಾಯಿ ತೀರಾ ಬಡ ಸಿಪಾಯಿಯೇ
ಸರಿ. ಇಷ್ಟು ಕಡಿಮೆ ಶಸ್ತ್ರಾಸ್ತ್ರದಿಂದ ಯುದ್ಧವನ್ನು ಗೆಲ್ಲುವುದು ಅಸಾಧ್ಯ. ನಿಮ್ಮೆಲ್ಲ
ರಂತೆ ನಾನೂ ಸಹ ನಮ್ಮ ನಮ್ಮ ಬಂದೂಕುಗಳಲ್ಲಿ ಬಹಳಷ್ಟು ಬುಲೆಟುಗಳಿರಬೇಕೆಂದು
ಅಪೇಕ್ಷಿಸುತ್ತೇನೆ. ಅಷ್ಟೇ ಅಲ್ಲ, ಅಗತ್ಯ ಬಿದ್ದರೆ ಕೈಗೆ ಸಿಗುವಂತೆ ಪೆಟ್ಟಿಗೆಗಳಲ್ಲಿ ಬುಲೆಟು
ಗಳು ತುಂಬಿರಬೇಕು, ಇದರ ಸಂರಕ್ಷಣೆಯನ್ನು ನೋಡಿಕೊಳ್ಳುವುದು ಓದುಗರ ಜವಾ
ಬ್ದಾರಿ. ಓದುಗರು ಜಿಪುಣರಲ್ಲ, ಆದರೆ ದುಂದುಗಾರಿಕೆಯನ್ನು ಅವರು ಸಹಿಸುವುದಿಲ್ಲ.

ಮತ್ತೊಂದು ವಿಷಯ – ಈ 'ಮುನ್ನಡೆಸುವವ' ಎಂಬ ಪದ ಇತರರನ್ನು ನಿಜ
ವಾಗಿಯೂ ಮುನ್ನಡೆಸುವಂಥ ವ್ಯಕ್ತಿಗೆ ಅನ್ವಯಿಸಿದಾಗ ಸರಿಯಾಗುತ್ತದೆ. ಆದರೆ

ಒಂದಾನೊಂದು ಕಾಲದಲ್ಲಿ ಮುನ್ನಡೆಸುತ್ತಿದ್ದ ಲೇಖಕ, ಈಗ ಹಾಗಿಲ್ಲದೆ ಬರೇ ಗಳಿಗೆ ಎಣಿಸುತ್ತಾ ಕೂತಿರುವುದೂ ಉಂಟು. ಒಂದು ತಿಂಗಳು ಅಥವಾ ಒಂದು ವರ್ಷವಲ್ಲ; ನನ್ನ ಹಾಗೆ ಹತ್ತಾರು ವರ್ಷ ಅಥವಾ ಅದಕ್ಕೂ ಹೆಚ್ಚು ಕಾಲ ಹೀಗೆ ಆತ ಕೂತೇ ಇರಬಹುದು.

ಕಾಮ್ರೇಡುಗಳೆ, ನಮ್ಮ ಬಗ್ಗೆಯೇ ಹೀಗೆ ಹೇಳಿಕೊಳ್ಳುವುದು ಅಷ್ಟೇನೂ ಸಂತೋಷದ ವಿಷಯವಲ್ಲ ಎಂದು ನಿಮಗನ್ನಿಸಬಹುದು. ಆದರೆ ಹೀಗೆ ಹೇಳಿಕೊಳ್ಳ ಬೇಕಾಗುತ್ತದೆ; ಸ್ವ-ವಿಮರ್ಶೆ ಗೊತ್ತಲ್ಲ? ಇಂಥ ಲೇಖಕನೊಬ್ಬ ಹೊಸ ಬಾಗಿಲಿನೆದುರು ನಿಂತ ಕುರಿಯ ಹಾಗೆ ನಿಂತೇ ಇರುತ್ತಾನೆ. ಹೀಗೆ ನಿಂತಲ್ಲೇ ನಿಂತ ಲೇಖಕನನ್ನು ಮುನ್ನಡೆಸುವ ಲೇಖಕ ಎಂದು ಹೇಗೆ ಕರೆಯಲು ಸಾಧ್ಯ ?

ಪಕ್ಷದ ಕೆಲಸದಲ್ಲಿ ಅನುಸರಿಸುವ ವಿಧಾನ ಯಾವುದು ಎಂಬುದು ನಿಮಗೆಲ್ಲ ತಿಳಿದೇ ಇದೆ. ಎಲ್ಲರಿಂದ ಗೌರವಿಸಲ್ಪಡುವ ಅಗ್ರವ್ಯಕ್ತಿಯನ್ನು ಪ್ರಾದೇಶಿಕ ಪಕ್ಷ ಸಮಿತಿಯ ಕಾರ್ಯದರ್ಶಿಯಾಗಿ ನೇಮಕ ಮಾಡುತ್ತಾರೆ, ಆತ ಮೊದಲನೆಯ ವರ್ಷ ತಕ್ಕಮಟ್ಟಿಗೆ ಚೆನ್ನಾಗಿ ಕೆಲಸ ಮಾಡುತ್ತಾನೆ. ಎರಡನೇ ವರ್ಷ ಅದಕ್ಕಿಂತ ಸುಮಾರಾಗಿ ಮಾಡುತ್ತಾನೆ. ಅನಂತರ, ಕೆಲಸ ಕಲಿತು ಬಾ ಎಂದು ನಯವಾಗಿಯೇ ಹೇಳುತ್ತಾರೆ.

"A Holy Place will soon be fitted" ಎಂಬ ಹೇಳಿಕೆಯಂತೆ ಸಾಹಿತ್ಯದ ಬುದೂಕೂ ಬೇಗ ತುಂಬಿಕೊಳ್ಳುತ್ತದೆ.

ಇದನ್ನು ತುಂಬಿಸಬೇಕು ಎಂಬುದಕ್ಕಾಗಿ ಕೇವಲ ಲೇಖಕರೇ ಇದನ್ನು ತುಂಬಿಸು ವುದಿಲ್ಲ–ಇಲ್ಲಿ ಹಾರೈಕೆಗಿಂತ ಸ್ವಲ್ಪ ಹೆಚ್ಚಿನ ಪ್ರಯತ್ನ ಬೇಕಾಗುತ್ತದೆ–ತಮ್ಮ ಸಂಸ್ಕೃತಿ, ತಮ್ಮ ಸಂತೋಷ ಹಾಗೂ ಕಮ್ಯೂನಿಸಂಗಾಗಿ ಹೋರಾಡುವ ಜನರೇ ಒಬ್ಬ ನಿಜವಾದ ಲೇಖಕನನ್ನು ತುಂಬುತ್ತಾರೆ.

ನಮ್ಮ ಕೃತಿಗಳ ಗುಣಮಟ್ಟ ಇಳಿಯುವುದಕ್ಕೆ ಇನ್ನೊಂದು ಕಾರಣವೇನೆಂದರೆ ದುರದೃಷ್ಟವಶಾತ್ ಇಂದಿನತನಕ ಉಳಿದುಕೊಂಡು ಬಂದಿರುವ ಸಾಹಿತ್ಯ ಕೃತಿಗಳಿಗೆ ಬಹುಮಾನ ಕೊಡುವ ವ್ಯವಸ್ಥೆ. ಕಾಮ್ರೇಡ್ ಒವೆಚ್‌ಕಿನ್ ಈ ಬಗ್ಗೆ ಬಹಳ ವಿಸ್ತಾರ ವಾಗಿ ಪ್ರಸ್ತಾಪಿಸಿದ್ದಾರೆ. ಇದಕ್ಕೆ ನಾನು ಇನ್ನಷ್ಟು ಸೇರಿಸುತ್ತೇನೆ ಅಷ್ಟೆ. ಪ್ರಾಮಾಣಿಕ ವಾಗಿ ಹೇಳುವುದಾದರೆ, ಸಾಹಿತ್ಯ ಕೃತಿಗಳನ್ನು ಹೀಗೆ, ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಗಗಳಾಗಿ ವಿಂಗಡಿಸುವ ವಿಧಾನ ಬೆಲೆಪಟ್ಟಿಯನ್ನು ನೆನಪಿಗೆ ತರುತ್ತದೆ.

ಇರಲಿ, ಈ ಬೆಲೆಪಟ್ಟಿಗೆ ಯೋಗ್ಯತೆ ಪಡೆಯದ ಕೃತಿಗಳ ಪಾಡೇನು? ಯಾವುದೇ ಬಹುಮಾನ ಗಳಿಸದ ಕೃತಿಗಳನ್ನು ಏನೆಂದು ಕರೆಯಬೇಕು ? ಇದೆಲ್ಲಾ ರದ್ದಿಯೆ ಅಥವಾ ಇನ್ನೇನು ? ಇದು ತೀರಾ ಅಸಂಗತ. ಲೇಖಕರ ಪಾಲಿಗಂತೂ ತೀರಾ ಕಹಿ ಫಲದ ಅನುಭವ, ಪ್ರತಿಭಾನ್ವಿತವಾದ, ವಿವೇಚನಾಶೀಲವಾದ ಅನೇಕ ಉತ್ತಮ ಕೃತಿ

ಗಳು ಯಾವುದೇ ಬಹುಮಾನ ಗಳಿಸದಿದ್ದರೂ ಬಹುಮಾನಿತ ಕೃತಿಗಳಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಬೇಡಿಕೆಯಲ್ಲಿವೆ ಎಂಬುದನ್ನು ಗಮನಿಸಿದಾಗ ಈ ವ್ಯವಸ್ಥೆ ಯಾವ ದೃಷ್ಟಿಯಿಂದಲೂ ಸರಿಯಲ್ಲವೆನಿಸುತ್ತದೆ.

ಈ ರೀತಿಯೂ ಆಗಬಹುದು – ಉದಾಹರಣೆಗೆ ಒಬ್ಬ ಲೇಖಕ ತಕ್ಕಮಟ್ಟಿಗೆ ಚೆನ್ನಾಗಿರುವ ಒಂದು ಕೃತಿ ರಚಿಸಿದ್ದಾನೆ ಎಂದುಕೊಳ್ಳಿ. ತನ್ನ ಸಾಮರ್ಥ್ಯದ ಬಗ್ಗೆ ಆತನಿಗೆ ಯಾವುದೇ ಭ್ರಮೆಗಳಿಲ್ಲ, ಅದು ಬಹಳ ಯಶಸ್ವಿಯಾಗುತ್ತದೆ ಎಂಬ ನಿರೀಕ್ಷಣೆಯೂ ಇಲ್ಲ. ತನ್ನ ಮುಂದಿನ ಕೃತಿ ಇದಕ್ಕಿಂತ ಚೆನ್ನಾಗಿರುತ್ತದೆ ಎಂದು ಆತ ಆಶಿಸುತ್ತಾನೆ. ಇದ್ದಕ್ಕಿದ್ದಂತೆ ಈ ಕೃತಿಗೆ ಬಹುಮಾನ ಸಿಕ್ಕಿಬಿಡುತ್ತದೆ, ಎರಡನೇ ಬಹುಮಾನವೇ ಇರಬಹುದು. ಬಹುಮಾನ ಕೊಟ್ಟವರಿಗೆ ಆತ ಪ್ರಾಮಾಣಿಕವಾಗಿ 'ಸೋದರರೆ ಇದೇನು ಮಾಡುತ್ತಿರುವಿರಿ ? ನನಗೆ ಬಹುಮಾನ ಬೇಡ, ನನ್ನ ಕೃತಿ ಅದಕ್ಕೆ ಅರ್ಹವಾಗಿಲ್ಲ' ಎಂದು ಹೇಳುತ್ತಾನೆ ಎಂದುಕೊಂಡಿರಾ ? ಇಲ್ಲ, ತಲೆ ಇರುವ ಯಾರೂ ಈ ಕೆಲಸ ಮಾಡುವುದಿಲ್ಲ. ಹೀಗಾಗಿ ಈ ಲೇಖಕ ಬಹುಮಾನವನ್ನು ಒಪ್ಪಿಕೊಳ್ಳುತ್ತಾನೆ, ಅಷ್ಟೇ ಅಲ್ಲ ಅದಕ್ಕೆ ಮುಂಚೆಯೇ ಆತ ತಾನೂ ಮತ್ತು ತನಗೆ ಬಹುಮಾನ ಕೊಟ್ಟವರೂ ಸಹ ಈ ಕೃತಿಯ ಯೋಗ್ಯತೆಯನ್ನು ಸರಿಯಾಗಿ ಅಳೆದಿಲ್ಲ, ವಾಸ್ತವವಾಗಿ ಇದಕ್ಕೆ ಮೊದಲ ಬಹುಮಾನವೇ ಬರಬೇಕಿತ್ತು ಎಂದು ಯೋಚಿಸಲು ಶುರು ಮಾಡಿರುತ್ತಾನೆ.

ಲೇಖಕರನ್ನೂ ಮತ್ತು ಓದುಗರನ್ನೂ ನಾವು ತಪ್ಪು ದಾರಿಗೆಳೆಯುವುದು ಹೀಗೆ —

ಈ ಬಗ್ಗೆ ಏನಾದರೊಂದು ನಿರ್ದಿಷ್ಟವಾಗಿ ಈ ಸಮಾವೇಶಕ್ಕೆ ತಿಳಿಸುವ ಧೈರ್ಯವನ್ನು ನಾನು ಮಾಡಲಾರೆ. ಒಂದು ವಿಷಯ ಮಾತ್ರ ಸ್ಪಷ್ಟ. ಸಾಹಿತ್ಯ ಮತ್ತು ಕಲೆಗೆ ಬಹುಮಾನ ಕೊಡುವ ವಿಷಯವನ್ನು ಮರುಪರಿಶೀಲಿಸಬೇಕು, ಈಗಿರುವ ಪದ್ಧತಿ ಪ್ರಯೋಜನವಿಲ್ಲ ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕು.

ಈ ವ್ಯವಸ್ಥೆ ಹೀಗೇ ಮುಂದುವರೆದರೆ ಚಿನ್ನಕ್ಕೂ ತಾಮ್ರಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದೇ ಅಸಾಧ್ಯವಾಗಬಹುದು. ದಿಕ್ಕುತಪ್ಪಿದ ಓದುಗ ಬಹುಮಾನಿತರ ಕೃತಿಗಳಿಂದ ತಾನೇ ಕಾಪಾಡಿಕೊಳ್ಳುತ್ತಾನೆ.

ಉನ್ನತ ಪ್ರಶಸ್ತಿಯನ್ನು ಬೇಕಾಬಿಟ್ಟಿಯಾಗಿ ಹಗುರಾಗಿ ಕೊಡುವುದು ಸರಿಯಲ್ಲ, ಹೀಗೆ ಮಾಡಿದ್ದೇ ಆದರೆ ಅದು ಉನ್ನತ ಪ್ರಶಸ್ತಿ ಎನಿಸಿಕೊಳ್ಳುವುದಿಲ್ಲ.

ಬಹುಮಾನ ಕೊಡುವ ಈಗಿನ ವ್ಯವಸ್ಥೆ ಹೀಗೇ ಮುಂದುವರೆದರೆ ಇನ್ನು ಹತ್ತು ಅಥವಾ ಹದಿನೈದು ವರ್ಷಗಳಲ್ಲಿ ನಮ್ಮ ಕೆಲವು ಪ್ರತಿಭಾವಂತರ ಗತಿ ಏನಾಗಬಹುದು? ಸ್ವಲ್ಪ ಯೋಚಿಸಿ. ನಾವೆಲ್ಲಾ ತುಂಬಾ ಇಷ್ಟಪಡುವ ಪ್ರಖರ ಪ್ರತಿಭೆಯ ಲೇಖಕಿಗೆ

(ಅಂದರೆ ಅಲ್ಲಾ ಕಾನ್‌ಸ್ಟಾಂಟಿನೋವ್ನಾ ಟರಸೊವಾ) ಅವಳು ಪಡೆದಿರುವ ಪದಕಗಳ ಭಾರದಿಂದಾಗಿ ಆಸರೆ ಇಲ್ಲದೆ ನಡೆಯುವುದೇ ಅಸಾಧ್ಯವಾಗಿಬಿಟ್ಟಿರುತ್ತದೆ. ಇನ್ನೂ ಆಕೆ ಪದಕಗಳನ್ನು ಪಡೆಯುತ್ತಲೇ ಇರುತ್ತಾಳೆ. ಇನ್ನು ಕಾಮ್ರೇಡ್ ಸಿಮೊನೊವ್ ಬಗ್ಗೆ ಹೇಳುವುದೇ ಬೇಡ. ಆತನ ಕವನ, ಸಣ್ಣಕಥೆ ಮುಂತಾದ ಸಣ್ಣಪುಟ್ಟ ಬರಹಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೂ ವರ್ಷಕ್ಕೆ ಆತ ಒಂದು ನಾಟಕ, ಕಾದಂಬರಿ, ಕಾವ್ಯ ಬರೆದಿರುತ್ತಾನೆ ಎಂದು ಕ್ಷೇಮವಾಗಿ ನಿರೀಕ್ಷಿಸೋಣ. ಇದನ್ನು ಪದಕಗಳಿಗೆ ಪರಿವರ್ತಿಸಿದರೆ ವರ್ಷಕ್ಕೆ 3 ಪದಕ ಎಂದಾಯಿತು. ಈಗಾಗಲೇ ಸಿಮೊನೊವ್ ಸಾಹಿತ್ಯ ಜಗತ್ತಿನ ಕಿರೀಟಧಾರಿ ರಾಜಕುಮಾರನ ಹಮ್ಮಿನಿಂದ ಈ ಸಭಾಂಗಣದಲ್ಲಿ ಓಡಾಡುತ್ತಿದ್ದಾನೆ. ಇನ್ನು ಹದಿನೈದು ವರ್ಷಗಳ ನಂತರ ಈ ಪ್ರಸಿದ್ಧಿ ಅವನನ್ನು ಎಷ್ಟು ತಿಂದುಹಾಕಿರುತ್ತೆ ಎಂದರೆ ಆ ಕಡೆ ಈ ಕಡೆ ಒಬ್ಬೊಬ್ಬರು ಹಿಡಿದುಕೊಂಡರೂ ಅವನಿಗೆ ನಡೆಯಲಿಕ್ಕಾಗುವುದಿಲ್ಲ. ಆತತನ್ನು ವೀಲ್‌ಚೇರಿನಲ್ಲಿ ತಳ್ಳಿಕೊಂಡು ಹೋಗಬೇಕಾಗುತ್ತದೆ.

ನಮ್ಮ ಬಹುಮಾನಿತರನೇಕರು ಈಗಾಗಲೇ ಭಯವಲ್ಲದಿದ್ದರೂ ಗಾಬರಿಯಂತೂ ಹುಟ್ಟಿಸುತ್ತಿದ್ದಾರೆ. ಇದು ಹೀಗೆ ಮುಂದುವರೆದರೆ ಏನಾಗಬಹುದು ?

ಅದೊಂದು ದಿನ ನಾಗರಿಕ ವೇಷಭೂಷಣದಲ್ಲಿದ್ದ ಒಬ್ಬ ವ್ಯಕ್ತಿಯನ್ನು ನೋಡಿದೆ. ಆತನ ಎದೆಯೆಲ್ಲ ಚಿನ್ನ ಮತ್ತು ಪದಕಗಳಿಂದ ಆವೃತವಾಗಿತ್ತು. ಇವಾನ್ ಪೊಡುಬ್ನಿ ಪುನರ್ಜನ್ಮ ತಾಳಿದನೆ ? ಎಂದು ಹೌಹಾರಿದೆ. ಆದರೆ ಆತನ ದೇಹ ಕುಸ್ತಿಪಟುವಿನದಂತಿರಲಿಲ್ಲ. ಅವನು ಸಿನಿಮಾ ನಿರ್ದೇಶಕನೋ ಕ್ಯಾಮರಾಮ್ಯಾನೊ ಏನೋ ಆಗಿದ್ದ ಎಂದು ತಿಳಿದುಬಂತು. ನಿಜಕ್ಕೂ ಇದು ದಿಕ್ಕೆಡಿಸುವ ನರಕ. ಬರಹಗಾರ ಸ್ನೇಹಿತರೆ, ನಾವು ನಮ್ಮ ಕೃತಿಗಳಿಂದ ಹೊಳೆಯೋಣ, ಪದಕಗಳಿಂದಲ್ಲ. ಪದಕ ಎನ್ನುವುದು ಗಳಿಸಿಕೊಂಡ ವಸ್ತು. ಕೃತಿ ಎನ್ನುವುದು ನಿಮ್ಮ ಸ್ವಂತದ ಒಂದುಳ ಕೂಸು.

ನಮ್ಮ ಅಲಿಖಿತ ಕಾನೂನಿನ ಬಗ್ಗೆ ಇರುವ ಸಹಜವಾದ ವಿನಯಶೀಲತೆ ಹಾಗೂ ಹಾಗೂ ವಿಧೇಯತೆಯು ಕಾರಣದಿಂದಾಗಿ ಕಾಮ್ರೇಡ್ ಸಿಮೊನೊವ್ ತನ್ನ ಬಗ್ಗೆ ಆತನ ವರದಿಯಲ್ಲಿ ಏನೂ ಹೇಳಿಲ್ಲ. ಈ ತೆರಪನ್ನು ತುಂಬಲು ನನಗೆ ಅವಕಾಶ ಕೊಡಿ.

ಕಾನ್‌ಸ್ಟಾಂಟಿನ್ ಸಿಮೊನೊವ್ ಸಾಹಿತ್ಯಕ್ಕೆ ಹೊಸಬನೇನೂ ಅಲ್ಲ. ಈತ ಸಾಕಷ್ಟು ಹಳಬ ಮತ್ತು ಅನುಭವೀ ಸಿಪಾಯಿ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಬಹಳಷ್ಟು ಬರೆದಿದ್ದಾನೆ. ಆದರೆ ಆತನ ಕೃತಿಗಳನ್ನು ಮತ್ತೊಮ್ಮೆ ಓದಿದಾಗ, ಇವುಗಳನ್ನು ರಚಿಸಿದ ಸಮಯದಲ್ಲಿ ಉನ್ನತವಾದ್ದನ್ನು ಸಾಧಿಸುವ ಗುರಿ ಆತನಿಗಿತ್ತೆ, ಎಂಬ ಸಂದೇಹ ನನ್ನಲ್ಲಿ ಹಾಗೇ ಉಳಿಯುತ್ತದೆ. ಇಷ್ಟಾಗಿಯೂ ಆತ ಪ್ರತಿಭಾವಂತ ಲೇಖಕ ಎಂಬುದು ನಿರ್ವಿವಾದ. ಆದರೆ ಕೃತಿಗಳಿಗೆ ತನ್ನ ಸತ್ವವನ್ನೆಲ್ಲಾ ಧಾರೆ ಎರೆಯುವಲ್ಲಿ ಆತ ತೋರಿಸಿರುವ ಅಮನಸ್ಕತೆ (ಇದು ಅಸಾಮರ್ಥ್ಯವಲ್ಲ, ಇವನ ವಿಷಯದಲ್ಲಿ

ಅಸಾಮರ್ಥ್ಯದ ಪ್ರಶ್ನೆಯೇ ಏಳದು) ಕಳವಳಕ್ಕೆ ಎಡೆಮಾಡಿಕೊಡುತ್ತದೆ. ಯುವ ಬರಹಗಾರರು ಸಿಮೋನೊವ್‌ನಿಂದ ಏನನ್ನು ಕಲಿಯಬಹುದು ? ಬಹುಶಃ ಬರೇ ವೇಗ ಮತ್ತು ಒಬ್ಬ ಬರಹಗಾರನಿಗೆ ಅಷ್ಟೇನೂ ಅಗತ್ಯವಲ್ಲದ ವ್ಯವಹಾರ ಚಾತುರ್ಯ ಪ್ರವೃತ್ತಿ. ಒಬ್ಬ ದೊಡ್ಡ ಬರಹಗಾರನಿಗೆ ಇದಿಷ್ಟೆ ಸಾಮರ್ಥ್ಯ ಸಾಕಾಗುವುದಿಲ್ಲ ಎಂದು ಮುಚ್ಚುಮರೆ ಇಲ್ಲದೆ ಹೇಳುತ್ತೇನೆ. ಆತನ ಕೊನೆಯ ಕೃತಿ ವಿಶೇಷವಾಗಿ ನನ್ನನ್ನು ಚಿಂತೆಗೀಡುಮಾಡಿದೆ. ಮೇಲ್ನೋಟಕ್ಕೆ ಅದರಲ್ಲಿ ಎಲ್ಲವೂ ಸರಿಯಾಗಿದೆ. ಪ್ರತಿಯೊಂದೂ ಅದರದರ ಸ್ಥಾನದಲ್ಲಿದೆ. ಆದರೆ ಆ ಕೃತಿಯನ್ನು ಓದಿ ಮುಗಿಸಿದಾಗ ಹಸಿವಿನಿಂದ ಬಳಲಿದ ವ್ಯಕ್ತಿಯನ್ನು ಊತಣಕ್ಕೆ ಕರೆದು, ಅವನ ಹಸಿವು ಕೂಡ ಇಂಗಿಸದಷ್ಟು ಪ್ರಮಾಣದಲ್ಲಿ ನೀರಲ್ಲಿ ನೆನೆಸಿದ ಬ್ರೆಡ್ ಕೊಟ್ಟಂತೆ ನಿಮಗನ್ನಿಸುತ್ತದೆ. ನಿಮಗೆ ನಿರಾಶೆ, ಹಸಿವು ಮತ್ತು ಅತಿಥೇಯನ ಜಿಪುಣತನದ ಬಗ್ಗೆ ಖಂಡಿತ ಕೋಪ ಬರುತ್ತದೆ.

ಕಾಮ್ರೇಡ್ ಸಿಮೋನೊವ್ ಅನೇಕ ವರ್ಷಗಳಿಂದ ಬರೆಯುತ್ತಿದ್ದಾನೆ. ಆತ ತನ್ನ ಬರವಣಿಗೆಯ ಸಿಂಹಾವಲೋಕನ ಮಾಡಿ, ಒಂದಾನೊಂದು ದಿನ ಒಬ್ಬ ಚಿಕ್ಕ ಹುಡುಗ ತನ್ನೆಡೆಗೆ ಬೆರಳು ತೋರಿ "ಈ ರಾಜ ಏಕೆ ಬೆತ್ತಲಾಗಿದ್ದಾನೆ" ಎಂದು ಹೇಳುವ ದಿನ ಬರಬಹುದೆಂದು ಯೋಚಿಸುವುದಕ್ಕೆ ಇದು ಸರಿಯಾದ ಕಾಲ. ಕಾನ್‌ಸ್ಟಾಂಟಿನ್ ಮಿಕಾಯಿಯಲೊವಿಚ್ (ಅಂದರೆ ಸಿಮೋನೊವ್), ನಾವು ನಿನ್ನ ಬೆತ್ತಲನ್ನು ನೋಡಲು ಇಷ್ಟಪಡುವುದಿಲ್ಲ. ಆದ್ದರಿಂದ ನಾವು ಕೊಡುತ್ತಿರುವ ಸ್ನೇಹಪೂರ್ಣ ಸಲಹೆಯನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಸ್ವೀಕರಿಸು. ಹೂಂ ಬೇಗ, ಇನ್ನಷ್ಟು ಬಟ್ಟೆ ಹಾಕಿಕೊ, ಅವು ಎಂದಿಗೂ ಹರಿಯದಂಥವಾದರೆ ಇನ್ನೂ ಒಳ್ಳೆಯದು.

ನಾವೆಲ್ಲಾ ಹಳೆಯ ಸ್ನೇಹಿತರು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಇಲ್ಲಿ ಎಹ್ರೆನ್‌ಬರ್ಗ್ ಬಗ್ಗೆಯೂ ಹೇಳಬೇಕು. ಯೋಚನೆ ಮಾಡಬೇಡಿ, ಪುನಃ ನಾನು ಬರವಣಿಗೆಯ ಪ್ರಶ್ನೆಯ ಬಗ್ಗೆ ವಾದ ಮಾಡುವುದಿಲ್ಲ. ವಾದಕ್ಕೆ ತೀವ್ರ ಪ್ರತಿವಾದ ಹೂಡುವವರ ಎದುರು ವಾದ ಮಾಡುವುದೇನೋ ಸರಿ. ಆದರೆ ಎಹ್ರೆನ್‌ಬರ್ಗ್ ಸ್ವಲ್ಪ ಟೀಕೆಗೂ ಮುದುಡಿಬಿಡುತ್ತಾನೆ. ಈ ಟೀಕೆ ತನ್ನನ್ನು ಬರವಣಿಗೆಯಿಂದಲೇ ದೂರ ಮಾಡುತ್ತದೆ ಎನ್ನುತ್ತಾನೆ. ನೀವು ಮುಟ್ಟುತ್ತಿದ್ದಂತೆಯೇ ನಿಮ್ಮ ಎದುರಾಳಿಯು, ನಾನು ವಯಸ್ಸಾದವನು ಎಂದು ತನ್ನ ವೃದ್ಧಾಪ್ಯವನ್ನು ಮುಂದಿಟ್ಟು ನೀವು ಅನುಕಂಪ ಪಡುವಂತೆ ಮಾಡಿದರೆ ಅದೆಂತಹ ಹೋರಾಟ ಸಾಧ್ಯ ? ಇಲ್ಲ, ಕೆಳಗೆ ಬಿದ್ದ ಮನುಷ್ಯನನ್ನು ನಾವು ಹೊಡೆಯುವುದಿಲ್ಲ. ಅದು ನಮ್ಮ ರೀತಿಯಲ್ಲಿ ಎಹ್ರೆನ್‌ಬರ್ಗ್‌ನನ್ನು ಬರವಣಿಗೆಯಿಂದಲೇ ದೂರಮಾಡುವುದು ನನಗಿಷ್ಟವಿಲ್ಲ. ಶಾಂತಿಗಾಗಿ ನಾವು ಮಾಡುತ್ತಿರುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಆತ ಬಹು ದೊಡ್ಡ ಹಾಗೂ ಉಪಯುಕ್ತ ಕೆಲಸ ಮಾಡುತ್ತಿದ್ದಾನೆ. ಆದರೆ ನಾವು ಆತನನ್ನು ಬರಹಗಾರ

ನಾಗಿ ಟೀಕಿಸುತ್ತೇವೆಯೋ ಹೊರತು ಶಾಂತಿಯು ಹೋರಾಟಗಾರನಾಗಿಯಲ್ಲ. ಹಾಗೆ ಟೀಕಿಸುವುದು ನಮ್ಮ ಹಕ್ಕೂ ಕೂಡ. ಉದಾಹರಣೆಗೆ ಸಿಮೊನೊವ್ The Thaw ಬಗ್ಗೆ ಬರೆದ ಲೇಖನಕ್ಕೆ ಎಹ್ರೆನ್‌ಬರ್ಗ್ ಕಿರಿಕಿರಿಗೊಂಡ. ಆತ ಹೀಗೆ ಮಾಡಿದ್ದು ಸರಿಯಲ್ಲ. ಏಕೆಂದರೆ ಒಂದುವೇಳೆ ಸಿಮೊನೊವ್ ಸರಿಯಾಗಿ ಬರೆದಿಲ್ಲವಾದರೆ ಇನ್ನೊಬ್ಬ ವಿಮರ್ಶಕ The Thaw ಬಗ್ಗೆ ಬೇರೆಯೇ ರೀತಿಯಲ್ಲಿ ಬರೆಯಬಹುದಿತ್ತು. ವಾಸ್ತವವಾಗಿ ಸಿಮೊನೊವ್ ಅವನನ್ನು ಕಟುವಿಮರ್ಶೆಯಿಂದ ಪಾರುಮಾಡಿದ್ದಾನೆಂದೇ ಹೇಳಬೇಕು. ಇಷ್ಟಾಗಿಯೂ ಎಹ್ರೆನ್‌ಬರ್ಗ್ ತನಗೆ ಅನ್ಯಾಯವಾಯಿತು ಎಂದು ಭಾವಿಸಿದ್ದಾನೆ. ಈ ಸಮಾವೇಶದಲ್ಲಿ ಆ ದಿನ ಎಹ್ರೆನ್‌ಬರ್ಗ್‌ನೇ ಎಲ್ಲ ಲೇಖಕರ ಮೇಲೂ ಹೊರಿಸಿದ "ಅತಿ ಸೂಕ್ಷ್ಮಜ್ಞತೆ"ಯಿಂದಲೇ ಈ ಪ್ರಕ್ರಿಯೆಯನ್ನು ವಿವರಿಸಬೇಕಷ್ಟೆ.

ಎಹ್ರೆನ್‌ಬರ್ಗ್ ಮತ್ತು ಸಿಮೊನೊವ್ ನಡುವೆ ವಿನಿಮಯವಾಗುತ್ತಿರುವ ಈ ದೊಡ್ಡ ದೊಡ್ಡ ಪದಗಳಿಗೆ ನಾವು ತೀರಾ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅದೆಲ್ಲ ತಾನೇ ಸರಿಹೋಗುತ್ತದೆ.

ಕಾಮ್ರೇಡ್ ಎಹ್ರೆನ್‌ಬರ್ಗ್‌ನೊಂದಿಗೆ ನಾನು ಚರ್ಚಿಸಬಯಸುವ ಇನ್ನೊಂದೇ ಒಂದು ವಿಷಯವಿದೆ. "ನಾನು ಇನ್ನೂ ಒಂದು ಕೃತಿಯನ್ನು ರಚಿಸುವುದು ಸಾಧ್ಯವಾದರೆ ಅದು ನನ್ನ ಹಿಂದಿನ ಕೃತಿಗಿಂತ ಒಂದು ಹೆಜ್ಜೆ ಉತ್ತಮವಾಗಿರುವಂತೆ ಪ್ರಯತ್ನಿಸುತ್ತೇನೆ" ಎಂದು ಆತ ತನ್ನ ಭಾಷಣದಲ್ಲಿ ಹೇಳಿದ್ದಾನೆ. ಇಲ್ಲಿ ಹಿಂದಿನ ಕೃತಿ ಎಂದರೆ The Thaw. ಈ ಕೃತಿಯನ್ನು The Storm ಮತ್ತು The Decuman Waveನೊಂದಿಗೆ ಹೋಲಿಸಿದಾಗ ಅದು ನಿಸ್ಸಂದೇಹವಾಗಿ ಒಂದು ಹೆಜ್ಜೆ ಹಿಂದಿದೆ. ಈಗ ಒಂದು ಹೆಜ್ಜೆ ಮುಂದಿಡುವುದಾಗಿ ಎಹ್ರೆನ್‌ಬರ್ಗ್ ಮಾತುಕೊಟ್ಟಿದ್ದಾನೆ. ಬೇರೆ ಭಾಷೆಗಳಲ್ಲಿ ಈ ನೃತ್ಯದ ಹೆಜ್ಜೆಗಳನ್ನು ಏನೆಂದು ಕರೆಯುತ್ತಾರೋ ನನಗೆ ಗೊತ್ತಿಲ್ಲ. ಆದರೆ ರಶಿಯನ್ ಭಾಷೆಯಲ್ಲಿ ಅವುಗಳನ್ನು Shuffling (ಕಲಸುಮೇಲಸು) ಎಂದು ಕರೆಯುತ್ತಾರೆ. ಆದ್ದರಿಂದ ಈ ಬಗ್ಗೆ ಯೋಚಿಸಿದರೆ "ಇಲ್ಯಾ ಗ್ರಿಗೊರಿವಿಚ್ (ಎಹ್ರೆನ್‌ಬರ್ಗ್) ನೀವು ಹೆಚ್ಚೇನೂ ಕೊಟ್ಟಂತಾಗಲಿಲ್ಲ."

ನಮ್ಮ ಬಗ್ಗೆ ಮತ್ಸರಿಸುವ ವಿದೇಶೀ ವೈರಿ ಬರಹಗಾರರು, ನಾವು ಅಂದರೆ ಸೋವಿಯತ್ ಲೇಖಕರು, ಪಕ್ಷದ ಆಜ್ಞಾನುವರ್ತಿಯಾಗಿ ಬರೆಯುತ್ತೇವೆಂದು ಆಪಾದಿಸುತ್ತಾರೆ. ವಸ್ತುಸ್ಥಿತಿ ಹೀಗಿಲ್ಲ. ನಾವೆಲ್ಲರೂ ನಮ್ಮ ನಮ್ಮ ಎದೆಯ ದನಿಗೆ ಕಿವಿಗೊಟ್ಟು ಬರೆಯುತ್ತೇವೆ. ನಮ್ಮ ಹೃದಯ, ಪಕ್ಷಕ್ಕೆ ಮತ್ತು ನಮ್ಮ ಜನತೆಗೆ ಸೇರಿದ್ದು. ಅವರಿಗೆ ನಮ್ಮ ಕಲೆಯ ಮೂಲಕ ಸೇವೆ ಸಲ್ಲಿಸುತ್ತೇವೆ.

ಹೌದು, ಕೆಲವೊಮ್ಮೆ ನಾವು ಪರಸ್ಪರ ಅನಾವಶ್ಯಕವಾಗಿ ರೂಕ್ಷವಾಗಿ ನಡೆದುಕೊಳ್ಳುತ್ತೇವೆ. ಕೆಲವೊಮ್ಮೆ ನಮ್ಮ ಕೃತಿಗಳ ಬಗ್ಗೆ ಬರುವ ಅಭಿಪ್ರಾಯಗಳನ್ನು ಸಹಿ

ಸುವುದೇ ಇಲ್ಲ. ಆದರೆ, ನಾವು ಖಂಡಿತವಾಗಿಯೂ ದ್ವೇಷ, ಸೊಕ್ಕು ಅಥವಾ ದುರಾಸೆಯಿಂದ ಪ್ರೇರಿತರಾಗುವುದಿಲ್ಲ. ಕಮ್ಯುನಿಸಮ್‌ನ ತತ್ವಕ್ಕನುಗುಣವಾಗಿ ಜನಸಾಮಾನ್ಯರನ್ನು ಇನ್ನೂ ಹೆಚ್ಚು ಶಿಕ್ಷಿತರನ್ನಾಗಿ ಮಾಡುವ ಪಕ್ಷದ ಉದ್ದೇಶಕ್ಕೆ ನಮ್ಮ ಸಾಹಿತ್ಯ ಹೆಚ್ಚು ಸಹಾಯಕವಾಗಲಿ ಎಂಬ ಬಯಕೆ ಮತ್ತು ನಮ್ಮ ಮಹಾನ್‌ವ್ಯಕ್ತಿಗಳ ಹಾಗೂ ನಮ್ಮ ದೇಶದ ಮಹಾನ್ ಸಾಹಿತ್ಯಿಕ ಪರಂಪರೆಯ ನ್ಯಾಯಸಮ್ಮತ ಉತ್ತರಾಧಿಕಾರಿಗಳಾಗಿರುವ ನಾವು ಅದಕ್ಕೆ ಯೋಗ್ಯವಾದ್ದನ್ನು ನೀಡಬೇಕೆಂಬುದೇ ನಮ್ಮನ್ನು ಪ್ರೇರೇಪಿಸುವ ಅಂಶ.

ನಿಮ್ಮೆಲ್ಲರಿಗೂ ಹೊಸ ಸೃಜನಶೀಲ ಯಶಸ್ಸು ಲಭಿಸಲಿ ಹಾಗೂ ಪ್ರತಿಯೊಬ್ಬ ಕಾರ್ಮಿಕನಿಗೂ ಗೊತ್ತಿರುವಂಥ – 'ಒಳ್ಳೆಯ ಕೆಲಸವನ್ನು ಚೆನ್ನಾಗಿ ಮಾಡಿದೆ' ಎಂಬ ತೃಪ್ತಿಯಿಂದ ಮೂಡುವಂತಹ ಆನಂದ ನಿಮ್ಮೆಲ್ಲರಿಗೂ ತಿಳಿಯುವಂತಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಅನುವಾದ : ಡಾ॥ ಕೆ. ಆರ್. ಸಂಧ್ಯಾರೆಡ್ಡಿ

(ಮಿಖಾಯಿಲ್ ಶೊಲೊಕೊವ್ – 1965ರ ನೊಬೆಲ್ ಪ್ರಶಸ್ತಿ ಪಡೆದ ರಷಿಯನ್ ಲೇಖಕ)

ಮೈತ್ರೇಯನ ಮನೆಯ ಮಾವಿನೆಲೆ

ಶಬ್ದಗಳ ಮನೆಯಿಂದ ನಿಶಬ್ದದ ಮನೆಗೆ
ಓಡಿ ಬಂದಾಗ ಸ್ವಾಗತಿಸಿತು ಬುದ್ಧನ ಮುಗುಳು ಮೆಲ್ಲಗೆ
ಅಂಜಿಕೆ ಮತ್ತು ದುಗುಡಗಳಿಂದ
ಕೇಳಿದೆ ಬೋಧಿಸತ್ವ ಮೈತ್ರೇಯನ ನಾ–

ನಿಲ್ಲಿ ಕುಳಿರಲೆ ಎದೆ ಡವಗು
ಕುಡಿಯಲೆ ತಾಳಲಾರದ ಹಸಿವೆ ಈ ಹಣ್ಣು
ತಿನ್ನಲೆ – ಒಂದೆ ಉಸಿರಲೆ. "ಧಾರಾಳ"-ವೆಂದು
ಕಣ್ಣುಮುಚ್ಚಿ ತಲೆತೂಗಿ ನಕ್ಕ ಮುಗುಳು.

ಸುಖದ ಉಸಿರೆಳೆದು ಕೃತಜ್ಞತೆಯಿಂದ
ಮೈತ್ರೇಯನೆಡೆ ನೋಡಿದೆ. ಮಾವಿನ
ತಳಿರನ್ನು ಸಂಸ್ಪರ್ಶಿಸುತ ಗಲ್ಲದಿ
ಮುಂದ್ದಿಸುತ್ತಿದ್ದ ಕಣ್ರೆಪ್ಪೆಯಲಿ.

ಕೆ. ಪಿ. ಮೃತ್ಯುಂಜಯ, ಕಳ್ಳಂಬೆಳ-572221, ತುಮಕೂರು ಜಿಲ್ಲೆ

ಹೇಳಿಬಿಡಲಾ ಎಲ್ಲಾ ತೋಡಿಕೊಳಲಾ
ನಾ ಗೈದದ್ದು ಸರಿಯೇ ಎನಲಾ
ಹೇಗೆ ಹೇಳಲಿ ನಾನು ಹೇಗೆ ತೋಡಿಕೊಳಲಿ
ಹೇಳಲಾರೆನು ಅಯ್ಯೋ ಹೇಳದೆ ಹೇಗೆ ಇರಲಿ –

ಹೊಯ್ದಾಟದಲಿ ತತ್ತರಿಸುತಿರಲಾಗಿ
ಮೈತ್ರೇಯು ಸಂತವಿಸುವ ನೋಟ ಬೀರಿ
ಸಮಾಧಾನಿಯಾಗಿಸಿದ. ತಾಳುವಿಕೆ ಬಂದ
ಮೇಲೆ ಕಣ್ಸನ್ನೆ ಮಾಡಿ ಹೇಳು ಎಂದ.

ಒಂದೊಂದೆ ಎಳೆಬಿಚ್ಚಿ ಹೇಳುತ ಹೋದೆ –
ಕರ್ತವ್ಯಚ್ಯುತಿಗೈದ ಹತ್ತು ತಾಯಿ–ತಂದೆಗೆ
ನೋವು ತಂದೆ. ಅಣ್ಣ-ಅಕ್ಕರ ಮಮತೆಗೆ ಧಕ್ಕೆ ತಂದೆ.
ಇಷ್ಟರಿಗೆ ಆಪ್ತ ಗೆಳತಿಗೆ ದುಃಖ ತಂದೆ. ತಂದೆಯೇ –

"ಕೆಟ್ಟವುಗೆ ಕೆಳೆಯಿಲ್ಲ" – ಎಂದೂ
ಎಲ್ಲೆಲ್ಲು ಇಳೆಯಲ್ಲಿ. ಎಂದೇ
ಇನ್ನಿರಬಾರದೆಂದು–ಆತ್ಮಹತ್ಯೆಯು ಗೈದು
ಓಡೋಡಿ ಓಡೋಡಿ ಇಲ್ಲಿ ಬಂದೆ.

ಹೇಳು ತಂದೆ ನಾ ಗೈದದ್ದು ಸರಿಯು ತಪ್ಪೆ ?
ಇರಬಹುದು ಹುಟ್ಟು ಪಿತ್ರಾರ್ಜಿತ ಆದರೆ ಸಾವು ?
– ಸ್ವಯಾರ್ಜಿತವಲ್ಲವೆ ?
ಇಂಥ ಹುಟ್ಟು-ಸಾವಿನ ನಡುವೆ ಹೇಗೆ ಬದುಕು ?

ಬೋಧಿಸತ್ವ ಮೈತ್ರೇಯುನ ಕಣ್ಣುಗಳಲ್ಲಿ
ವಿಷಾದವೊ ವಿಸ್ಮಯವೊ ವಿನೋದವೊ
ಅಜ್ಞಾನದ ನೋವೊ ಅರಿವಿನ ನಲಿವೊ
ಏನೊಂದೂ ಅರ್ಥವಾಗದೆ ನಗುವಿನಲ್ಲಿ
ಅವನ ಮನೆಬಾಗಿಲಿನ ತೋರಣದಲ್ಲಿ
ಮಾವಿನೆಲೆಯಾಗಿ ನೆಲೆಯಾಗಿ
ಗೆಲವಾದೆ ಮೃದುಲ ಗಲ್ಲಕ್ಕೆ
ನಲಿವಾದೆ ಕಣ್ಣೆವೆಯು ಪರುಷಕ್ಕೆ.

— ಕೆ. ಪಿ. ಮೃತ್ಯುಂಜಯ

ಸ್ವಭಾವ

ಕಳೆದ ಬದುಕಿನ ಲೆಕ್ಕ ಹಾಕುತ್ತ, ದೇಕುತ್ತ
ದಾರ ಪೋಣಿಸುತ್ತಿತ್ತು ಕಪ್ಪೆ
ಬರುವನೋ ಇಲ್ಲವೋ ಪಕ್ಕದೂರಿನ ಕಪ್ಪೆ
ಗಡುವು ದಾಟಿದೆಯಲ್ಲ ಮತ್ತೆ

ಎಷ್ಟು ದಿನ ಸಂತೆಯಲಿ ಚಿಟ್ಟೆಯೂಟದ ಮುದ್ದೆ
ಗೆದ್ದಲುಪ್ಪಿನಕಾಯಿ ಮಿಡತೆ
ಕೂಡಿ ಆಡಿದ್ದೆಷ್ಟು ಶತ್ರುಗಳ ಕೋಟೆಯಲಿ
ಉಳಿದದ್ದು ಇಬ್ಬರೇ ಅಷ್ಟೆ

ಆ ಊರಲೆಷ್ಟು ಸುಖ, ಎಷ್ಟು ಬದಲಾಗಿರುವ
ಎಷ್ಟು ಬಗೆ ಕೀಟಗಳ ಸಂತೆ
ಹಾವಿಲ್ಲ, ಬೆಕ್ಕಿಲ್ಲ, ಹುಲಿಯಿಲ್ಲ, ನರಿಯಿಲ್ಲ
ಮನುಜನೊಬ್ಬನೆ ಶತ್ರುವಂತೆ

ಹೀಗಿತ್ತು, ಹಾಗಿತ್ತು, ಬೆಂದಿತ್ತು, ನೆಂದಿತ್ತು
ಬಣ್ಣ ಬಣ್ಣದ ಅನ್ನವಂತೆ
ವರದಿಗೇ ಬಾಯಲ್ಲಿ ಜೊಲ್ಲು ಸುರಿಸುತಲಿದ್ದೆ
ಬಚ್ಚಲೆಂದರೆ ಸ್ವರ್ಗವಂತೆ

ಈ ಊರಲೇ ಏಕೆ ನಾನು ಕೊಳೆಯುತಿರುವೆ
ಪಕ್ಕದಲ್ಲೇ ಗಬ್ಬು ತಿಪ್ಪೆ
ಮುದ್ದೆ ಬಿಟ್ಟರೆ ಇಲ್ಲಿ ಬೇರೇನು ಗತಿಯಿಲ್ಲ
ಯಾವ ಹದ್ದಿಗೊ ಮೀಸಲಷ್ಟೆ

ನಿರ್ಧರಿಸಿ ಆಗಿತ್ತು, ದಾರವೂ ಮುಗಿದಿತ್ತು
ಸಿದ್ದವೋ ಪಯಣಕ್ಕೆ ಕಂತೆ
ವಿಧ ವಿಧದ ಚಿತ್ರಗಳು, ಕನಸುಗಳು ಸರಿದಿತ್ತು
ದಾರಿ ಸಾಗಿತು ಮುಂದೆ ಮುಂದೆ,

o o o

ಕಣಿವೆ ದಾಟಿದ ಒಡನೆ ಬೆಟ್ಟವೇರಲುಬೇಕು
ಕಾಣುವುದೆ ಅವನಿರುವ ಊರು

ಸ್ವಾಮಿನಾಥ, C/o ಎಂ.ಎಸ್. ಸೂರ್ಯನಾರಾಯಣ, ನಂ. 22/33, ಸರ್ವೇಯರ್ ರಸ್ತೆ,
ಬಸವನಗುಡಿ, ಬೆಂಗಳೂರು-560 004

ಮರೆತು ಹೋಗಿರಬಹುದೆ, ನನ್ನ ಗುರುತಿಸಬಹುದೆ
ಕೆಟ್ಟದಾಗಿದೆ ನನ್ನ ತೀರು
ಹಾಳು ಉಬ್ಬುಸವೊಂದು ಉಸಿರು ಕಟ್ಟುವುದೇಕೊ
ಬೆಟ್ಟವೇಕಿರಬೇಕು ಇಲ್ಲಿ ?
ನೀರಾದರಿದ್ದರೂ ಕೊಂಚ ತಣಿಯಲುಬಹುದು
ಈಜುವುದು ಎಷ್ಟೊಂದು ಹಾಯಿ
ಅರೆರೆ ! ತಾಳಿರಿ ಮತ್ತೆ ಅಲ್ಲಿ ಬರುವವರಾರು ?
ತೊಡರಿತೇ ಹುಡುಕುತಿಹ ಬಳ್ಳಿ ?
ಇನ್ನು ಬೇಸರವೇಕೆ ? ಬಂದೆಯಾ ಬಾರಯ್ಯ
ಮರೆತುಬಿಟ್ಟೆನು ನನ್ನ ಹಳ್ಳಿ
ಇಷ್ಟೇಕೆ ಬೇಸರವೊ ? ಅಷ್ಟೊಂದು ಹೊಗಳಿದ್ದೆ
ನಾನೂನು ನಿನ್ನಂತೆ ಬಂದೆ
ನನ್ನ ಊರಿಗೆ ನೀನು, ನಿನ್ನ ಊರಿಗೆ ನಾನು
ಬೊಗಳೆ ಹೊಡೆಯುವುದನ್ನು ಬಿಟ್ಟೆ
ಹಾಗಲ್ಲವೆಲೊ ಪೆದ್ದೆ, ದೂರ ಶಿಶಿರದ ನಿದ್ದೆ
ಯಾಮಾರಿಸುವೇಕೆ ನನ್ನ
ತೋರಿಸಲೆ ನಿಮ್ಮೂರು ನಾನು ನೋಡಲಿಬೇಕು
ಏರಿ ನೋಡುವೆ ನಿನ್ನ ಬೆನ್ನು
ತನ್ನೂರ ಕಡೆ ಕಣ್ಣು ಮುಂದೂರ ಕಡೆ ಮೂಲೆ
ಕಾಣುವುದು ಏನಮ್ಮ ತಾಯಿ ?
ನೋಡಿಯೇ ಸೋಡಿದವು ತಮ್ಮೂರು ಮತ್ತೊಮ್ಮೆ
ಒಡೆದ ಹಲಸಿದು ತುಂಬ ಕಾಯಿ
ನಿಮ್ಮೂರು ನಮ್ಮಂತೆ, ನಮ್ಮೂರು ನಿಮ್ಮಂತೆ
ಕತ್ತಲಿಟ್ಟಿತು ನನ್ನ ಕಣ್ಣು
ನಮ್ಮೂರಲಿದ್ದುದೇ ನಿಮ್ಮೂರಲಿದ್ದರೆ
ಪಯಣವೆಲ್ಲವು ವ್ಯರ್ಥ ಮಣ್ಣು
ಕೊಂಚವೇ ಬೈಯ್ದಾಡಿ, ಮತ್ತೆ ಕುಶಲವ ಹೇಳಿ
ಹಿಡಿದು ಹೊರಟಿವು ತಮ್ಮ ದಾರಿ
ಚಿಕ್ಕಿ ಆಗಸದಲ್ಲಿ ಎಷ್ಟು ನಗುತಿರಬಹುದು
ನೀವೂನು ಅವುಗಳಿಗೆ ಹೇಳಿ.

— ಸ್ವಾಮಿನಾಥ

ಮಾಸ್ತಿಯವರ ಸಣ್ಣ ಕತೆಗಳು

— ಮಾಧವ ಕುಲಕರ್ಣಿ

ಮಾಸ್ತಿಯವರ ಸಣ್ಣ ಕತೆಗಳ ಮೇಲೆ ಕನ್ನಡದಲ್ಲಿ ಈಗಾಗಲೇ ತಕ್ಕಮಟ್ಟಿಗೆ ಅರ್ಥಪೂರ್ಣವಾದ ವಿಮರ್ಶೆಯು ಮೂಡಿಬಂದಿದೆ. 'ಮಾಸ್ತಿ ಕನ್ನಡದ ಆಸ್ತಿ' ಎಂಬ ಜನಪ್ರಿಯ ಉಕ್ತಿಯಿಂದ ಹಿಡಿದು, ಮಾಸ್ತಿಯವರ ಕತೆಗಳ ಸಮಗ್ರ ಪ್ರಕಟಣೆಯವರೆಗೆ ಅವರ ಮತ್ತು ಅವರ ಕೃತಿಗಳ ಬಗ್ಗೆ ಜನರು ಆಸಕ್ತಿಯನ್ನು ತೋರಿದ್ದಾರೆ. ಅವರ ಕೃತಿಗಳು ಮೊದಲಿನಿಂದಲೂ ವಿಮರ್ಶೆಗೆ ತೆರೆದುಕೊಂಡೇ ಇವೆ. ಐತಿಹಾಸಿಕವಾಗಿ ಅವರು ಸಣ್ಣಕತೆಯ ಜನಕರಲ್ಲದಿದ್ದರೂ, ಕನ್ನಡದ ಸಣ್ಣಕತೆ ಮತ್ತು ಗದ್ಯಕ್ಕೆ ಖಚಿತತೆಯ ರೂಪುರೇಷೆಗಳನ್ನು ಕೊಡುವ ಪ್ರಥಮ ರೂವಾರಿಯ ಕೆಲಸವನ್ನು ಅವರು ಅರ್ಥಪೂರ್ಣವಾಗಿ ನಿರ್ವಹಿಸಿದರು.

ಸಾಹಿತ್ಯ ಕೃತಿಗಳ ಅರ್ಥಪೂರ್ಣತೆಯು ಆ ಕೃತಿಯು ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು ರೂಪಿಸುವ ಮತ್ತು ಕೆಲವೊಮ್ಮೆ ಬದಲಾಯಿಸುವುದರ ಮೇಲೆಯೂ ಅವಲಂಬಿಸಿರುತ್ತದೆ. ಹಾಗೆಯೇ ಹೊಸದರ ಅರ್ಥಪೂರ್ಣತೆಯಲ್ಲಿ ಹಳೆಯದನ್ನು ಮತ್ತೊಮ್ಮೆ ತೂಗಿನೋಡುವ ಮತ್ತು ಇದುವರೆಗೆ ಗೌಪ್ಯವಾಗಿ ಉಳಿದಿದ್ದ ಕೆಲವು ಆಯಾಮಗಳನ್ನು ಕೃತಿಗಳಲ್ಲಿ ನಿಖರವಾಗಿ ಗುರುತಿಸುವ ಕಾರ್ಯ ಕೂಡ ವಿಮರ್ಶೆಯಲ್ಲಿ ನಿರಂತರವಾಗಿ ನಡೆಯುತ್ತದೆ ಮತ್ತು ನಡೆಯಬೇಕು. ಈ ಅರ್ಥದಲ್ಲಿ ಯಾವುದೇ ಲೇಖಕನ ಸಾಹಿತ್ಯವು ಯಾವುದೇ ಕಾಲದಲ್ಲಿಯೂ 'ರಕ್ಷಿತ ಸಾಹಿತ್ಯ'ವಾಗಿ ಉಳಿಯುವ ಸಾಧ್ಯತೆಗಳಿಲ್ಲ. ಅಕಸ್ಮಾತ್ತಾಗಿ ಒಬ್ಬ ಸಾಹಿತಿಯು ತನ್ನ ಜೀವಿತಕಾಲದಲ್ಲಿ ತನ್ನ ಸಾಹಿತ್ಯಕ್ಕೆ 'ರಕ್ಷಿತ ಸಾಹಿತ್ಯ'ದ ಸ್ಥಾನಮಾನಗಳನ್ನು ದೊರಕಿಸುವಲ್ಲಿ ಸಾಹಿತ್ಯೇತರ ಸಲಕರಣೆಗಳನ್ನು ಬಳಸಿದರೆ ಅಂಥ ಸಾಹಿತಿಯು ಎರಡು ಬಹುದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ ಆತನು ಸಾಹಿತ್ಯದ ಸಾರ್ವತ್ರಿಕತೆಯ ಅನೂಹ್ಯ ಮತ್ತು ತ್ರಿಕಾಲಾಬಾಧಿತ ಸತ್ಯದಿಂದ ವಂಚಿತನಾಗುತ್ತಾನೆ ಮತ್ತು ಈ ಕಾರಣದಿಂದಾಗಿಯೇ ತನ್ನ ಕೃತಿಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸಲಾರದವನಾಗುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ಮಾಸ್ತಿಯವರ ಸಣ್ಣಕತೆಗಳ ಪುನರ್ ಮೌಲೀಕರಣ ಆಗುವ ಅವಶ್ಯಕತೆ ಇದೆ ಎನ್ನಿಸುತ್ತದೆ. ನವ್ಯ ಸಾಹಿತ್ಯದ ಪರಿಕರಗಳಿಂದ ಮಾಸ್ತಿಯವರ ಕೃತಿಗಳ ಮೌಲ್ಯಮಾಪನ ನಡೆದಿದ್ದರೂ, ಅವರ ಸಾಹಿತ್ಯದಿಂದ ಹೊರಬರುವ ಸಾಹಿತ್ಯಿಕ ಮಾನದಂಡಗಳ ರೂಪುರೇಷೆಗಳು ಸ್ಪಷ್ಟವಾಗಿಲ್ಲ.

ಒಂದು ಕತೆ 'ಹೇಳುವುದಕ್ಕೂ', ಅದೇ ಕತೆ ಕತೆಯ ಸಾಹಿತ್ಯಿಕ ಚೌಕಟ್ಟಿನಲ್ಲಿ 'ಸಂಭವಿಸುವಂತೆ' ಮಾಡುವುದಕ್ಕೂ ತುಂಬಾ ವ್ಯತ್ಯಾಸವಿದೆ. ಕತೆ ಹೇಳುತ್ತಿರುವಂತೆಯೇ

ಮಾಧವ ಕುಲಕರ್ಣಿ, 253, ಎರಡನೇ ಹಂತ, ಗೋಕುಲಂ, ಮೈಸೂರು-2

ಅದು ಸಂಭವಿಸುವಂತೆ ಮಾಡುವ ಸಾಧ್ಯತೆಗಳೂ ಇವೆ. ಮಾಸ್ತಿಯವರ ಕತೆಗಳ ಸಂದರ್ಭದಲ್ಲಿ ನಾನು ಈ ಮಾತನ್ನು ಹೇಳುತ್ತಿರುವಾಗ ಯಶವಂತ ಚಿತ್ತಾಲರು ಮಾಸ್ತಿಯವರ ಕತೆಗಳನ್ನು ಕುರಿತು ಬರೆಯುತ್ತ "....ನಮ್ಮ ಜೊತೆಯ ಜೀವದ ಬಗ್ಗೆ ಬೇರೆ ಜೀವಕ್ಕೆ ಹೇಳುವ ಕೆಲಸ ಕೂಡ ಅಷ್ಟೇ ಒಳ್ಳೆಯದು ಎಂಬ ಶ್ರದ್ಧೆಯನ್ನು, ಅಂಥ ಪ್ರತಿಭೆಯುಳ್ಳ ಉತ್ಸಾಹವನ್ನು ಹುಟ್ಟಿಸಿದ್ದು ಮಾಸ್ತಿ ಕಥಾ ಪರಂಪರೆಯ ಅತಿ ಮುಖ್ಯ ಸಾಧನೆಯೆಂದು ನನ್ನ ತಿಳುವಳಿಕೆ" ಎಂದಿರುವ ಮಾತು ನನ್ನ ಗಮನದಲ್ಲಿದೆ. ಕತೆ ಹೇಳುವ ಕಲೆಯ ಒಟ್ಟು ಶಕ್ತಿ ಅಡಗಿರುವುದು ಅದು ಕತೆಯನ್ನು ಭಾಷೆಯಲ್ಲಿ ಸಂಭವಿಸುವಂತೆ ಮಾಡುವುದರಲ್ಲಿ ಇದೆ.

ಈ ಒಂದು ಹಿನ್ನೆಲೆಯಿಂದ ಮಾಸ್ತಿಯವರ ಕಥಾಲೋಕವನ್ನು ಪ್ರವೇಶಿಸಿದಾಗ ಅವರ ಕಥಾ ಪ್ರಪಂಚದ ಗಾತ್ರ ಮತ್ತು ವೈವಿಧ್ಯ ಒಂದು ಸಾಹಿತ್ಯಗೋಷ್ಠಿಯಲ್ಲಿ ಮಂಡಿಸುವ ಲೇಖನದ ಪರಿಧಿಯನ್ನು ಮೀರಿ ಬೆಳೆಯುವುದರಿಂದ 'ಮಾಸ್ತಿ ಛಾಪಿ'ನ ಅಂಶಗಳಿರುವಂತೆ ನನಗೆ ತೋರಿದ ಕೆಲವು ಕತೆಗಳನ್ನು ಮಾತ್ರ ಈ ಲೇಖನದಲ್ಲಿ ನಾನು ಚರ್ಚಿಸಿದ್ದೇನೆ. ಕತೆ ಹೇಳುವ ಮತ್ತು ಬೇರೆಯವರಿಂದ ಕೇಳಿದ ಕಥೆಯನ್ನು ಹೇಳುವ ಕ್ರಮವೇ ಮಾಸ್ತಿತ್ವದ ಕತೆಗಳ ಆಧಾರಸ್ತಂಭ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ 'ಗೌತಮಿ ಹೇಳಿದ ಕತೆ'. ಕತೆಯ ತಲೆಬರಹದಲ್ಲಿಯೇ "... ಹೇಳಿದ ಕತೆ" ಎಂಬ ಅಂಶವನ್ನು ವ್ಯಕ್ತಪಡಿಸಲಾಗಿದೆ. ಸಾಮಾಜಿಕ ಕತೆಗಳಲ್ಲಾದರೆ ಲೇಖಕರು ಇದು ಇಂಥವರು ನನಗೆ ಹೇಳಿದ ಕತೆ ಎನ್ನಬಹುದು. ಆದರೆ ಐತಿಹಾಸಿಕ ಮತ್ತು ಪೌರಾಣಿಕ ಕತೆಗಳಲ್ಲಿ ಹೀಗೆ ಹೇಳಲಾಗುವುದಿಲ್ಲ. ಅದಕ್ಕೆ "ಗೌತಮಿ ಹೇಳಿದ ಕತೆ"ಯಲ್ಲಿ ಗೌತಮಿಯೇ ಪ್ರಿಯಂವದೆ, ಅನಸೂಯೆ ಮತ್ತು ಶಕುಂತಲೆಗೆ ಕತೆ ಹೇಳುತ್ತಿದ್ದಾಳೆ. ಗೌತಮಿಯಿಂದ ಭಾರದ್ವಾಜನನ್ನು ಸಾವು ಕಸಿಯುತ್ತದೆ; ನಂತರ ದತ್ತ ಕಶ್ಯಪನಿಗಾಗಿ ಆಶೆಪಟ್ಟ ಗೌತಮಿಯು ಆತನಿಂದ ಅಂಥ ಆಶೆಯ ಭಿಕ್ಷೆಯ ನಿರೀಕ್ಷೆಯನ್ನು ಕೈಬಿಡುತ್ತಾಳೆ; ದತ್ತ ಕಶ್ಯಪನನ್ನು ತಾನು ರಕ್ಷಿಸಿದೆ ಎಂದುಕೊಳ್ಳುತ್ತಾಳೆ ಮತ್ತು ದತ್ತನು ಈ ಕಾರಣದಿಂದಾಗಿಯೇ ಆಶ್ರಮದ ಕುಲಪತಿಯಾಗಿ ಬೆಳೆಯುತ್ತಾನೆ. ಇದು ಕತೆಯ ಒಟ್ಟು ಆಶಯ. ಕತೆ ಹೇಳುತ್ತಿರುವವಳು ತನ್ನ ಜೀವನದ ಕತೆಯೇ ಹೇಳುತ್ತಿರುವುದರಿಂದ ಕತೆಗೆ 'ಅಥೆಂಟಿಸಿಟಿ'ಯ ಮುದ್ರೆ ಇದೆ. ಆದರೆ ಕತೆಯು ಒಳಗೊಂಡಿರುವ ಮಾನವಸಂಬಂಧದ ಪ್ರಶ್ನೆಗಳು ಮಾತ್ರ ಕತೆಯ ಹಂದರದಲ್ಲಿಯೇ ಗೌತಮಿಯ–ಅಂದರೆ ಕತೆ ಹೇಳುತ್ತಿರುವವಳ – ಒಳತೋಟಿಯ ಆವಿರ್ಭಾವವನ್ನು ಕತೆಯಲ್ಲಿ ಬಯಸುತ್ತವೆ. ಇಬ್ಬರು ತರುಣರೊಡನೆ ಬೆಳೆದ ತರುಣಿ ಆಯ್ಕೆಯ ಪ್ರಶ್ನೆ ಬಂದಾಗ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನಾಗಿರುವವನನ್ನು ಒಪ್ಪಿಕೊಳ್ಳುತ್ತಾಳೆ. ಈ ಒಪ್ಪಿಗೆಯ ನಂತರ ಅವಳಲ್ಲಿ ಪ್ರೇಮಾಂಕುರವಾಗುತ್ತದೆ. ಅವಳು ಆಯ್ದುಕೊಂಡ ಭಾರದ್ವಾಜ ತುಂಬಿದ ಹೊಳೆಯಲ್ಲಿ ಈಜಲು

ಹೋಗಿ ಮರಣ ಹೊಂದುತ್ತಾನೆ. ಇನ್ನೊಬ್ಬ ತರುಣನಲ್ಲಿ ಆಸಕ್ತಿ ತೋರುವ ಗೌತಮಿಯು ಕೊನೆಗೆ ಆತನ ಬ್ರಹ್ಮಚರ್ಯವನ್ನು ಕಾಪಾಡುವ ಹೊಣೆ ಹೊರುತ್ತಾಳೆ. ಮೇಲ್ನೋಟಕ್ಕೆ ಕಾಣುವಂತೆ ಇರುವ ದುರಂತದ ಛಾಯೆಯು ಕತೆಯನ್ನು ಬಿಗಿಯಾಗಿ ಹಿಡಿದಿದೆ. ಗೌತಮಿಯೇ ಕತೆ ಹೇಳುತ್ತಿರುವುದರಿಂದ ಅವಳ ಒಳತೋಟಿಯು ಕತೆಯಲ್ಲಿ ಮೂಡಿಬರುವುದಿಲ್ಲ. ಹೀಗಾಗಿ ದುರಂತವು ಧನ್ಯತೆಯ ಭಾವದತ್ತ ತಿರುಗುವ ಕತೆಯ ಆಶಯವು ಕತೆಯಲ್ಲಿ ಸಂಭವಿಸದೆ ಬರಿ ವಾಚ್ಯವಾಗುತ್ತ ಹೋಗುತ್ತವೆ. ಹೀಗಾದಾಗ ಕತೆಯು ಯಾವ ಒಂದು ಅನೂಹ್ಯ ತತ್ವಕ್ಕಾಗಿ ನಿಂತಿದೆಯೊ ಆ ತತ್ವ ಕೂಡ ಓದುಗನ ಮನಸ್ಸಿನ ಆಳಕ್ಕೆ ಹೋಗಲಾರದು. ಯಾವ ಕಾಲದಲ್ಲಿ ಬರೆದ ಸಾಹಿತ್ಯವೆ ಆಗಿರಲಿ, ಅದು ಜೀವನದ ಆಯಾಮಗಳ ಬಗೆಗೆ ವಿಸ್ಮಯವನ್ನುಂಟುಮಾಡಿ ವಿರಮಿಸಲು ಸಾಧ್ಯವಿಲ್ಲ. ಸಾಹಿತ್ಯದ ವಸ್ತು, ಆಶಯ ಮತ್ತು ಹಂದರಗಳಿಗೆ ಇರುವ ಅವಿನಾಭಾವ ಸಂಬಂಧದ ಗ್ರಹಿಕೆಯು ಕ್ರಿಯಾರೂಪವಾಗಿ ಸಾಹಿತ್ಯದಲ್ಲಿ ಮೂಡಿಬಂದಾಗ ಯಾವುದೇ ಸಾಹಿತ್ಯ ಪ್ರಕಾರವಾಗಲಿ ಅದು ಸಮರ್ಥ ಸಾಹಿತಿಗೆ ತನ್ನ ಗುಟ್ಟನ್ನು ಬಿಡತೊಡಗುತ್ತದೆ. ದುರಂತದ ಛಾಯೆಯಿಂದ ಧನ್ಯತೆಯ ಭಾವದಲ್ಲಿ ಪರಿವರ್ತನೆಯಾಗುವ ಗೌತಮಿಯ ಪಾತ್ರವು ವಾಚ್ಯಮಟ್ಟವನ್ನು ಮೀರಿ ಬೆಳೆಯಬೇಕಾದ ಪಾತ್ರ ಎಂಬುದನ್ನು ಕತೆಯ ಹಂದರವೇ ತೋರಿಸಿಕೊಡುತ್ತದೆ. "ಹೇಳುವ ಕತೆ"ಯ ದೊಡ್ಡ ಕಷ್ಟವೆಂದರೆ ಪಾತ್ರಗಳ ಮನದಾಳಕ್ಕೆ ನೇರ ಪ್ರವೇಶ ಮಾಡುವಾಗ ಬರಬಹುದಾದ ಮಿತಿಗಳು. ಇದನ್ನು ಗೆದೆಯಬೇಕಾದರೆ ಸುತ್ತಲಿನ ಪರಿಕರಗಳ ವರ್ಣನೆ ಮತ್ತು ಘಟನೆಗಳು ಸೂಚ್ಯವಾಗಿ ಮತ್ತು ಸಾಂಕೇತಿಕವಾಗಿ ಮನದಾಳದ ಪಲಕುಗಳನ್ನು ಪ್ರತಿಬಿಂಬಿಸುವಷ್ಟು ಗಟ್ಟಿಯಾಗಿರಬೇಕು. ಈ ಕತೆಯಲ್ಲಿ ನದಿಯನ್ನು ಸಾಂಕೇತಿಕವಾಗಿ ಜೀವನದ ಒಟ್ಟು ಪ್ರವಾಹಕ್ಕೆ ಸಂವಾದಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ. ಕತೆ ಹೇಳುತ್ತಿರುವ ಕಥಾನಾಯಕಿಯ ಮನಸ್ಸಿನ ತುಮುಲ ಮತ್ತು ಪರಿವರ್ತನೆಗಿಂತ ಜೀವನದ ಬಗೆಗಿನ 'ಬೆರಗು' ಕತೆಗೆ ಮುಖ್ಯವಾಗಿದೆ, ಹೀಗೆ 'ಬೆರಗು' ಮುಖ್ಯವಾಗಿ ಕತೆ ಹೇಳುತ್ತಿರುವ ಗೌತಮಿಯು ತನ್ನ ಅನುಭವಗಳ ಒಳತೋಟಿಯ ಬೇಗುದಿಗೆ ಅಭಿವ್ಯಕ್ತಿ ನೀಡದಾದಾಗ ಕತೆಯ ಒಟ್ಟು ಶಕ್ತಿಯ ಬಗ್ಗೆ ಯೋಚಿಸಬೇಕಾಗುತ್ತದೆ. ನವ್ಯ ಮತ್ತು ನವ್ಯೋತ್ತರ ಸಾಹಿತ್ಯವು ಇಂಥ ಒಂದು ವಿಮರ್ಶಾ ಮಾನದಂಡವನ್ನು ಒದಗಿಸಿರುವುದರಿಂದ ಈ ದೃಷ್ಟಿಯಿಂದ ಮಾಸ್ತಿಯವರ ಕತೆಗಳನ್ನು ನೋಡುವುದು ಅನಿವಾರ್ಯವಾಗಿದೆ.

"ವೆಂಕಟಶಾಮಿಯ ಪ್ರಣಯ"ವನ್ನು ಅದು "ಪ್ರೇಮದ ಕತೆ"ಯಾದುದರಿಂದಲೇ ನಿರೂಪಕರು ರಾಮಸ್ವಾಮಿಯಿಂದ ಕೇಳಿಸಿಕೊಳ್ಳತೊಡಗುತ್ತಾರೆ. ಇಲ್ಲಿಯ ದುರಂತ ಮಾತ್ರ ಗೌತಮಿ ಮತ್ತು ದುರದೃಷ್ಟದ ಹೆಣ್ಣಿನ ದುರಂತಕ್ಕಿಂತ ಭಿನ್ನವಾಗಿದೆ. "ಮುಲೆಗಳಲ್ಲಿ ಮದುಮಗಳು" ಕಾದಂಬರಿಯ ಪೀಂಚಲು ಮತ್ತು ಐತನನ್ನು ಜ್ಞಾಪಕಕ್ಕೆ ತರುವ

ವೆಂಕಟಶಾಮಿ ಮತ್ತು ದೊಂಬರ ಹುಡುಗಿಯ ಪ್ರೇಮ ಪ್ರಕರಣವು ಎರಡೂ ಕಡೆಯ ಪಾಲಕರ ಮತ್ತು ಊರಿನ ಗೌಡರ ಪ್ರತಿಕ್ರಿಯೆಗಳ ಮೇಲೆ ನಿರೂಪಿತವಾಗಿದೆ. ಹೀಗೆ 'ಪ್ರತಿಕ್ರಿಯೆ'ಗಳ ಮೇಲೆ ನಿರೂಪಣೆಯು ಆಧಾರವಾಗಿರುವುದರಿಂದ ಈ ಕತೆಯು ಕನ್ನಡ ಕಥಾಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ವೆಂಕಟಶಾಮಿಯ ಮುಗ್ಧತೆಯು ಕತೆಯಲ್ಲಿ ವ್ಯಕ್ತವಾಗುವಂತೆ ದೊಂಬರ ಹುಡುಗಿಯ ಭಾವನೆಗಳು ಕತೆಯಲ್ಲಿ ಪೂರ್ಣ ರೂಪವನ್ನು ಪಡೆಯುವುದಿಲ್ಲ. ಅವಳು ನಿಸರ್ಗದತ್ತ ಸೌಂದರ್ಯವನ್ನು ಪಡೆದು ಅಲೆಮಾರಿಗಳ ಗುಂಪಿನಲ್ಲಿದ್ದಾಳೆ. ತನ್ನ ದೇಹವನ್ನು ತಾನು ಮತ್ತು ದೊಂಬರ ಹುಡುಗಿಯು ಕೂಡಿದ್ದ ಸ್ಥಳದಲ್ಲಿ ಮಣ್ಣು ಮಾಡಬೇಕೆಂಬ ಕೊನೆಯ ಆಸೆಯನ್ನು ಹೇಳಿ ವೆಂಕಟಶಾಮಿಯು ಕಣ್ಣು ಮುಚ್ಚುತ್ತಾನೆ. "ಹೀಗೆ ನಡೆಯಿತು ಕತೆ; ಇದಕ್ಕೇನೆನ್ನುವಿರಿ?" ಎಂಬ ಮಾಸ್ತಿತ್ವದ ಭಾವವು ಈ ಕತೆಯುದ್ದಕ್ಕೂ ಹರಿದು ಬಂದಿದೆ.

ದುರಂತದ ಛಾಯೆಯಿಂದ ದೂರವಾದ ಮಾಸ್ತಿಯವರ ಕತೆಗಳಲ್ಲಿ–ಅದರಲ್ಲಿಯೂ ಹಾಸ್ಯ ಪ್ರಜ್ಞೆಯ ಆವಿರ್ಭಾವದಲ್ಲಿ – ವಾಸ್ತವತೆಯ ನಿರೂಪಣೆಯು ಹೆಚ್ಚು ಯಶಸ್ವಿಯಾಗಿದೆಯೆಂದು ತೋರುತ್ತದೆ. ಇಂಥ ಕತೆಗಳಲ್ಲಿ ಮೂಲವಸ್ತುವನ್ನು ಆದರ್ಶದತ್ತ ಹೊರಳಿಸುವುದಕ್ಕೆ ಅವಕಾಶಗಳಿಲ್ಲದಿರುವುದೆ ಇದಕ್ಕೆ ಕಾರಣವಾಗಿರಬಹುದು. ಇಂಥ ಕತೆಗಳಲ್ಲಿ "ಜೋಗ್ಯೋರ ಅಂಜಪ್ಪನ ಕೋಳೀಕತೆ" ತುಂಬಾ ಯಶಸ್ವಿಯಾದ ಕತೆಯಾಗಿದೆ. ಕತೆ ಹೇಳುತ್ತಿರುವ ಮುದುಕ ಜೋಗ್ಯೋರ ತನ್ನ ತಾರುಣ್ಯದಲ್ಲಿ ನಡೆದ ಒಂದು ಘಟನೆಯನ್ನು ನಿರೂಪಿಸುತ್ತಿದ್ದಾನೆ. ಘಟನೆ ನಡೆದ ಕಾಲದಲ್ಲಿ ಅವಿವಾಹಿತನಾಗಿದ್ದ ಅಂಜಪ್ಪನು ಮುಂದೆ ಸಂಸಾರಿಯಾದನೊ ಇಲ್ಲವೊ ಎಂಬ ಅಂಶವು ಕತೆಯಲ್ಲಿ ಎಲ್ಲಿಯೂ ಪ್ರಸ್ತಾಪಕ್ಕೆ ಬಂದಿಲ್ಲವೆಂಬುದು ಗಮನಾರ್ಹ ಅಂಶವಾಗಿದೆ. ತರುಣಿಯೊಬ್ಬಳು ಕೋಳಿಯ ಕಳ್ಳತನದಿಂದ ಬಚಾವಾಗಲು ಅಂಜಪ್ಪನನ್ನು ಕಳುವಿನ ಆರೋಪಕ್ಕೆ ಗುರಿಪಡಿಸುತ್ತಾಳೆ, ಅಂಜಪ್ಪನು ಆ ಹುಡುಗಿಯು ತನ್ನ ಮೇಲಿನ ಪ್ರೇಮದಿಂದಲೇ ತನಗೆ ಕೋಳಿಯನ್ನು ಕೊಟ್ಟಿದ್ದಾಳೆಂದು ಬಗೆದು ಅವಳನ್ನು ಉಳಿಸಿ ತಾನು ದಂಡವನ್ನು ತೆರುತ್ತಾನೆ. ಆದರೆ ಅವಳಿಗೆ ತನ್ನ ಮೇಲೆ ಯಾವುದೇ ಪ್ರೇಮವಿಲ್ಲವೆಂದು ತಿಳಿದಾಗ ಅಂಜಪ್ಪನು ಪೆಚ್ಚಾಗುತ್ತಾನೆ. ಕತೆಯು ಹಾಸ್ಯಮಯವಾಗಿ ನಿರೂಪಿತವಾಗಿದೆ. ಆದರೆ ಸತ್ಯದ ಮುಖಗಳನ್ನು ಕಂಡುಹಿಡಿಯುವ ಕಷ್ಟ ಮತ್ತು ಕೆಲವೊಮ್ಮೆ ಮೋಸವೂ ಆಪ್ಯಾಯಮಾನವಾಗಿ ಕಾಣುವ ಪರಿಯು ಕತೆಯಲ್ಲಿ ಚೆನ್ನಾಗಿ ಮೂಡಿಬಂದಿದೆ. ಹಾಸ್ಯದ ಲೇಪವಿರುವ ಕೆಲವು ವಿವರಣೆಗಳು ಮಾತ್ರ ಕನ್ನಡದ ಗದ್ಯ ಶೈಲಿಯನ್ನೇ ಬದಲಿಸಿರಬಹುದಾದಷ್ಟು ಶಕ್ತಿಯುತವಾಗಿವೆ. ಉದಾಹರಣೆಗಾಗಿ ನಾನು ಮಾಸ್ತಿಯವರ ಪ್ರಾರಂಭದ ಕತೆಗಳಲ್ಲಿ ಒಂದಾದ "ವೆಂಕಟರಾಯನ ಪಿಶಾಚ" ಎಂಬ ಕತೆಯ ಒಂದು ಭಾಗವನ್ನು ಆಯ್ದುಕೊಂಡಿದ್ದೇನೆ. (ಮಾಸ್ತಿ ಅವರ ಸಮಗ್ರ ಕತೆಗಳು, ಸಂಪುಟ 1, ಪುಟ 36) "...ಅರ್ಧ ರಾತ್ರಿಯಲ್ಲಿ ವೆಂಕಟ

ರಾಯನಿಗೆ ಏನೋ ಸ್ವಲ್ಪ ಎಚ್ಚರವಾದ ಹಾಗಾಯಿತು. ಎಲ್ಲೋ ಸ್ವಲ್ಪ ಶಬ್ದ. ಎಲ್ಲಿ? ಕಿಟಕಿಯ ಹೊರಗಡೆ. ಆಲಿಸಿ ಕೇಳಿದರೆ ಏನೂ ಶಬ್ದವಿರಲಿಲ್ಲ. ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಶಬ್ದವಾಯಿತು. ಮತ್ತೆ ಆಲಿಸಿ ಕೇಳಿದರೆ ಶಬ್ದ ಇತ್ತು. ಯಾರೋ ನಡೆಯುವ ಶಬ್ದ. ಯಾರಿರಬಹುದು? ಪಿಶಾಚಿ ಇರಬಹುದೊ? ಛೆ, ಛೆ, ಪಿಶಾಚಿ ಎಂದರೇನು, ನಡೆಯುವುದೆಂದರೇನು? ಹೀಗೆ ಅವನು ಧೈರ್ಯ ಹೇಳಿಕೊಂಡನು. ಹೇಳಿಕೊಂಡು ಮುಖವನ್ನು ಕಿಟಕಿಯ ಕಡೆ ತಿರುಗಿಸಿ ಕಣ್ಣುಗಳನ್ನು ಅಗಲವಾಗಿ ಬಿಟ್ಟುಕೊಂಡು ನೋಡುತ್ತಿದ್ದಾನೆ. ಯಾರೂ ಕಾಣಲಿಲ್ಲ, ನಡೆಯುವ ಶಬ್ದ ಮಾತ್ರ ಇನ್ನೂ ಕೇಳುತ್ತಿದೆ. ಮೆಲ್ಲಮೆಲ್ಲನೆ ಹೆಜ್ಜೆ ಇಡುವ ಶಬ್ದ. ಶಬ್ದ ಕಿಟಕಿಯ ಕಡೆಗೆ ಹತ್ತಿರ ಹತ್ತಿರವಾಗಿ ಬರುವಂತೆ ತೋರಿತು. ವೆಂಕಟರಾಯನಿಗೆ ಸ್ವಲ್ಪ ಹೆದರಿಕೆಯಾಯಿತು. ಅವನು ಕಿಟಕಿಯ ಕಡೆಯಿಂದ ಕಣ್ಣನ್ನು ತೆಗೆಯಲಿಲ್ಲ. ಶಬ್ದ ಹತ್ತಿರ ಹತ್ತಿರ ಬಂದಿತು; ಕಿಟಕಿಯ ಹತ್ತಿರ ಬಂದು ನಿಂತುಹೋಯಿತು. ಕಿಟಕಿಯ ಹೊರಗಡೆಗೆ ಸರಿಯಾಗಿ ನಿಂತಿದ್ದುದರಿಂದ ಕಿಟಕಿಯಿಂದ ಏನಾದರೂ ಇಣಕಿ ನೋಡುವುದೇನೋ ಎಂದು ವೆಂಕಟರಾಯ ದೃಷ್ಟಿಸಿ ನೋಡುತ್ತಿದ್ದಾನೆ. ಸ್ವಲ್ಪ ಹೊತ್ತು ಏನೂ ಇಲ್ಲ. ಆಮೇಲೆ ಇದ್ದಕಿದ್ದ ಹಾಗೆ ಒಂದು ಮುಖ ಕಾಣಬಂದಿತು. ಕರಿಯ ಮುಖ, ದೊಡ್ಡದು. ಕರಾಳಾಕೃತಿ, ಹಲ್ಲುಗಳನ್ನೆಲ್ಲಾ ಬಿಟ್ಟುಕೊಂಡಿತ್ತು. ನಾಲಿಗೆ ಸ್ವಲ್ಪ ಹೊರಕ್ಕೆ ಜೋಲಾಡುತ್ತಿತ್ತು. ಕಣ್ಣುಗಳಲ್ಲಿ ಅದೇನೋ ಹಳದಿಯ ಬಣ್ಣದ ಬೆಳಕು. ವೆಂಕಟರಾಯ ಭಯದಿಂದ ನಡುಗಿದ. ಕೂಗುವುದಕ್ಕೆ ಪ್ರಯತ್ನಪಟ್ಟ, ಆಗಲಿಲ್ಲ. ಆ ಮುಖದಲ್ಲಿ ಹೊಳೆಯುತ್ತಿದ್ದ ಕಣ್ಣುಗಳು ಇವನ ಕಣ್ಣುಗಳನ್ನು ದುರದುರನೆ ನೋಡುತ್ತಿದ್ದವು. ಇವನಿಗೆ ಮಾತಾಡುವ ಶಕ್ತಿಯೇ ಇಲ್ಲದ ಹಾಗಾಯಿತು. ಈ ಕರಾಳ ಮುಖವನ್ನು ನೋಡಿ ಸಹಿಸಲಾರದೆ ವೆಂಕಟರಾಯ ಕಣ್ಣನ್ನು ಮುಚ್ಚಿಕೊಳ್ಳಲು ಪ್ರಯತ್ನ ಮಾಡಿದ; ಆಗಲಿಲ್ಲ. ಕಣ್ಣುಗಳನ್ನು ಬೇರೆ ಕಡೆ ತಿರುಗಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟ: ಆಗಲಿಲ್ಲ. ಮೈಯಲ್ಲೆಲ್ಲಾ ಬೆವರು ಕಿತ್ತುಕೊಂಡಿತು. ಹಾಗೆಯೇ ನೋಡುತ್ತಿದ್ದಾಗ ತಲೆ ಕಿಟಕಿಯ ಒಳಕ್ಕೆ ಬಂದಿತು.

ವೆಂಕಟರಾಯನ ಚೈತನ್ಯ ಉಡುಗಿ ಹೋಯಿತು. ನಡೆಯುವುದನ್ನೆಲ್ಲಾ ನೋಡುತ್ತಾ, ಅವನು ಮರದ ತುಂಡಿನ ಹಾಗೆ ಸುಮ್ಮನೆ ಬಿದ್ದಿದ್ದನು. ಮರದ ತುಂಡಿನಂತೆ ಕದಲದೆ ಇದ್ದುದಷ್ಟೋ ಅಷ್ಟೆ. ಆದರೆ ಮರದ ತುಂಡಿಗೆ ಹೆದರಿಕೆ ಇಲ್ಲ: ಇವನ ಹೆದರಿಕೆಗೆ ಪಾರವಿಲ್ಲ. ಆ ಮುಖವೋ ಬರಿಯ ಮುಖ; ಮೈ, ಕೈ, ಕಾಲು ಏನೂ ಇಲ್ಲ. ಅದು ಏನು ಮಾಡುವುದೋ ಎಂದು ಇವನು ನೋಡುತ್ತಿದ್ದಾನೆ. ಅದು ಮೆಲ್ಲಗೆ ಕಿಟಕಿಯ ಗೂಡಿನಲ್ಲಿ ಕುಳಿತುಕೊಂಡಿತು. ಹಾಗೆಯೇ ಸ್ವಲ್ಪ ಹೊತ್ತು ಕುಳಿತಿದ್ದು ವೆಂಕಟರಾಯನನ್ನು ನೋಡುತ್ತ ಕಣ್ಣನ್ನು ದೊಡ್ಡದು ಮಾಡಿಕೊಂಡು ಕೆಳಕ್ಕೆ ಧುಮುಕಿತು.

ರೂಮಿನೊಳಕ್ಕೆ ಧುಮುಕಿದೊಡನೆ "ಆ ತಲೆ ಹೋಗಿ ಅದು ಬೆಕ್ಕಾಯಿತು."

ಈಗಲೂ ರೋಚಕವಾಗಿ ಕಾಣುವ ಈ ಗದ್ಯಭಾಗವು ಕನ್ನಡದ ಗದ್ಯವಿನ್ನೂ ಹರಳುಗಟ್ಟುವ ಹಂತದಲ್ಲಿದ್ದಾಗ ಓದುಗರಿಗೆ ಬಹು ಆಕರ್ಷಕವಾಗಿ ಕಂಡಿರಬಹುದು. ಆಗ ಪ್ರಬಂಧಗಳಲ್ಲಿ ಹೆಚ್ಚಾಗಿ ಬೇರೂರತೊಡಗಿದ್ದ ಕನ್ನಡದ ಗದ್ಯದ ಛಾಯೆಯನ್ನು ಇಲ್ಲಿ ಕಾಣಬಹುದು. ಈ 'ಪ್ರಬಂಧ ಶೈಲಿ'ಯು ಮುಂದೆ ಮಾಸ್ತಿಯವರ ಕಥಾಬರ ವಣಿಗೆಯ ಒಂದು ಭಾಗವಾಗಿ ಹೋಯಿತು. ಅವರ ಕಥಾ ಸಾಹಿತ್ಯದಲ್ಲಿ ಈ ಪ್ರಬಂಧ ಶೈಲಿಯಿಂದ ಉಂಟಾದ ಸಾಧಕ ಬಾಧಕಗಳ ಚರ್ಚೆಗೆ ಇನ್ನೊಂದು ಅಭ್ಯಾಸಿ ಲೇಖನದ ಅವಶ್ಯಕತೆ ಇದೆ. ಸಾಹಿತ್ಯ ಪ್ರಕಾರವಾಗಿ ಪ್ರಬಂಧವು ಕನ್ನಡದಲ್ಲಿ ಬತ್ತಿಹೋಗಿರುವ ಈ ಸಂದರ್ಭದಲ್ಲಿ ಮಾಸ್ತಿಯವರ ಗದ್ಯದಿಂದ ಪ್ರಬಂಧ ಲೇಖಕರು ಪಡೆಯಬಹು ದಾದದ್ದು ಬಹಳವಾಗಿದೆ. ನೇರ ನಿರೂಪಣೆಯಲ್ಲಿ ಪ್ರಬಂಧ ಶೈಲಿಯ ಅನಿವಾರ್ಯತೆ ಎಷ್ಟೆಂಬುದಕ್ಕೆ ಮಾಸ್ತಿಯವರ ಹಚ್ಚಿನ ಕತೆಗಳು ಸಾಕ್ಷಿಯಾಗಿವೆ.

"ಸಂನ್ಯಾಸ ಅಲ್ಲದ ಸಂನ್ಯಾಸ" ಮತ್ತು "ಎಮ್ಮೆ ಕಳುವು" ಕತೆಗಳನ್ನು ಕೂಡ ಇಲ್ಲಿ ಎರಡು ವಿಷಯಂಗಳಿಗಾಗಿ ನಮೂದಿಸಬಹುದು. "ಸಂನ್ಯಾಸ ಅಲ್ಲದ ಸಂನ್ಯಾಸ" ದಲ್ಲಿ, ಒಂದು ಚಿಕ್ಕ ವಿಷಯದಿಂದ ಕೂಡ ಕತೆ ಏಳುವ ಮಾಸ್ತಿತ್ವದ ಮುಂದ್ರೆಯ ಪರಿ ಚಯವಾಗುತ್ತದೆ. ಬೆಂಡೆಕಾಯಿ ಹುಳಿ ಸಿಗಲಿಲ್ಲವೆಂದು ಯಾರಾದರೂ ಸಂನ್ಯಾಸ ಸ್ವೀಕರಿಸುವುದುಂಟೆ ? ಆದರೆ ಉಪಾಧ್ಯಾಯರಾದ ನರಸಿಂಹಯ್ಯನವರು ಈ ಕಾರಣ ಕ್ಕಾಗಿಯೇ ಸಂನ್ಯಾಸ ಸ್ವೀಕರಿಸುತ್ತಾರೆ. ಮತ್ತೆ ಅದೇ ಬೆಂಡೆಕಾಯಿ ಹುಳಿಯ ಕಾರಣ ದಿಂದಾಗಿಯೇ ಮತ್ತೆ ಗೃಹಸ್ಥಾಶ್ರಮಕ್ಕೆ ಮರಳುತ್ತಾರೆ! ಇಷ್ಟು ಚಿಕ್ಕ ಕಾರಣಕ್ಕಾಗಿ ಸಂನ್ಯಾಸ ಸ್ವೀಕರಿಸಿದ ನರಸಿಂಹಯ್ಯನ ಮೇಲೆ ನಿರೂಪಕರಿಗೆ ಸಿಟ್ಟಾಗಲಿ ಅಥವಾ ಗೇಲಿ ಮಾಡುವ ಸ್ವಭಾವವಾಗಲಿ ಇಲ್ಲವೆಂಬುದು ಮಾಸ್ತಿತ್ವದ ಒಂದು ದೊಡ್ಡ ಗುಣ ಮತ್ತು ಆ ಶೈಲಿಯ ಶೋಭೆ ಎಂದು ನಾನು ತಿಳಿದಿದ್ದೇನೆ.

ಇದೇ ಸಂದರ್ಭದಲ್ಲಿ ನಮ್ಮ ಸಾಹಿತ್ಯದ ಸದ್ಯದ ಒಂದು ವೈರುಧ್ಯವನ್ನು ಈ ಶೈಲಿಯ ಬೆಳಕಿನಲ್ಲಿ ಚರ್ಚಿಸಿ ನಾನು ಎತ್ತಿಕೊಂಡ ಮುಂದಿನ ಎರಡು ಕತೆಗಳಿಗೆ ಹೋಗು ತ್ತೇನೆ. ನವ್ಯ ಸಾಹಿತ್ಯದ ಉಗಮವು "ವ್ಯಂಗ್ಯ"ದಲ್ಲಿಯೇ ಪ್ರಾರಂಭವಾಯಿತೆಂದು ನನಗೆ ತೋರುತ್ತದೆ. ಜಗತ್ತಿನ ಓರೆಕೋರೆಗಳಿಗೆ ತನ್ನನ್ನು ಒಗ್ಗಿಸಿಕೊಳ್ಳಲಾರದ ಲೇಖಕನ ತಳಮಳವು ಹೆಚ್ಚಾಗಿ ಆ ಸಾಹಿತ್ಯದ ಮೂಲವಸ್ತುವಾಗುತ್ತಾ ಬಂದಿತು. ಆಗ ಅಲ್ಲಿ ಸಹಜವಾಗಿ ವ್ಯಂಗ್ಯದ ಉಗಮವಾಯಿತು ಮತ್ತು ಕೆಲಕಾಲ ಅದು ಸ್ಥಾಯಿಭಾವವಾಗು ತ್ತಲೂ ಬಂದಿತು. ಕೃತಿಗಳ ಚರ್ಚೆಯ ಗೈರುಹಾಜರಿಯಲ್ಲಿ ನಾನು ಹೀಗೆ ಹೇಳುವುದರ ಅಪಾಯದ ಅರಿವು ನನಗಿದೆ. ಆದರೆ ಕೆಲವೊಮ್ಮೆ ಒಂದು ಸಾಧ್ಯತೆ ನನ್ನನ್ನು ಕೆಣಕಿದೆ. ಅದೇನೆಂದರೆ ವ್ಯಂಗ್ಯವೇ ಪ್ರಾಧಾನ್ಯವಾದ ನವ್ಯಸಾಹಿತ್ಯದ ಭಾಗಕ್ಕೆ ನಾನು ಮೇಲೆ ವಿವ ರಿಸಿದ ಮಾಸ್ತಿತ್ವದ ಕುಡಿ ಸೇರಿದ್ದರೆ ನವ್ಯಸಾಹಿತ್ಯ ಪ್ರತಿಕ್ರಿಯಾತ್ಮಕವಾಗುವುದಯಲ್ಲಿ

ಕ್ರಿಯಾತ್ಮಕವಾಗಬಹುದಿತ್ತೇನೊ! ನವ್ಯ ಸಾಹಿತ್ಯದ ಎಲ್ಲ ಕೃತಿಗಳಿಗೂ ಸಾರಾಸಗಟಾಗಿ ಈ ಮಾತನ್ನು ಅನ್ವಯಿಸಲಾಗುವುದಿಲ್ಲ, ದಿಟ. ಆದರೆ ವ್ಯಂಗ್ಯದಿಂದ ಬಿಡಿಸಿಕೊಂಡ ಮಾಸ್ತಿತ್ವದ ಅಂಶ ಕಣ್ಣೆದುರಿಗಿದ್ದಾಗಲೂ, ನವ್ಯಸಾಹಿತ್ಯ ಅದಕ್ಕೆ ಕುರುಡಾಗಿದ್ದುದೂ ಅಷ್ಟೇ ದಿಟ. ಅದೇ ಆಗ ನಡೆದುಹೋದ ಸಾಹಿತ್ಯ ಕ್ರಿಯೆಯ ಒಳ್ಳೆಯ ಗುಣಗಳಿಗೆ ನವ್ಯರು ಹೇಗೆ ಕುರುಡರಾದರೋ ಹಾಗೆಯೇ ನವ್ಯರ ಸಾಧನೆಗಳಿಗೆ ನವ್ಯೋತ್ತರರೂ ಕುರುಡರಾದರು. ಸಾಹಿತ್ಯ ಚಳುವಳಿಗಳನ್ನು ಮೀರಿನಿಂತ–ದೂರನಿಂತ ಸಾಹಿತಿಗಳಲ್ಲ–ಬದಲಾವಣೆಯ ಗಾಳಿಯನ್ನು ತನ್ನ ಸೃಜನಶೀಲತೆಯ ಅಗ್ನಿಪರೀಕ್ಷೆಗೆ ಒಳಪಡಿಸುವ ಸಾಹಿತಿಗೆ ಈ ಮಾತು ಅನ್ವಯವಾಗುವುದಿಲ್ಲ. ಸಾಹಿತ್ಯ ಚಳುವಳಿ ಮತ್ತು ಅದರ ನಂತರದ ಪರಿಣಾಮಗಳ ಒಂದು ಕೊರಕಲಿನಿಂದ ಕನ್ನಡದ ಸೃಜನಶೀಲ ಸಾಹಿತ್ಯ ಇನ್ನೂ ಚೇತರಿಸಿಕೊಂಡಂತೆ ಕಾಣುವುದಿಲ್ಲ. ಮಾಸ್ತಿಯವರ ಬಹುಚರ್ಚಿತ ಕತೆಯಾದ "ಮೊಸರಿನ ಮೊಂಗಮ್ಮ" ಮತ್ತು ಅವರ ಮೊದಲಿನ ಕತೆಗಳಾದ "ರಂಗನ ಮದುವೆ", "ರಂಗಪ್ಪನ ದೀಪಾವಳಿ", "ರಂಗಪ್ಪನ ಕೋರ್ಟ್‌ಶಿಪ್" ಕತೆಗಳನ್ನು ಅವಲೋಕಿಸಿದರೆ ನಾನು ಹೇಳಿದ ಅಂಶ ಇನ್ನಷ್ಟು ಸ್ಪಷ್ಟವಾಗಬಹುದು. ಮೊದಲಿನಿಂದಲೂ ಮಾಸ್ತಿಯವರ ಕತೆಗಳು ಪ್ರತಿಕ್ರಿಯಾತ್ಮಕ ಧೋರಣೆಯನ್ನು ನಿರಾಕರಿಸಿವೆ ಮತ್ತು ಇದು ಅವರ ಜೀವನ ದೃಷ್ಟಿಯೂ ಹೌದು. ರಂಗನ ಪಾತ್ರವು ಮೊದಲಿನ ಮೂರು ಕತೆಗಳಲ್ಲಿ ಎಲ್ಲಿಯೂ ಲೇವಡಿಗೆ ಗುರಿಯಾಗಿಲ್ಲ ಮತ್ತು ಆತನು ಯಾವೊತ್ತೂ ಬರಿ ಮುಗ್ಧನಂತೆಯೂ ಚಿತ್ರಿತವಾಗಿಲ್ಲ. ನವ್ಯರ ಮತ್ತು ನವ್ಯೋತ್ತರರ ಪ್ರಾರಂಭದ ಕತೆಗಳನ್ನು ಮಾಸ್ತಿಯವರ ಈ ಪ್ರಾರಂಭದ ಕತೆಗಳೊಡನೆ ಕುತೂಹಲದ ದೃಷ್ಟಿಯಿಂದಲಾದರೂ ಹೋಲಿಸಿ ನೋಡಬೇಕು. ಪ್ರಾರಂಭದ ಕತೆಗಳಲ್ಲಿಯೇ ಅವರು ರಂಗನೊಡನೆ ಅವನ ಸುತ್ತಲಿನ ಜಗತ್ತನ್ನು ಅದು ಹೇಗಿದೆಯೊ ಹಾಗೆ ಸ್ವೀಕರಿಸಿ ಬಿಟ್ಟಿದ್ದಾರೆ ಮತ್ತು ಅದರ ಅಂದ ಚಂದದ ಬಗ್ಗೆ ಕುತೂಹಲಿಗಳಾಗಿದ್ದಾರೆ. ಅದರ ಓರೆಕೋರೆಗಳೇನೆ ಇದ್ದರೂ ಅವುಗಳಿಲ್ಲದೆ ಆ ಜಗತ್ತು ಪರಿಪೂರ್ಣವಾಗಲಾರದೆಂದು ಮಾಸ್ತಿಯವರು ಭಾವಿಸಿದ್ದಾರೆ. ಆ ಓರೆಕೋರೆಗಳ ಮೇಲೆ ರಾವುಗನ್ನಡಿ ಹಿಡಿಯಲು ಮಾಸ್ತಿಯವರು ಅಷ್ಟಾಗಿ ಸಿದ್ಧರಿಲ್ಲ ಹಾಗೂ ಆ ಕೆಲಸವನ್ನು ಅವರು ತಮ್ಮ ಕತೆಗಳ ಧ್ವನಿಪರಂಪರೆಗೆ ಬಿಟ್ಟುಬಿಟ್ಟಿದ್ದಾರೆ. ನವ್ಯ ಮತ್ತು ನವ್ಯೋತ್ತರರು ಧ್ವನಿ ಪರಂಪರೆಯ ಮಾತುಗಳಾಡುತ್ತಲೇ ತಮ್ಮ ಕೃತಿಗಳಲ್ಲಿ ಓರೆಕೋರೆಗಳ ಮೇಲೆ ರಾವುಗನ್ನಡಿ ಹಿಡಿದರು. ಇದರಿಂದ ಶೈಲಿಯಲ್ಲಿ ಸ್ಥಿತ್ಯಂತರವಾಗುವುದರ ಜೊತೆಗೆ ಆ ಕೃತಿಗಳು "ಸ್ವೀಕಾರಾರ್ಹ" ಗುಣಗಳಿಂದಲೂ ಕೆಲಮಟ್ಟಿಗೆ ವಂಚಿತವಾದವು. ಮಾಸ್ತಿಯವರ ಮತ್ತು ನವ್ಯನವ್ಯೋತ್ತರರ ಬರವಣಿಗೆಯ ಶೈಲಿಯಲ್ಲಿಯ ಈ ಅಂತರ ಹೀಗೆ ಅವರು ಪ್ರಪಂಚಕ್ಕೆ ಪ್ರತಿಕ್ರಿಯಿಸಿದ ಬಗೆಯಲ್ಲಿ ಇದೆಯೆ ಹೊರತು ಅವರಲ್ಲಿರುವ ತಲೆಮಾರಿನ ಅಂತರದಲ್ಲಾಗಲಿ ಅಥವ ಕೇವಲ ಗದ್ಯದ ಪದ

ಪ್ರಜಗಳ ಬೆಳವಣಿಗೆಯಲ್ಲಾಗಲಿ ಇಲ್ಲ. ಮಾಸ್ತಿಯವರ ಕತೆಗಳಲ್ಲಿ ಗಟ್ಟಿಯಾದ ವಿಷಾದ ಅಲ್ಲಲ್ಲಿ ಮಿಂಚುತ್ತದಾದರೂ ವ್ಯಂಗ್ಯದ ಅಂದ ಕಡಿಮೆ. ಈ ವಿಷಾದಕ್ಕೆ ಸಾರ್ವತ್ರಿಕತೆಯನ್ನು ತಂದುಕೊಡುವ ಶಕ್ತಿ ಇದೆ.

"ಮೊಸರಿನ ಮೊಂಗಮ್ಮ" ಕತೆಯಲ್ಲಿ ಮಾತ್ರ ಮಾಸ್ತಿಯವರ ಶೈಲಿ ಮತ್ತು ಗುಣಗಳ ಉಚ್ಚ ಸಾಧನೆಯನ್ನು ಕಾಣಬಹುದಾಗಿದೆ. ಜಗತ್ತನ್ನು ಸಂಪೂರ್ಣವಾಗಿ ಸ್ವೀಕರಿಸಿದ ಮನುಷ್ಯನೊಬ್ಬನು ಮಾತ್ರ ಇಂಥ ಕತೆಯನ್ನು ಈ ಶೈಲಿಯಲ್ಲಿ ಬರೆಯಲು ಸಾಧ್ಯ. ನರಸಿಂಹಯ್ಯನ ಸಂನ್ಯಾಸದಂತೆಯೆ ಮೊಂಗಮ್ಮನ ಮುನಿಸು ಕೂಡ ಕ್ಷಣಿಕವಾದದ್ದು. ನರಸಿಂಹಯ್ಯನ ಅತ್ತೆ ಬೆಂಡೆಕಾಯಿ ಹುಳಿಯಿಂದ ನರಸಿಂಹಯ್ಯನನ್ನು ಗೆದೆಯುವ ಉಪಾಯ ಮಾಡಿದಂತೆ ಇಲ್ಲಿ ಮೊಮ್ಮಗನ ಆಮಿಷ ತೋರಿಸಿ ಸೊಸೆಯು ಅತ್ತೆಯನ್ನು ಗೆದೆಯುತ್ತಾಳೆ. "ಸಂನ್ಯಾಸ ಅಲ್ಲದ ಸಂನ್ಯಾಸ"ದಲ್ಲಿ ಕತೆಯು ದುಃಖದಲ್ಲಿ ಕೊನೆಗೊಳ್ಳಲಾರದೆಂಬ ಅಂಶವು ಕತೆಯ ಶೈಲಿಯಲ್ಲಿಯೇ ಮೊದಲಿನಿಂದಲೂ ವ್ಯಕ್ತವಾಗಿದೆ. ಆದರೆ "ಮೊಸರಿನ ಮೊಂಗಮ್ಮ" ಕತೆಯಲ್ಲಿ ಮಾತ್ರ ಸ್ವಲ್ಪ ಆಯ ತಪ್ಪಿದರೂ ಜೀವನವು ದುಃಖಮಯವಾಗಬಹುದಾದ ಸಂದರ್ಭವಿದೆ. ಮೊಂಗಮ್ಮನು ತನ್ನ ಸೊಸೆ ಮತ್ತು ಮೊಮ್ಮಗನನ್ನು ಒಪ್ಪಿಕೊಳ್ಳುವ ವಿಧಾನದಲ್ಲಿ ಅವಳ ಸುತ್ತಲಿನ ಜೀವನದ ಪಾತ್ರವೆಷ್ಟಿದೆಯೋ ಅಷ್ಟೇ ಅವಳ ಮಮತೆಯ ಪಾತ್ರವೂ ಇದೆ. ಹೀಗಾಗಿ ಕತೆಯನ್ನು ಕೇವಲ ಸಾಮಾಜಿಕ ಪರಿಕರಗಳ ಮೌಲ್ಯವಿಧಾನದಲ್ಲಿ ಸಿಲುಕಿಸಲು ಸಾಧ್ಯವಿಲ್ಲ. ವಾಚಾಳಿಯಂತೆ ತೋರುವ ಮೊಂಗಮ್ಮ ಆಡುವ ಮಾತುಗಳೆಲ್ಲವೂ ಅವಳ ಬೇಗುದಿಗೆ ನಾಟಕೀಯತೆಯನ್ನು ಕೊಡುತ್ತವೆ, ಇಂಥ ಒಳತೋಟಿಯ ಬೇಗುದಿಯ ಅಭಿವ್ಯಕ್ತಿಯ ಅಭಾವವೇ ಮಾಸ್ತಿಯವರ ಕೆಲವು ಕತೆಗಳಲ್ಲಿ ಊನವಾಗಿ ತೋರುವುದೆಂದು ನಾನು ಈಗಾಗಲೇ ಹೇಳಿದ್ದೇನೆ. ಈ ಕತೆಯಲ್ಲಿ ಕೂಡ ನಿರೂಪಕಿಯ ಜೀವನದ ಒಂದು ಮಗ್ಗುಲು ಮೊಂಗಮ್ಮನ ಮುನಿಸಿಗೆ ಸಂವಾದಿಯಾಗಿದ್ದರೆ ಕತೆಯ ಪರಿಪೂರ್ಣತೆ ಇನ್ನೂ ಹೆಚ್ಚಾಗುತ್ತಿತ್ತು. ಹೀಗೆ ಯೋಚಿಸಲು ನಮಗೆ ಬಂದಿರುವುದೇ ನವ್ಯಸಾಹಿತ್ಯದಿಂದಾದುದರಿಂದ ಮತ್ತು ಈ ವಿಮರ್ಶಾ ಮಾನದಂಡ ಮಾಸ್ತಿಯವರ ಕತೆಗಳ ಚರ್ಚೆಯು ಈ ವಿಮರ್ಶಾ ಮಾನದಂಡದ ಬೆಳಕಿನಲ್ಲಿ ನಡೆಯಬೇಕಾಗುತ್ತದೆ.

ಮಾಸ್ತಿಯವರ ಸುಮಾರು ನೂರು ಕತೆಗಳಲ್ಲಿಯೂ ಅಭಿವ್ಯಕ್ತಿಯಲ್ಲಿ ಶೈಲಿಯ ಬದಲಾವಣೆ ಕಂಡುಬರುವುದಿಲ್ಲ. ಕೃತಿಗಳ ಬೆಳವಣಿಗೆಯ ದೃಷ್ಟಿಯಿಂದ ಲೇಖಕನೊಬ್ಬನಲ್ಲಿ ಈ 'ಧಾತುಪಲ್ಲಟ' ಅವಸ್ಥೆಯೊಂದು ಅವಶ್ಯಕವೆನಿಸುತ್ತದೆ. ಮಾಸ್ತಿಯವರಿಂದಲೇ ಪ್ರಭಾವಿತರಾದ ಯಶವಂತ ಚಿತ್ತಾಲರ ಕತೆಗಳನ್ನು ಓದುವಾಗ ಇಂಥ ಒಂದು 'ಧಾತು ಪಲ್ಲಟ' ದ ಸ್ಥಿತಿ ಅರಿವಿಗೆ ಬರುತ್ತದೆ. ನವೋದಯ, ನವ್ಯ ಮತ್ತು ನವ್ಯೋತ್ತರ – ಈ ಮೂರು ಸಂದರ್ಭಗಳಲ್ಲಿಯೂ ಕತೆಗಳನ್ನು ಬರೆದ ಚಿತ್ತಾಲರು ಶೈಲಿ ಮತ್ತು ವಸ್ತು

ವಿನ ದೃಷ್ಟಿಯಿಂದ ಹೊಸ ಸಾಹಿತ್ಯಿಕ ಧಾತುವನ್ನು ತಮ್ಮ ಕೃತಿಗಳ ಮಾಂಸಖಂಡಗಳನ್ನಾಗಿ ಮಾಡಿಕೊಳ್ಳುವಲ್ಲಿ ಶ್ರಮಪಟ್ಟರು. ಸಾಹಿತ್ಯದ ಎಲ್ಲ ಹೊಸ ಗಾಳಿಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಲು ಹೋಗಿ 'ತಮ್ಮತನವನ್ನೇ' ಕಳೆದುಕೊಂಡು ನೇತ್ಯಾತ್ಮಕ 'ತೇಪೆ ಸಾಹಿತ್ಯ'ವನ್ನು ರಚಿಸಿದವರನ್ನು ಕುರಿತು ನಾನು ಹೇಳುತ್ತಿಲ್ಲ. ಆದರೆ ಸ್ಪಂದಿಸಿದ ರೀತಿಯಲ್ಲಿಯೇ ಪೂರ್ವಾಶ್ರಮವನ್ನು ಕ್ರಿಯಾಶೀಲವಾಗಿ ಅಂತರಗಂಗೆಯು 'ಸಂಬಂಧವಿದ್ದೂ ತೊರೆದ' ಚಿತ್ತಾಲರಂತೆ ಮಾಸ್ತಿಯವರಲ್ಲಿ ಬೆಳವಣಿಗೆಯ ಅವಸ್ಥೆಗಳನ್ನು ಗುರುತಿಸುವುದು ಕಷ್ಟ. "ಮಾಯಣ್ಣನ ಕನ್ನಡಿ" ಎಂಬ ಮಾಸ್ತಿಯವರ ಕೊನೆಯ ಹಂತದ ಕತೆಯಲ್ಲಿ ಕೂಡ ಪ್ರಾರಂಭದ ಶೈಲಿ ಮತ್ತು ಧೋರಣೆಗಳನ್ನೇ ಕಾಣುತ್ತೇವೆ. ಬಹುಕಾಲದವರೆಗೆ ಬೇರೆ ರೀತಿ ಬರೆಯುವವರು ಬಾರದ್ದರಿಂದ ಸಹ ಸಾಹಿತಿಗಳ ಪ್ರಭಾವದಿಂದ ಮಾಸ್ತಿಯವರ ಬರವಣಿಗೆ ಹೀಗಾಗಿರಬಹುದೆ? ಜಗತ್ತನ್ನು ಎಲ್ಲ ಓರೆ–ಕೋರೆಗಳೊಡನೆ ಒಪ್ಪಿಕೊಂಡ ಲೇಖಕರೆಲ್ಲರ ಸಮಸ್ಯೆ ಇದಾಗಿರಬಹುದೆ? ಜಗತ್ತನ್ನು ಒಪ್ಪಿಕೊಳ್ಳುವ ಕ್ರಿಯೆಯು ಲೇಖಕನಲ್ಲಿ ಹಂತಹಂತವಾಗಿ ಸೃಜನಾತ್ಮಕವಾಗಿ ಮೂಡಬೇಕಾದ ಕ್ರಿಯೆ. ಪ್ರಾರಂಭದಲ್ಲಿಯೇ ಜಗತ್ತನ್ನು ಒಪ್ಪಿಕೊಂಡರೆ, 'ಒಪ್ಪಿಕೊಳ್ಳುವ ಕ್ರಿಯೆಯು' ಸೃಜನಾತ್ಮಕ ಅಭಿವ್ಯಕ್ತಿಯಿಂದ ಮಾಸ್ತಿಯವರಂತೆ ಲೇಖಕನು ವಂಚಿತನಾಗಿ ಉಳಿಯಬಹುದೆ? ●

ಮಗು ಮತ್ತು ಕವನ

"ಕವನವೆಂದರೇನಮ್ಮ?"
ಅಮ್ಮನ ಹೊಸ ಸೀರೆಯ ನಿರಿಗೆಗಳನ್ನು
ಹಿಡಿಯುತ್ತ ಜಗ್ಗುತ್ತ
ಕೇಳಿತು ಹಾಲುಗಲ್ಲದ ಹಸುಳೆ
ಕವಿಗೋಷ್ಠಿಗೆಂದು ಹೊರಟವಳು ಸಿಡುಕಿದಳು
"ನಿನಗೆ ಗೊತ್ತಾಗುವುದಿಲ್ಲ ಬಿಡು"

ಪೆಚ್ಚು ಮುಖದ ಪಾಪು
ಅಪ್ಪನ ತೆಕ್ಕೆಗೆ ಬಿದ್ದು
ಮತ್ತದೇ ಪ್ರಶ್ನೆಯೆತ್ತಬೇಕೇ?

ಶಾಂತಾ ನಾಗರಾಜ್, 161A/16 ಮಹಡಿ, ಒಂದನೇ 'ಎನ್' ಬ್ಲಾಕ್, ರಾಜಾಜಿನಗರ
ಬೆಂಗಳೂರು–560 010

ತನ್ನದೇ ಕವನಗಳ ಗುಂಗಿನಲಿ
ಲಯಗಳಲ್ಲಿ ಲಹರಿಗಳಲ್ಲಿ!
ತೇಲುತ್ತಿದ್ದ ಅಪ್ಪ
ಕೈ ಸುಡುತ್ತಿದ್ದ್ದ, ಕೊಡವಿ ನುಡಿದ
"ಅದು ಸಿಗರೇಟಿನಂತೆ, ಮಗು
ಒಂದು ಕಡೆ ಹತ್ತಿ ಉರಿಯುತ್ತೆ
ಮತ್ತೊಂದೆಡೆ ತಂಪು ಸುಖ ನೀಡುತ್ತೆ"

ಅಪ್ಪನುತ್ತರಕ್ಕೂ ತನ್ನುತ್ತರಕ್ಕೂ ತಾಳೆಯಾಗದ್ದಕ್ಕೆ
ತನ್ನಾಯಾಳ ಸೆರಗನ್ನು ಸೇರಿ ಕನವರಿಸಿತು
"ನಿನಗೆ ಗೊತ್ತೇ ಆಯಾ ಕವನವೆಂದರೇನೆಂದು?"
ನಿಟ್ಟುಸಿರಿನವಳು ಮೆಟ್ಟಿಲ ಮೇಲೆ ಕುಕ್ಕರಿಸಿ
ಕಟ್ಟೊಣಗಿದೆಲೆಯನ್ನು ಕೈಚೀಲದಿಂದೆಳೆದು
ಆಗಷ್ಟೆ ಚಿಗುರಿದ ನಳನಳಿಸುವೆಲೆಯೆಂಬಂತೆ
ನವಿರಾಗಿ ನೇವರಿಸಿ,
ಹೆಬ್ಬೆಟ್ಟಿನುಗುರಿಂದ ಕಟ್ಟಿಗೆಯ ಸುಣ್ಣವನು
ಚಿಟ್ಟೆಂದು ತುಂಡರಿಸಿ, ಗೊಣಗಿದಳು
"ಅದು ಚಿನ್ನಾ ದೊಡ್ಡವರದ್ದೊಂದು ಆಟ
ಜಡ್ಡು ಕಟ್ಟಿದ ಆಟ; ಮುಟ್ಟಿ ಮುಗಿಯದ ಆಟ
ಹೊತ್ತು ಹೋಗದ ಆಟ; ತುತ್ತು ಗಳಿಸದ ಆಟ."

—ಶಾಂತಾ ನಾಗರಾಜ್

ವರ್ತಮಾನ

ರೈಲ್ವೇ ವಿಶ್ರಾಂತಿಗೃಹ, ಆವರಿಸಿದ ಏಕಾಂತ
ಆರಾಮ ಕುರ್ಚಿಯ ತುಂಬ ಒಬ್ಬ ಅಜಾನುಬಾಹು
ವೇಷ-ಭೂಷಣ ಎಲ್ಲಾ ಪಾಶ್ಚಾತ್ಯ
ಮಿಸುಗೇ ಇಲ್ಲ
ಬೇಸಿಗೆಯ ಮಧ್ಯಾಹ್ನ ನೀಟಾಗಿ ನಿಂತ ವಿದ್ಯುತ್ ಕಂಬ

ಎಚ್. ಎಸ್. ಭೀಮನಗೌಡರ, ಬಿ-9, ಕುರಣಕರ ಚಾಳ, ಸಂಕೇಶ್ವರ-591313, ಜಿ. ಬೆಳಗಾವಿ

ಗಾಳಿಗೆ ತೂರಿಬರುವ ಕಲ್ಲಿದ್ದಲು ಪುಡಿ
ಮೈತುಂಬಿದರೂ ಜಾಡಿಸಬೇಕೆಂಬ ಜಾಗರೂಕತೆಯಿಲ್ಲ.
ಬೇರು ಎಲ್ಲಿದೆಯೋ ಗೊತ್ತಿಲ್ಲ
ಟೊಂಗೆಯೆಲ್ಲ ಕಳಕೊಂಡು
ಬರಿ ಬೊಡ್ಡೆ ನಿಂತ ಆಲದ ಮರ
ಜ್ಞಾನತಂತು ಯಾವ ಗೃಹದಲ್ಲಿ ಹರಡಿದೆ ಗೊತ್ತಿಲ್ಲ
ಸ್ತಬ್ಧ ಮಗ್ನವಾಗಿರುವ ಕಂಪ್ಯೂಟರ್.

ಇಂಥವನನ್ನು ಕಂಡದ್ದೇ ಪ್ರಥಮ ಬಾರಿ ಆ ಇನ್ನೊಬ್ಬನಿಗೆ
ಮಳೆಯಾಗುವುದು ಬಿಟ್ಟು ಪ್ರಳಯವಾದರೂ
ಇಂಥ ಪ್ರಸಂಗ ಒದಗಿರಲಿಲ್ಲ.
ನಿಶ್ಶಬ್ದನಾಗಿ, ನಿಷ್ಕ್ರಿಯನಾಗಿ
ಹೊತ್ತು ಉರುಳಿಸುವುದಾದರೂ ಹೇಗೆ?
ಬಿದ್ದ ವರ್ತಮಾನ
ಪತ್ರಿಕೆಯ ಮೇಲೆ ಕಣ್ಣಾಡಿಸಿದರೆ
ಆ ಬೋಫೋರ್ಸ್ ವ್ಯಂಗ್ಯ, ಕಪಿಲನ ಬ್ಯಾಟ್,
ಶ್ರೀದೇವಿಯ ಹೊಸ ಭಂಗಿ
ಇಂದ್ರಿಯಗಳನ್ನು ಅರಳಿಸಲಿಲ್ಲ ಪಶು–ಪಕ್ಷಿಗಳಂತೆ,
ಗಾಳಿ–ಬಿಸಿಲಿನಂತೆ.

ಗಿಡದ ಆಸರೆಗೆ ಅರಳುವ ಬಳ್ಳಿಯಂತೆ
ಆಗಂತುಕನ ಕಡೆಗೆ ಹೊರಳಿ
ಪಾಪ ತನ್ನ ಹಾಗೇ ಗಾಡಿ ತಪ್ಪಿಸಿಕೊಂಡ
ತಬ್ಬಲಿಯ ಜೊತೆ
ಮಾತಾಡಲುದ್ಯುಕ್ತನಾದ.

ಸಾಹೇಬರದು ಗಾಗಲ್ಲಿನ ಬರಿ ವಸ್ತುನಿಷ್ಠ ನೋಟ
ಸುಡುಗಾಡಿನಂತಿತ್ತು,
ಬಿಡಲಿಲ್ಲ ಆ ಇನ್ನೊಬ್ಬನು
ಕೈ ಚುರುಗುಡುವವರೆಗೂ ಒಲಿಯಲ್ಲಿ

ಸೌದೆ ತಳ್ಳುವ ತವಕ
ಹೀಚುಕಾಯಾದರೂ ಉದುರುವವರೆಗೆ
ಟೊಂಗೆ ಆಲಂಗಿಸುವ ಆವೇಶ.
ಹೆಸರು ಕೇಳಿದ, ಊರು ಕೇಳಿದ,
ಮದುವೆ–ಮಕ್ಕಳ ಕೇಳಿದ
ಏಳುಕೊಳ್ಳ ಸುತ್ತಿ ಸುಣ್ಣವಾದರೂ
ಜನಪದನಾಯಕನಿಗೆ ಅದೇ ಮೌನ, ನಿರ್ಭಾವ, ನಿಸ್ಸಂಗ.
ನಿದ್ದೆ ಹತ್ತಿದೆಯೇ? ಸತ್ತಿದ್ದಾನೆಯೇ?
ಸುವಹನವೇ ಇಲ್ಲದ ಮೇಲೆ ನಿಲ್ಲುವುದಾದರೂ ಹೇಗೆ?
ಗೇರು ಬದಲಿಸಿದರೂ ಮುನ್ನಡೆಯದ ಗಾಡಿ.
ಘೋರ ಮಳೆಯಾಗಿ ನೀರು ಮಡುವಾಗಿ ಹರಿಯುವಾಗ
ಬಂಡೆಯೊಂದರ ಮೇಲೆ ಕುಳಿತು
ಮುಸಿ ಸೇದುತ್ತ ಜೀವ ಹಿಡಿದ ಕುರಿಗಾರನಂತೆ
ಕೊನೆಯ ಯತ್ನವಾಗಿ
ಜೊತೆ ಚಹಾ ಕುಡಿಯಲು ಆಮಂತ್ರಿಸಿದ
ಕೂಡಲೆ ಕಿತ್ತುಕೊಂಡು ಎದ್ದವನೆ
ಚಿಟ್ಟನೆ ಚೀರಿ ಅಪ್ಪವಾಗಿ ಆಲಂಗಿಸಿಬಿಡಬೇಕೇ
ಧೃತರಾಷ್ಟ್ರನಂತೆ!
ಕಳಶಪ್ಪನ ಗಂಡ್ಸವೇ ಕಡಕೊಂಡು ಬಿದ್ದಂತೆ!

ಕಪಾಳದ ಮೇಲೆ ಧಾರಾಕಾರ ಕಣ್ಣೀರು
ಆ ಇನ್ನೊಬ್ಬನ ಬಗಲಗಸಿ ಅಂಗಿಯ ಮೇಲೂ ಹರಿದಿತ್ತು.
ತಕ್ಷಣ ಸುತ್ತಲೂ ಕೂಡಿದ ಜನ
ವಿಚಿತ್ರವೆಂದರೆ
ಸತ್ತು ಬದುಕಿದವನಂತೆ ದೈನ್ಯಾವಸ್ಥೆಯಲ್ಲಿದ್ದ
ಆ ಇನ್ನೊಬ್ಬನನ್ನೇ ಸುತ್ತುವರಿದುದು ಸಾಕುಸಾಕಾಯಿತು.

(ಇಷ್ಟರಲ್ಲೇ ಪ್ರಕಟವಾಗಲಿರುವ ಸಂಕಲನದಿಂದ)

— ಎಚ್. ಎಸ್. ಭೀಮನಗೌಡರ

ನಾನೂ ಹುಲಿ ಹೊಡೆದೆ

— ಬಿಳುಮನೆ ರಾಮದಾಸ್

ಮಳೆಗಾಲದ ಒಂದು ದಿನ ನಾನು ಮೇಗರವಳ್ಳಿಯ ಬಂಗಲೆ ಬೈಲಿನ ರಾಮಯ್ಯ ಕಾಮತರ ಹೋಟೆಲ್‌ನಲ್ಲಿ ಚಹ ಕುಡಿಯುತ್ತ ಕುಳಿತಿದ್ದೆ. ಮಳೆ 'ಧೋ' ಎಂದು ಸುರಿಯುತ್ತಲಿತ್ತು. ಚರಂಡಿಯಲ್ಲಿ ಕೆಂಪುನೀರು ಭೋರ್ಗರೆದು ಧುಮುಕುತ್ತಿತ್ತು. ಮಲೆನಾಡಿನ ಮಳೆಯೇ ಹಾಗೆ. ಮಳೆಗಾಲ ಪ್ರಾರಂಭವಾಯಿತೆಂದರೆ ಬೇಸರ ತರುವಷ್ಟು ಮಳೆ ಜೊರ್ರನೆ ಸುರಿಯುತ್ತಲೇ ಇರುತ್ತದೆ. ಸೂರ್ಯನ ದರ್ಶನವಿಲ್ಲದೆ ಎಷ್ಟೋ ದಿನಗಳಾಗುತ್ತದೆ. ಒಗೆದ ಬಟ್ಟೆಗಳು ಒಣಗಬೇಕಾದರೆ ಒಂದು ವಾರವಾದರೂ ಬೇಕಾಗುತ್ತದೆ. ಒಣಗಲು ಹರಡಿದ ಬಟ್ಟೆಗಳಲ್ಲಿ ಬೂಶಲು ಏಳುತ್ತದೆ. ಹಿಡಿದ ಮಳೆ ಬಿಡುವುದೇ ಇಲ್ಲ. ರೈತರು ಗದ್ದೆ ಕೆಲಸಕ್ಕೆ ತೊಂದರೆ ಮಾಡುವ ಮಳೆಗೆ "ಇದರ ಅಂಬಾರ ಮಡಿಯು" ಎಂದು ಹಿಡಿಶಾಪ ಹಾಕುವುದು ಉಂಟು. ನಾನು ಹಳ್ಳಿಗೆ ಹೋಗಲು ಮಳೆ ಕಡಿಮೆಯಾಗುವುದನ್ನೇ ನೋಡುತ್ತ ಕುಳಿತಿದ್ದೆ, ಆ ಸಮಯದಲ್ಲಿ ತೀರ್ಥಹಳ್ಳಿ ಕಡೆಯಿಂದ ಆಗುಂಬೆ ಜಂಗ್ಲಿಯಿಂದ ನಾಟಾ ಸಾಗಿಸುವ ಹತ್ತು ಚಕ್ರದ ಉದ್ದನೆಯ ಖಾಲಿ ಲಾರಿಯೊಂದು ಬಂದು ಕಾಮತರ ಹೋಟೆಲಿನೆದುರಿಗೆ ನಿಂತಿತು. ಮಳೆ ಇಲ್ಲದಿದ್ದರೆ ಹತ್ತು ಚಕ್ರದ ಲಾರಿ ನೋಡಲು ಹುಡುಗರು ಘೇರಾಯಿಸುತ್ತಿದ್ದರು. ಚಿಕ್ಕ ಹುಡುಗನಾಗಿದ್ದಾಗ ನಾನೂ ಆ ಲಾರಿಯನ್ನು ವಿಸ್ಮಯದಿಂದ ನೋಡುತ್ತ ನಿಂತವನೆ. ಕಾಫಿ ಕುಡಿಯಲು ಬಂದ ಲಾರಿ ಡ್ರೈವರ್ ಕಂಡಕ್ಟರ್‌ರು ಆಣುವಳ್ಳಿ ಸೇತುವೆ ಹತ್ತಿರ ರಸ್ತೆಯಲ್ಲಿ ಒಂದು ಹುಲಿ ನಾಲ್ಕು ದನಗಳನ್ನು ತಾವು ನೋಡುತ್ತಿದ್ದಂತೆಯೆ ಹಿಡಿಯಿತೆಂದೂ ತಾವು ಎಷ್ಟು ಲಾರಿ ಹಾರನ್ ಬಾರಿಸಿದರೂ ಹುಲಿ ಹೆದರದೆ ದನಗಳನ್ನು ಕೊಂದು ರಕ್ತ ಕುಡಿದು ಹೋಯಿತೆಂದೂ ಹೇಳಿದರು. ಅಲ್ಲಿ ಕುಳಿತಿದ್ದ ನಾವುಗಳು ಕುತೂಹಲದಿಂದ ಕೇಳಿದೆವು. ಹುಲಿಗಳು ಜಾನುವಾರುಗಳನ್ನು ಹಿಡಿಯುವುದು ನಮಗೇನು ಆಶ್ಚರ್ಯದ ಸಂಗತಿಯಾಗಿರಲಿಲ್ಲ. ಕಾಡಿಗೆ ಮೇಯಲು ಹೋದ ದನಕರುಗಳನ್ನು ಹುಲಿ ಹಿಡಿಯುವುದು ನಮಗೆ ಸ್ವಾಭಾವಿಕವಾಗಿತ್ತು. ಕಾಡಿಗೆ ಹೋದ ದನಕರುಗಳು ಸಂಜೆ ಕೊಟ್ಟಿಗೆಗೆ ಬಾರದಿದ್ದರೆ ಅವು ಹುಲಿ ಬಾಯಿಗೆ ಹೋದವೆಂದೇ ನಾವು ತಿಳಿಯುತ್ತಿದ್ದೆವು. ಕೆಲವೊಮ್ಮೆ ಹಳ್ಳಿಗಳಲ್ಲಿ ದನಕಾಯುವ ಹುಡುಗರು ನೋಡುತ್ತಿದ್ದಂತೆಯೆ ಹುಲಿಗಳು ದನಕರುಗಳ ಮೇಲೆ ಆಕ್ರಮಣ ಮಾಡುತ್ತಿದ್ದುದೂ ಇತ್ತು. ಆದರೆ ಹಾಡುಹಗಲಿನಲ್ಲಿ ಜನಗಳು ವಾಹನಗಳು ಓಡಿಯಾಡು

ಬಿಳುಮನೆ ರಾಮದಾಸ್, C/o ಕೃಷ್ಣರಾಜು, ನಂ. 12, 35ನೇ 'ಬಿ' ಕ್ರಾಸ್, 11-ಎ ಮೇಯಿನ್
ಜಯನಗರ 4ನೇ ಟಿ ಬ್ಲಾಕ್, ಬೆಂಗಳೂರು-560 041

ವಲ್ಲಿ ರಾಜಾರೋಷಾಗಿ ಹೆದ್ದಾರಿಯಲ್ಲಿ ಹುಲಿ ಜಾನುವಾರುಗಳನ್ನು ಹಿಡಿದದ್ದು ನಮಗೆ ಸೋಜಿಗದ ಸಂಗತಿಯಾಗಿತ್ತು. ಡ್ರೈವರ್ ಕಂಡಕ್ಟರುಗಳು ದನಗಳನ್ನು ಹುಲಿ ಹಿಡಿದ ಸುದ್ದಿ ಹೇಳುತ್ತಲೆ ನಾವು ಅಲ್ಲಿ ಕುಳಿತ್ತಿದ್ದವರು ಎಲ್ಲಿ? ಎಲ್ಲಿ? ಎಂದು ಮತ್ತೆ ಮತ್ತೆ ಕೇಳಿ ತಿಳಿದು ಆಣುವಳ್ಳಿ ಸೇತುವೆ ಕಡೆಗೆ ಜಡಿಮಳೆಯನ್ನು ಲಕ್ಷಿಸದೆ ಕುಬಳಿ ಕೊಡೆಗಳನ್ನು ಸೂಡಿಕೊಂಡು ಓಡಿದೆವು.

ಆಣುವಳ್ಳಿ ಸೇತುವೆ ತೀರ್ಥಹಳ್ಳಿ ಕಡೆಯಿಂದ ಬರುವಾಗ ಮೇಗರವಳ್ಳಿಗೆ ಇನ್ನು ಒಂದು ಮೈಲಿ ದೂರವಿದೆ ಎನ್ನುವಾಗ ಸಿಗುತ್ತದೆ. ಆಣುವಳ್ಳಿ ಸೇತುವೆ ಕೆಲವು ವಿಚಾರಗಳಿಗೆ ಪ್ರಖ್ಯಾತವೂ, ಕುಖ್ಯಾತವೂ ಆಗಿತ್ತು. ಸ್ವಾತಂತ್ರ್ಯಪೂರ್ವದಲ್ಲಿ ಅಣುವಳ್ಳಿ ಸೇತುವೆ ಸಮೀಪ ರಾತ್ರಿ ಹೊತ್ತು ಒಬ್ಬೊಂಟಿಯಾಗಿ ತಿರುಗುವ ಮತ್ತು ದಕ್ಷಿಣ ಕನ್ನಡದಿಂದ ತೆಂಗಿನಕಾಯಿ ತುಂಬಿಕೊಂಡು ತೀರ್ಥಹಳ್ಳಿಗೆ ಮಾರಾಟಕ್ಕೆ ಹೋಗುವ ಎತ್ತಿನಗಾಡಿಗಳ ಮೇಲೆ ಲೂಟಿ ಕೊಲೆ ಸುಲಿಗೆ ನಡೆಯುತ್ತಿದ್ದವು. ಆದ್ದರಿಂದ ತೀರ್ಥಹಳ್ಳಿ ಎಳ್ಳಮವಾಸೆಗೆ ಹೋಗುವ ಜನಗಳು ಗುಂಪುಗುಂಪಾಗಿ ಕೈಯಲ್ಲಿ ದೊಣ್ಣೆ ಕತ್ತಿ ಮುಂತಾದ ಹತಾರು ಹಿಡಿದು ಹೋಗುತ್ತಿದ್ದರು. ಇದಲ್ಲದೆ ಅಣುವಳ್ಳಿ ಸೇತುವೆ ರಾತ್ರಿ ಹೊತ್ತು ದೆವ್ವ ಹೆದರಿಸುವುದಕ್ಕೂ ಮಳೆಗಾಲದಲ್ಲಿ ಸೇತುವೆ ಪಕ್ಕದಲ್ಲೆ ಹರಿಯುವ ತುಂಗಾನದಿ ಉಕ್ಕಿಹರಿದು ರಸ್ತೆಗೆ ನುಗ್ಗಿ ವಾಹನ ಸಂಚಾರಕ್ಕೆ ಅಡ್ಡಿಪಡಿಸುವುದೂ ಇತ್ತು. ಮಳೆಗಾಲದಲ್ಲಿ ರಸ್ತೆಗೆ ಏರಿದ ನೀರನ್ನು ನೋಡಲು ನಾವು ಹುಡುಗರು ಹೋಗುತ್ತಿದ್ದೆವು. ಕೆಂಪು ನೀರು ಕಸಕಡ್ಡಿಯನ್ನು ತೇಲಿಸಿಕೊಂಡು ರಭಸವಾಗಿ ಹರಿದು ಹೋಗುವುದು ನೋಡಲಿಕ್ಕೆ ತುಂಬಾ ಆನಂದವಾಗುತ್ತಿತ್ತು. ರಸ್ತೆ ಕಾಣದಂತೆ ಹೊಳೆ ನೀರು ರಸ್ತೆಗೆ ಮುಗುಚಿಕೊಂಡು ರಸ್ತೆಯ ಎರಡೂ ಪಕ್ಕದಲ್ಲಿದ್ದ ಗಗನಚುಂಬಿ ಧೂಪದ ಮರಗಳ ಬುಡವನ್ನು ಮುಚ್ಚಿಬಿಡುತ್ತಿತ್ತು. ಕತ್ತಲಾಯಿತೆಂದರೆ ಅಣುವಳ್ಳಿ ಸೇತುವೆ ಕಡೆ ಒಬ್ಬೊಬ್ಬರೆ ಹೋಗಲಿಕ್ಕೆ ಹೆದರುತ್ತಿದ್ದರು. ದೆವ್ವದ ಕಾಟ ಅತಿಯಾಗಿತ್ತು. ಆ ಕುರಿತು ಜನ ರೋಮಾಂಚನಕಾರಿ ಕತೆ ಹೇಳುತ್ತಿದ್ದರು. ಸೇತುವೆ ಸಮೀಪ ದೊಡ್ಡದೊಡ್ಡ ಮರಗಳಿದ್ದು ರಾತ್ರಿಹೊತ್ತು ಅದರ ನೆರಳು ರಸ್ತೆಯ ಮೇಲೆ ಬಿದ್ದು ಅತ್ತಕಡೆ ಹೋಗಲು ಭಯವಾಗುತ್ತಿತ್ತು.

ಹುಲಿ ದನಗಳನ್ನು ಹಿಡಿದದ್ದಲ್ಲದೆ ಮಳೆಗಾಲದ ಹೊಳೆ ನೀರು ಎಲ್ಲಿಯತನಕ ಏರಿದೆ ಎಂದು ನೋಡುವ ತವಕ ನಮಗಿತ್ತು. ನಾವು ಆಣುವಳ್ಳಿ ಸೇತುವೆ ತಲುಪಿದಾಗ ಹುಲಿ ಹಿಡಿದ ದನಗಳು ರಸ್ತೆ ಬದಿಯಲ್ಲಿ ಚರುಂಡಿಯಲ್ಲಿ ಮಲಗಿದ್ದವು. ಎಲ್ಲಾ ದನಗಳ ಕುತ್ತಿಗೆಯನ್ನು ಹುಲಿ ಹರಿದಿತ್ತು. ನೆತ್ತರು ಕುತ್ತಿಗೆಯ ನಾಳದಿಂದ ಸ್ವಲ್ಪ ಸ್ವಲ್ಪವಾಗಿ ಇನ್ನೂ ಇಳಿಯುತ್ತಿತ್ತು. ಮೂರು ದನಗಳು ಸತ್ತು ಹೋಗಿದ್ದವು. ಒಂದು ದನ ಇನ್ನೂ ಸತ್ತಿರಲಿಲ್ಲ. ಅರೆಗಣ್ಣಾಗಿ ಮಲಗಿದ್ದು ಹಿಂದಿನ ಕಾಲೊಂದನ್ನು

ಪ್ರಾಣ ಹೋಗುವ ಸಂಕಟದಲ್ಲಿ ಹಿಂದಕ್ಕೆ ಜಾಡಿಸುತ್ತಿತ್ತು. ಆ ತಾಣ ನಿರ್ಜನ ಪ್ರದೇಶ ವಾದ್ದರಿಂದ ಹುಲಿ ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ದಾಟುವಾಗ ದನಗಳು ರಸ್ತೆಯಂಚಿನ ಹಸಿರು ಮೇಯುತ್ತಿರುವುದನ್ನು ನೋಡಿ ಹುಲಿ ಹಿಡಿದಿರಬಹುದೆಂದು ನಾನು ಊಹಿಸಿದೆ. ರಸ್ತೆಯಂಚಿನ ಧೂಪದ ಮರಗಳ ಹಿಂದೆ ಕಾಡು ದಟ್ಟವಾಗಿ ಬೆಳೆದಿತ್ತು. ಹುಲಿ, ಕಾಡುಹಂದಿ ವಾಸಿಸಲು ಪೊದೆ ಹಳು ಬೆಳೆದು ಕಾಡು ಹಸಿರುಮಯವಾಗಿತ್ತು. ಮಳೆಗಾಲದ ಹಸಿರು ಹುಲ್ಲು ಮೇದು ದಷ್ಟಪುಷ್ಟವಾಗಿ ಬೆಳೆದ ದನಗಳನ್ನು ಹುಲಿ ಹಿಡಿದದ್ದು ನೋಡಿ ನನಗೆ ದನಗಳ ಮೇಲೆ ಕನಿಕರವಾಯಿತು. ಒಂದೇ ಸಾರಿಗೆ ನಾಲ್ಕು ದನಗಳನ್ನು ಕೊಲ್ಲಬೇಕಾದರೆ ಅದು ಒಂದೇ ಹುಲಿಯ ಕೆಲಸವೆ ಅಥವಾ ಇನ್ನೂ ಅದರ ಜೊತೆಯಲ್ಲಿ ಬೇರೆ ಹುಲಿ ಇದ್ದವೆ ಎಂದು ನಾನು ಯೋಚಿಸಿದೆ; ಮರಿ ಹುಲಿ ಬೆದೆ ಹುಲಿಗಳ ಹೊರತಾಗಿ ಹುಲಿಗಳು ಗುಂಪಾಗಿ ಇರುವುದಿಲ್ಲ. ಹೆಣ್ಣಾಗಲಿ, ಗಂಡಾಗಲಿ ಒಂಟಿಯಾಗಿ ಇರುವುದೇ ಅವುಗಳ ಸ್ವಭಾವ. ಒಂದೇ ಹುಲಿ ಹೀಗೆ ನಾಲ್ಕು ದನ ಗಳನ್ನು ಒಂದೇ ಬಾರಿಗೆ ಹಿಡಿಯುವ ಸಾಧ್ಯತೆಯೂ ಇದೆ. ಒಂದನ್ನು ಹುಲಿ ಹಿಡಿದಾಗ ಉಳಿದ ದನಗಳು ಧೈರ್ಯದಿಂದ ಹುಲಿಯನ್ನು ತಿವಿಯಲು ಹೋಗಿ ಸಾವನ್ನು ತಂದು ಕೊಳ್ಳುವುದೂ ಇಲ್ಲದಿಲ್ಲ. ಈ ಸಂಭವ ತೀರಾ ಕಡಿಮೆ. ಒಂದನ್ನು ಹುಲಿ ಹಿಡಿಯು ವಾಗ ಉಳಿದವು ಪರಾರಿಯಾಗುವ ಸಂದರ್ಭವೇ ಹೆಚ್ಚು. ನಾಲ್ಕು ದನಗಳನ್ನು ಹುಲಿ ಒಂದೇ ಬಾರಿಗೆ ಹಿಡಿದ ಬಗ್ಗೆ ಚಿಂತಿಸುತ್ತಾ ನಾನು ಹೊಳೆಯ ಕಡೆಗೆ ಹೋದೆ. ನಾನು ಗೊಂದಲದಲ್ಲಿದ್ದೆ.

ಕಾಡಿನಲ್ಲಿ ಮಳೆಗೆ ನೆನೆದು ಕೊಳೆತ ಒಣ ಎಲೆಗಳ ವಾಸನೆ ಮೂಗಿಗೆ ಹೊಡೆ ಯಿತು. ಇದೇ ವಾಸನೆಯನ್ನು ಇದೇ ಕಾಡಿನಲ್ಲಿ ನಾನು ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಅನುಭವಿಸಿದ್ದೆ. ಧೂಪದ ಮರದ ಬುಡದಲ್ಲಿ ಹೆಬ್ಬೇರುಗಳ ಸಂಧಿಯಲ್ಲಿ ಏಳುವ ಚುಳ್ಳಬಿ (ಅಣಬೆ) ಗಳನ್ನು ಹೆರಕಲು ನಾನು ನನ್ನ ಓರಗೆಯ ಹುಡುಗ ರೊಂದಿಗೆ ಬರುತ್ತಿದ್ದೆ. ಹೊಳೆಯ ದಂಡೆಯ ಮೇಲೆ ನಿಂತು ನೀರನ್ನು ನೋಡುತ್ತಾ ನಿಂತೆ. ಮೋಡಗಳು ಆಕಾಶದಲ್ಲಿ ಕಿಕ್ಕಿರಿದು ಸೇರಿ ಕತ್ತಲಾದಂತೆ ಕಾಣುತ್ತಿತ್ತು. ಜೀರುಂಡೆ ನೊಣಗಳು ಕತ್ತಲಾಯಿತೆಂದು ಮೋಸ ಹೋಗಿ ಪೈಪೋಟಿಯ ಮೇಲೆ ಕೂಗುತ್ತಿದ್ದವು. ಒಂದು ಕೂಗುವುದು ನಿಲ್ಲಿಸಿದರೆ ಇನ್ನೊಂದು ಕಿರುಚಲು ಶುರು ಮಾಡುತ್ತಿತ್ತು. ಹೊಳೆಯಲ್ಲಿ ನೀರು ದಂಡೆಗೆ ಏರಿತ್ತು. ಹಳ್ಳದಿಂದ ಸೇತುವೆಯಿಂದ ಕೆಂಪು ನೀರು ಹೊಳೆಗೆ ಭೋರ್ಗರೆದು ಬೀಳುತ್ತಿತ್ತು. ಹೊಳೆಯಲ್ಲಿ ನೀರು ರಭಸದಿಂದ ಕೆಳಮುಖವಾಗಿ ಹರಿಯುತ್ತಿತ್ತು. ಕಸಕಡ್ಡಿಗಳು ನೀರಿನಲ್ಲಿ ತೇಲಿ ಹೋಗುತ್ತಿದ್ದವು. ಇದೇ ರೀತಿ ಜಡಿಮಳೆ ಸುರಿದರೆ ರಾತ್ರಿ ಬೆಳಗಾಗುವುದರೊಳಗೆ ಹೊಳೆ ನೀರು ರಸ್ತೆಗೆ ನುಗ್ಗಿ ರಸ್ತೆಯಲ್ಲಿ ವಾಹನ ಸಂಚಾರ ನಿಲ್ಲುವ ಸಂದರ್ಭವಿತ್ತು. ನಾನು ಹೊಳೆ ದಡ

ದಲ್ಲಿನ ಪೊದೆಗಳು ನೀರಿನಲ್ಲಿ ಮುಳುಗುವುದನ್ನು ನೋಡುತ್ತಾ ನಿಂತೆ. ಈ ನಡುವೆ ಹೊಳೆಯಲ್ಲಿ ಒಂದು ಅದ್ಭುತ ದೃಶ್ಯ ನನ್ನ ಕಣ್ಣಿಗೆ ಬಿದ್ದಿತು. ತೇಲಿ ಹೋಗುವ ಒಂದು ಮರದ ದಿಮ್ಮಿಯ ಮೇಲೆ ಒಂದು ನಾಗರಹಾವು ಒಂದು ಇಲಿ ಆಶ್ರಯ ಪಡೆದಿದ್ದವು. ಮರದ ದಿಮ್ಮಿಯ ಎರಡೂ ತುದಿಯಲ್ಲಿ ಎರಡೂ ಒಂದನ್ನೊಂದು ನೋಡುತ್ತಾ ಇದ್ದವು. ನಾಗರಹಾವು ಹೆಡೆ ಬಿಚ್ಚಿರಲಿಲ್ಲ. ಪ್ರವಾಹದ ಕಾವು ಎರಡಕ್ಕೂ ಬಿಸಿ ತಟ್ಟಿರಬೇಕು. ಹಸಿವಿಗಿಂತ ಪ್ರಾಣ ಹಾವಿಗೆ ಮುಖ್ಯವಾಗಿರಬೇಕು. ಇಲ್ಲಿಗೆ ಹಾವು ನೀರು ಎರಡೂ ಅಪಾಯವಾಗಿ ಕಂಡಿರಬೇಕು. ಅದರ ಕತೆ 'ಇತ್ತ ದರಿ ಅತ್ತ ಪುಲಿ' ಎನ್ನುವಂತಾಗಿತ್ತು. ಹಾವು ಮುಂದೆ ಬಂದರೆ ಅದು ನೀರಿಗೆ ಧುಮುಕಲು ಹಿಂಜರಿಯುತ್ತಿರಲಿಲ್ಲ. ಸಾವಿನ ಅಂಚಿನಲ್ಲಿರುವ ಎರಡೂ ಜೀವಗಳು ದ್ವೇಷ, ಅಸೂಯೆ, ಹಸಿವನ್ನು ಮರೆತುಬಿಟ್ಟಿದ್ದವೆ? ಮರದ ದಿಮ್ಮಿ ಎರಡೂ ಜೀವಗಳನ್ನು ಹೊತ್ತು ಸರಾಗವಾಗಿ ತೇಲಿ ಹೋಯಿತು. ಎರಡು ಜೀವಗಳು ನಿಶ್ಚಲವಾಗಿದ್ದವು. ದಿಮ್ಮಿ ಕಣ್ಣಿಗೆ ಕಾಣುವಷ್ಟು ದೂರ ನೋಡಿದೆ. ಪ್ರಕೃತಿಯ ಮಡಿಲಲ್ಲಿ ನಡೆಯುವ ಅದ್ಭುತ ದೃಶ್ಯಗಳನ್ನು ನೆನೆಸಿಕೊಂಡು ನಾನು ನಿಬ್ಬೆರಗಾದೆ. ಕಾಡಿನ ಮೌನ ಸುರಿಯುವ ಮಳೆ ಜೀರುಂಡೆ ನೊಣಗಳ ಕೂಗಿನಿಂದ ಅಲ್ಲಿರಲು ಭಯವಾಗಿ ಬೇಗನೆ ಮನೆ ಸೇರಿಕೊಳ್ಳಲು ಮೇಗರವಳ್ಳಿ ಪೇಟೆಗೆ ನಾವು ಹೋದೆವು.

ಮೇಗರವಳ್ಳಿ ಪೇಟೆಯಲ್ಲಿ ಮಳೆ ಕಡಿಮೆಯಾಗಿತ್ತು. ಚರುಂಡಿ ರಸೆ ಗಳಲ್ಲಿ ನೀರು ಧುಮ್ಮಿಕ್ಕಿ ಹರಿಯುತ್ತಿತ್ತು. ನಾನು ನನ್ನ ಲಟಾರಿ ಸೈಕಲ್ಲು ಹತ್ತಿ ನನ್ನ ಹಳ್ಳಿಯ ಕಡೆ ನಡೆದೆ. ಕೆಸರಿನಲ್ಲಿ ಸೈಕಲ್ಲು ತುಳಿದುಕೊಂಡು ಹೋಗುವುದು ಕಷ್ಟ ವಾಯಿತು. ಮಳೆಗಾಲ ಮುಗಿಯುವ ತನಕ ಸೈಕಲ್ಲು ಇನ್ನು ಹೊರಗೆ ತೆಗೆಯಬಾರ ದೆಂದುಕೊಂಡೆ. ಹುಲಿ ಅಣುವಳ್ಳಿ ಸೇತುವೆಯ ಸಮೀಪ ಸಾಯಿಸಿದ ದನಗಳನ್ನು ನೆನೆಸಿಕೊಂಡು ಕಾಡಿನ ನಡುವೆ ಸೈಕಲ್ಲು ತುಳಿದುಕೊಂಡು ಹೋಗಲಿಕ್ಕೆ ಭಯ ವಾಯಿತು. ಕತ್ತಲಾಗುತ್ತ ಬಂದಿತ್ತು. ಮಳೆ ಇರಲಿಲ್ಲ. ಮಲೆನಾಡಿನ ಮಳೆ ಯನ್ನು ನಂಬುವಂತಿರಲಿಲ್ಲ. ಯಾವುದೇ ಗಳಿಗೆಯಲ್ಲಿ ಮತ್ತೆ ಬರುವುದಿತ್ತು. ನನ್ನ ಭಯಕ್ಕೆ ಜೀರುಂಡೆ ನೊಣಗಳ ಕೂಗು ಹಿಮ್ಮೇಳವಾಗಿತ್ತು. ಕಾಡಿನ ಮಧ್ಯೆ ಒಂದು ತಿರುವಿನಲ್ಲಿ ಹೋಗುತ್ತಿದ್ದಾಗ ಎದೆ ನಡುಗುವಂತಹ ಸಂದರ್ಭ ಬಂದು ಬಿಟ್ಟಿತು. ಭಾರೀ ಹೆಬ್ಬುಲಿಯೊಂದು ರಸ್ತೆಯಲ್ಲಿ ನನಗೆ ಬೆನ್ನು ಹಾಕಿಕೊಂಡು ಮುಂಗಾಲು ಊರಿ ಕೊಂಡು ಕುಳಿತಿತ್ತು. ಅದರ ಮೈಮೇಲಿನ ಪಟ್ಟೆ, ಅದರ ಆಕಾರ ನೋಡಿ ನಾನು ನಡುಗಿ ಹೋದೆ. ಹುಲಿಯೊಂದನ್ನು ನಾನು ಅಷ್ಟು ಹತ್ತಿರದಲ್ಲಿ ನೋಡಿದ್ದು ಅದೇ ಮೊದಲು. ಉಗಾದಿ, ದೀಪಾವಳಿ, ಗೌರಿ, ಭೂಮಿ ಹುಣ್ಣಿಮೆ ಹಬ್ಬಗಳಲ್ಲಿ ದೊಡ್ಡ ಬೇಟೆಗೆ ಹೋದಾಗ ಕಾಡುಕುರಿ, ಕಾಡುಹಂದಿ, ಮಿಗ ಶಿಕಾರಿ ಮಾಡುವಾಗ ಹುಲಿಗಳು

ಕಾಣಸಿಕ್ಕಿವೆ. ಆದರೆ ಇಂತಹ ದೊಡ್ಡ ಹುಲಿಯನ್ನು ನೋಡಿರಲಿಲ್ಲ. ಅಣುವಳ್ಳಿ ಸೇತುವೆ ಬಳಿ ನಾಲ್ಕು ದನಗಳ ಗೋಣು ಮುರಿದ ಹುಲಿ ಇದೇ ಇರಬಹುದೆ ಎನ್ನಿಸಿತು. ಏಕೆಂದರೆ ಒಂದೊಂದು ಹುಲಿ ಒಂದೊಂದು ಸರಹದ್ದಿನಲ್ಲಿಯೆ ಓಡಾಡುತ್ತಿರುತ್ತವೆ. ತಾನು ಈ ಸರಹದ್ದಿನಲ್ಲಿ ಇದ್ದೇನೆ ಎನ್ನುವ ಸೂಚನೆ ಕೊಡಲು ಮರಗಳಿಗೆ ಮುಂದಿನ ಪಾದವನ್ನು ಉಜ್ಜುವುದು, ಮೂತ್ರ ಸಿಂಪಡಿಸುವುದು ಹುಲಿಗಳು ಮಾಡುತ್ತವೆ. ಅಣುವಳ್ಳಿ ಸೇತುವೆ ನಮ್ಮ ಹಳ್ಳಿಗೆ ಒಂದೆರಡು ಮೈಲಿ ದೂರವಿರುವುದರಿಂದ ಅದೇ ಹುಲಿ ಇದ್ದರೂ ಇರಬಹುದು ಅನ್ನಿಸಿತು. ಬೆದೆ ಹುಲಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವುದೂ ಇದೆ.

ಈಗೇನು ಮಾಡುವುದೆಂದು ನಾನು ಹುಲಿಯನ್ನು ನೋಡುತ್ತ ನಿಂತೆ. ಹಿಂದೆ ಹೋಗುವಂತಿಲ್ಲ. ಮುಂದೆ ಹೋಗುವಂತಿಲ್ಲ. ಹಿಂದೆ ಹೋದರೆ ಅದು ನನ್ನ ಬೆನ್ನಟ್ಟ ಬಹುದಿತ್ತು. ಮುಂದೆ ಹೋಗಲಿಕ್ಕೆ ನನಗೆ ಧೈರ್ಯವಾಗಲಿಲ್ಲ. ಸೈಕಲ್ಲು ಹಿಡಿದ ನನ್ನ ಕೈ ನಡುಗುತ್ತಿತ್ತು. ಸೈಕಲ್ಲಿನ ರಬ್ಬರ್ ಹಾರನ್ ನನಗೆ ತಕ್ಷಣವೇ ನೆನಪಿಗೆ ಬಂದಿತು. ಬೇಸಿಗೆಯಲ್ಲಿ ಸಂಜೆಯ ಹೊತ್ತು ಕಾಡುಕೋಣಗಳು, ಕಾಡೆಮ್ಮೆಗಳು ರಸ್ತೆಯಲ್ಲಿ ನಿಂತು ದಾರಿಹೋಕರಿಗೆ ತೊಂದರೆ ಮಾಡುತ್ತಿದ್ದವು. ಅವುಗಳನ್ನು ಹೆದರಿಸಿ ಓಡಿಸಲಿಕ್ಕಾಗಿ ನಾನು ಲಾರಿ ಬಸ್ಸುಗಳಿಗೆ ಹಾಕಿಸುವ 'ಪಾಯ್ಙ್ಕ್–ಪಾಯ್ಙ್ಕ್' ಎಂದು ಸದ್ದು ಮಾಡುವ ಹಾರನ್ ಹಾಕಿಸಿದ್ದೆ. ದೂರದಲ್ಲಿ ಆ ಸದ್ದು ಮಾಡಿದರೆ ರಸ್ತೆಯಲ್ಲಿ ನಿಂತ ಕಾಡುಪ್ರಾಣಿಗಳು ಓಡಿಹೋಗುತ್ತಿದ್ದವು. ನಮ್ಮೂರಿನಲ್ಲಿ ಸಮುದ್ರದ ಮೀನು ಗಳನ್ನು ಸೈಕಲ್‌ನಲ್ಲಿ ಹೊತ್ತು ಹಳ್ಳಿಹಳ್ಳಿಯಲ್ಲಿ ಮಾರುವ ಸಾಬರುಗಳು ಜನರನ್ನು ಆಕರ್ಷಿಸಲು ಅದೇ ತರಹೆಯ ಹಾರನ್ ಹಾಕಿಸಿದ್ದರು. ಅದರಿಂದಾಗಿ ಜನಗಳು ನನ್ನನ್ನು 'ಮೀನು ಸಾಬರು' ಎಂದು ಕರೆಯುತ್ತಿದ್ದರು. ಈಗ ಅದೇ ಹಾರನ್ ಬಾರಿಸಿದರೆ ಹೇಗೆ ಎಂದು ಧೈರ್ಯ ಮಾಡಿ 'ಪಾಯ್ಙ್ಕ್–ಪಾಯ್ಙ್ಕ್' ಎಂದು ಬಾರಿಸಿದೆ. ಮರಿ ಹುಲಿ, ಗಾಯದ ಹುಲಿಯಾದರೆ ಅಪಾಯವಷ್ಟೆ. ಕಾಡಿನಲ್ಲಿ ಬೇಟೆಯಾಡಿಕೊಂಡು ಹಾಯಾಗಿದ್ದ ಹುಲಿಗಳು ಸಾಮಾನ್ಯವಾಗಿ ಮನುಷ್ಯನನ್ನು ನೋಡಿದರೆ ಓಡಿಹೋಗುತ್ತವೆ. ಆ ಧೈರ್ಯ ದಿಂದ ನಾನು ಹಾರನ್ ಬಾರಿಸಿದೆ. ಎತ್ತಲೋ ನೋಡುತ್ತ ಕುಳಿತಿದ್ದ ಹುಲಿ ಹಾರನ್ ಸದ್ದಿಗೆ ಗಾಬರಿಯಾಗಿ ಹಿಂದಿರುಗಿ ನೋಡಿತು. ತೀರಾ ಹತ್ತಿರದಲ್ಲಿದ್ದ ಅದರ ಮುಖ, ಗಾಜು ಕಣ್ಣು, ಬಿಳಿಯ ಮೀಸೆ, ಪಟ್ಟೆಪಟ್ಟೆ ಬಣ್ಣ ನನ್ನನ್ನು ಬೆಚ್ಚಿಬೀಳಿಸಿತು. ನನ್ನ ಕೈ ಹಾರನ್ನನ್ನು ಒತ್ತುತ್ತಲೇ ಇತ್ತು. ಹುಲಿ ನನ್ನನ್ನು ನೋಡಿದ್ದೆ ದಿಗ್ಗನೆದ್ದು ಕಾಡಿಗೆ ಒಂದೇ ನೆಗೆತ ದಲ್ಲಿ ಹಾರಿ ಓಡಿತು. ಅದರ ಬಾಲ ತೂರಾಡುವುದನ್ನು ನಾನು ನೋಡಿದೆ. ಹುಲಿ ಹೋದಮೇಲೂ ನಾನು ಹಾಸ್ಯಾಸ್ಪದವಾಗಿ ಹಾರನ್ ಬಾರಿಸುತ್ತಲೇ ಇದ್ದೆ. ಹುಲಿ ಕಾಡಿನಲ್ಲಿ ಮತ್ತಷ್ಟು ದೂರ ಹೋಗಲಿ ಎಂದು, ಅಷ್ಟೂ ಸಾಲದೆಂಬಂತೆ ಚಪ್ಪಾಳೆ

ತಟ್ಟಿ ಕೂಗಿದೆ. ಅನಂತರ ಸೈಕಲ್ಲು ಏರಿ ಉಬ್ಬುತಗ್ಗು ಹಳ್ಳದಿಣ್ಣೆ ಎನ್ನದೆ ಸೈಕಲ್ ತುಳಿದು ಮನೆ ಸೇರಿದೆ. ಮನೆ ಸೇರುವಾಗ ಮಳೆಗಾಲದಲ್ಲೂ ಬೆವೆತು ಹೋಗಿದ್ದೆ. ಮನೆಯುವರಿಗೆ ದಾರಿಯಲ್ಲಿ ಹುಲಿ ನೋಡಿದ ಬಗ್ಗೆ ಏನನ್ನೂ ಹೇಳಲಿಲ್ಲ. ಹುಲಿ ನೋಡಿ ಹೆದರಿಕೊಂಡಿದ್ದೇನೆಂದು ಹುಲಿರಾವು ತೆಗೆಯುವರೇನೋ ಎಂಬ ಅನು ಮಾನದಿಂದ.

ಮನೆಯಲ್ಲಿ ಕೆಟ್ಟ ಸುದ್ದಿಯೊಂದು ನನಗೆ ಕಾದಿತ್ತು. ನಮ್ಮ ಮನೆಯ ಗಾಡಿ ಎತ್ತೊಂದನ್ನು ದನಕರುಗಳು ಮೆಯ್ಯುವ ಒಳಕಡೆಯಲ್ಲಿ ದನಕಾಯುವ ಹುಡುಗರು ಎಷ್ಟು ಗಲಾಟೆ ಮಾಡಿದರೂ ಕೇಳದೆ ಹುಲಿ ಹಿಡಿಯಿತಂತೆ. ಗಾಡಿ ಎತ್ತನ್ನು ನೆನೆಸಿ ಕೊಂಡು ನನಗೆ ದುಃಖವಾಯಿತು. ಕಳೆದ ವರ್ಷ ತೀರ್ಥಹಳ್ಳಿ ಜಾನುವಾರು ಜಾತ್ರೆ ಯಲ್ಲಿ ಹೊಸ ಗಾಡಿ ಎತ್ತುಗಳನ್ನು ಕೊಂಡಿದ್ದೆ. ಎತ್ತುಗಳನ್ನು ಚೆನ್ನಾಗಿ ಸಾಕಿದ್ದಕ್ಕೆ ಆ ವರ್ಷದ ಜಾನುವಾರು ಜಾತ್ರೆಯಲ್ಲಿ ಚಿನ್ನದ ಪದಕ ಸಿಕ್ಕಿತ್ತು. ಎತ್ತುಗಳು ಬಿಳಿಯ ಬಣ್ಣಕ್ಕಿದ್ದು ಸೊಂಪಾಗಿ ಬೆಳೆದಿದ್ದವು. ಈ ಮಳೆಗಾಲದ ಗದ್ದೆ ಕೆಲಸ ಮುಗಿದ ಮೇಲೆ ಕೆಲಸವಿಲ್ಲದೆ ಹುರುಳಿ ಹಿಂಡಿ ತಿಂದು, ಒಳಕಡೆಯಲ್ಲಿ ಬೆಳೆದ ಹಸಿರು ಹುಲ್ಲು ಮೇಯ್ದು ದಷ್ಟಪುಷ್ಟವಾಗಿ ಬೆಳೆದಿದ್ದವು. ಎತ್ತುಗಳನ್ನು ಒಮ್ಮೆ ನೋಡಿದರೆ ನೋಡುತ್ತಲೇ ನಿಲ್ಲಬೇಕೆನ್ನಿಸುತ್ತಿತ್ತು. ಅಂಥ ಎತ್ತುಗಳಲ್ಲಿ ಒಂದು ಹೋಯಿತೆ ಎಂದು ವ್ಯಥೆಯಾಯಿತು. ಅಣುವಳ್ಳಿ ಸೇತುವೆಯಲ್ಲಿ ಹುಲಿ ಹಿಡಿದ ದನಗಳನ್ನು ನೋಡಿದಾಗ ಆಗದ ನೋವು ಈಗ ನನಗೆ ಆಯಿತು. ಕೊಟ್ಟಿಗೆಗೆ ಹೋಗಿ ನೋಡಿದೆ. ಒಂದೇ ಎತ್ತು ಬಿಳಿಹುಲ್ಲು ತಿನ್ನುತ್ತಾ ನಿಂತಿತ್ತು. ಮತ್ತೊಂದು ಎತ್ತು ಕಟ್ಟುವ ಜಾಗ ಖಾಲಿ ಬಿದ್ದಿತ್ತು. ಕೆಲಸದವಳೊಂದಿಗೆ ಸತ್ತ ಎತ್ತು ನೋಡಲು ಒಳಕಡೆಗೆ ಹೋದೆ. ಕತ್ತಲಾಗುತ್ತ ಬಂದಿತ್ತು. ಮನೆಗೆ ಬರುವಾಗ ನಿಂತ ಮಳೆ ಮತ್ತೆ ಜಿಟಿ ಜಿಟಿ ಸುರಿಯುಹತ್ತಿತು. ಒಳಕಡೆಯಲ್ಲಿ ಕಾಡಿಗೆ ದಾಟುವಲ್ಲಿ ಎತ್ತು ಕಾಲು ಚಾಚಿಕೊಂಡು ಮಲಗಿತ್ತು. ಕತ್ತಿನಲ್ಲಿ ನಾಳ ಹರಿದು ರಕ್ತ ಹೆಪ್ಪುಗಟ್ಟಿತ್ತು. ಹುಲಿ ರಕ್ತ ಕುಡಿದು ಹೋಗಿತ್ತು. ಎತ್ತಿನ ಮಾಂಸ ತಿನ್ನಲಿಕ್ಕೆ ರಾತ್ರಿ ಹುಲಿ ಬರಬೇಕಿತ್ತಷ್ಟೆ. ಕತ್ತಲಾಗುತ್ತ ಬಂದುದರಿಂದ ಹುಲಿ ಬಂದರೂ ಬರಬಹುದೆಂದು ಎತ್ತನ್ನು ನೋಡುತ್ತ ನಿಲ್ಲಲಿಕ್ಕೆ ಬೇಸರವಾಗಿ ಮನೆಗೆ ವಾಪಸು ಬಂದೆ. ರಾತ್ರಿ ನಿದ್ದೆ ಬರಲಿಲ್ಲ. ಹುಲಿ ಶಿಕಾರಿ ಮಾಡದಿದ್ದರೆ ಇನ್ನೂ ಹುಲಿಕಾಟ ಜಾಸ್ತಿಯಾಗಬಹುದೆಂದು ಎನ್ನಿಸಿತು. ಆದರೆ ಶಿಕಾರಿ ಮಾಡುವವರೇ ನಮ್ಮ ಹಳ್ಳಿಯಲ್ಲಿ ಯಾರೂ ಇರಲಿಲ್ಲ. ಶಿಕಾರಿ ಮಾಡುವ ಹಳೆ ತಲೆಗಳೆಲ್ಲ ಉರುಳಿ ಹೋಗಿದ್ದವು. ನಾನು ಹೈಸ್ಕೂಲಿಗೆ ಬರುವ ಹೊತ್ತಿಗೆ ಹಳ್ಳಿಯ ಜನಗಳಿಗೆ ಶಿಕಾರಿಯ ಗೀಳೂ ಹೋಗಿತ್ತು. ನನಗೇನೂ ಅಂತಹ ಶಿಕಾರಿಯ ಅನುಭವ ಇರಲಿಲ್ಲ. ಮಾಧ್ಯಮಿಕ ಶಾಲೆಯಲ್ಲಿ ಓದುವಾಗ

ಶೂದ್ರ

ದೊಡ್ಡ ಬೇಟೆಗೆ ನುಗ್ಗುವಾಗ ಹುಳುನುಗ್ಗಿ ಪ್ರಾಣಿಗಳನ್ನು ಹೊರಕ್ಕೆ ಹೊರಡಿಸುವ ಸೋವಿಕೆಯುವರೊಂದಿಗೆ ಹೋದದ್ದು ಮಾತ್ರ ಗೊತ್ತಷ್ಟೆ. ಹುಲಿ, ಹಂದಿ, ಕಾಡುಕುರಿ ಹೊಡೆದು ಅನುಭವ ಇರಲಿಲ್ಲ. ತೋಟಕ್ಕೆ ಬಾಳೆಕಾಯಿ ತಿನ್ನಲು ಬರಲು ಮಂಗಗಳನ್ನು ಹೊಡೆದಿದ್ದೆ. ಒಂದೆರಡು ಕಾಡುಕೋಳಿಯನ್ನೂ ರಾತ್ರಿ ಹೊತ್ತು ಮೊಲಗಳನ್ನು ಶಿಕಾರಿ ಮಾಡಿದ್ದೆ. ದೊಡ್ಡ ಬೇಟೆಯಲ್ಲಿ ನಾಯಿಪಾಲು, ಕೋವಿಪಾಲು, ಹಿರೆಪಾಲು ಎಂದು ಶಿಕಾರಿ ಮಾಡಿದ ಪ್ರಾಣಿಯ ಮಾಂಸವನ್ನು ಹಂಚಿಕೊಳ್ಳುವುದು, ಕೆಲವೊಮ್ಮೆ ಮಾಂಸ ಹಂಚಿಕೆಯಲ್ಲಿ ಹೆಚ್ಚೂಕಡಿಮೆಯಾಗಿ ಮನಸ್ತಾಪವಾಗುವುದು, ಜಗಳವಾಡು ವುದು ನೆನಪಿದ್ದಿತು.

ಬೆಳಗಾದಾಗ ಮತ್ತೆ ಸತ್ತ ಎತ್ತು ನೋಡಲು ಮತ್ತೊಮ್ಮೆ ಒಳಕಡೆಗೆ ಹೋದೆ. ಹುಲಿ ರಾತ್ರಿ ಬಂದು ಎತ್ತನ್ನು ಅನಾಮತ್ತಾಗಿ ಎಳೆದುಕೊಂಡು ಹೋಗಿ, ಹದ್ದು ಕಾಗೆಗಳಿಗೆ ಕಾಣದಂತೆ ಪೊದೆಗಳ ನಡುವೆ ಹಾಕಿತ್ತು. ಎತ್ತಿನ ಪ್ರಮುಖ ಭಾಗವನ್ನು ತಿಂದಿತ್ತು. ಈ ದಿನ ರಾತ್ರಿ ಮತ್ತೆ ಹುಲಿ ಎತ್ತಿನ ಮಾಂಸ ತಿನಲಿಕ್ಕೆ ಬರುವುದು ಖಚಿತವೆನ್ನಿಸಿತು. ಭರ್ಜರಿ ಗಾತ್ರದ ಎತ್ತನ್ನು ಹುಲಿ ಎಳೆದುಕೊಂಡು ಹೋಗ ಬೇಕಾದರೆ ಹುಲಿ ದೊಡ್ಡದಿರಬೇಕೆಂದುಕೊಂಡೆ. ಸತ್ತ ಎತ್ತಿನ ಬಿಳಿಯ ಬಣ್ಣ ಮೊಳ ಉದ್ದದ ನಸುಗೆಂಪು ಕೋಡು, ಚೆನ್ನಾಗಿ ಬೆಳೆದ ಅದರ ದೇಹವನ್ನು ನೋಡಿ ಸಂಕಟ ವಾಗಿ ಈ ದಿನ ರಾತ್ರಿ ಹುಲಿ ಶಿಕಾರಿ ಮಾಡಲೇಬೇಕೆಂಬ ಛಲ ನನ್ನಲ್ಲಿ ಹುಟ್ಟಿತು. ಹುಲಿ ಶಿಕಾರಿಗೆ ಮರಸು ಕೂರಲು ಸಮೀಪದಲ್ಲಿ ಮರಗಳೂ ಇದ್ದವು. ಸಂಜೆಯಾಗು ವುದರೊಳಗೆ ಎತ್ತು ಸತ್ತು ಬಿದ್ದ ಜಾಗದ ಸಮೀಪ ಮರದ ಮೇಲೆ ಮನೆಯಿಂದ ಮರದ ಹಲಗೆಗಳನ್ನು ತರಿಸಿ ಮರಸು ಕೂರಲು ಅಟ್ಟಲು ಕಟ್ಟಿಸಿದೆ. ಮಳೆ ನೀರು ತಲೆಯ ಮೇಲೆ ಬೀಳದಂತೆ ಸೋಗೆಯನ್ನು ಮೇಲೆ ಹೊದ್ದಿಸಿದೆ. ಸಂಜೆಯಾಗುತ್ತಾ ಬಂದಂತೆ ನನಗೆ ಭಯವಾಗ ಹತ್ತಿತು. ಶಿಕಾರಿಯ ಅನುಭವ ಅಷ್ಟಾಗಿ ಇಲ್ಲದ ನಾನು ಹುಲಿ ಶಿಕಾರಿ ಮಾಡುವುದು ನಿಜವೆ? ನನ್ನಿಂದ ಇಂತಹ ಕೆಲಸ ಆಗುವುದೆ? ಎಂದೆಲ್ಲ ಚಿಂತೆ ಮಾಡಿದೆ. ಯಾರಿಗೂ ತೋರಿಸಿಕೊಳ್ಳಲಿಲ್ಲ. ಸಂಜೆಯಾಗುವ ತನಕ ಮೌನ ವಾಗಿದ್ದೆ. ಹಗಲು ಹೊತ್ತಿನಲ್ಲಿ ನೋಡಲಿಕ್ಕೆ ಭಯವಾಗಿದ್ದ ಹುಲಿಯ ರೌದ್ರ ಮುಖ ಕತ್ತಲೆಯಾಗುತ್ತಿದ್ದಂತೆ ನನಗೆ ಮತ್ತಷ್ಟು ಭಯವನ್ನು ಹುಟ್ಟಿಸಿತ್ತು. ಹೀಗೆ ತೂಗು ಯ್ಯಾಲೆಯಲ್ಲಿದ್ದಂತೆಯೆ ಕೋವಿಗೆ ಈಡು ತುಂಬಿಸಿದೆ. ಈಡು ತುಂಬಿಸುವಾಗಲೇ ಶಿಕಾರಿಯಾಗುವ ಶಕುನ ಕಂಡಿತು. ಯಾರಿಗೂ ಹೇಳಲಿಲ್ಲ. ಕಪ್ಪುಕಪ್ಪಾಗುವಾಗ ಊಟ ಮಾಡಿ ಶಿಕಾರಿಯ ದಿರಿಸು ಧರಿಸಿ ಈಡು ಸಾಮಾನಿನ ಚೀಲವನ್ನು ಬಗಲಿಗೆ ಹಾಕಿಕೊಂಡು ಹೆಡ್‌ಲೈಟನ್ನು ಚೀಲಕ್ಕೆ ಹಾಕಿ ಕುಲದೇವರಿಗೆ ನಮಸ್ಕಾರ ಮಾಡಿ ಮನೆಬಿಟ್ಟೆ. ಮಳೆ 'ಪಟಪಟ' ಸುರಿಯತೊಡಗಿತ್ತು. ಆಗಾಗ ಫಳ್ ಎಂದು

ಮಿಂಚುತ್ತಿತ್ತು. ಮಳೆಗೆ ಕೊಡೆ ಸೂಡದೆ ಕಂಬಳಿ ಸೂಡಿದ್ದೆ. ಶಿಕಾರಿಗೆ ಕೂತಾಗ ಹೊದೆಯಲು ಕಂಬಳಿ ಬೇಕಾಗುವುದೆಂದು.

ಶಿಕಾರಿಗೆ ಮರಸು ಕೂರುವ ಮರವೇರುವಾಗ ಕತ್ತಲು ನಿಧಾನವಾಗಿ ನನ್ನ ಹಳ್ಳಿಯನ್ನು, ಕಾಡನ್ನು, ಗದ್ದೆಕೋಡಿಯನ್ನು ಆವರಿಸುತ್ತಿತ್ತು. ಜೀರುಂಡೆ ನೊಣಗಳು ಬೇಸರವಾಗುವಂತೆ ಕೂಗುತ್ತಲಿದ್ದವು. ಹಕ್ಕಿಪಕ್ಷಿಗಳ ಸದ್ದಡಗಿ ಹೋಗಿತ್ತು. ಸತ್ತ ಎತ್ತು ಕೊಳೆತು ವಾಸನೆ ಹೊಡೆಯುತ್ತಿತ್ತು. ಸುತ್ತಣ ಪರಿಸರದಿಂದ ಕಪ್ಪೆಗಳು "ವಾಂಕ್ ವಾಂಕ್" ಎಂದು ಕೂಗುತ್ತಿದ್ದವು. ಹಗಲು ಹೊತ್ತಿನಲ್ಲಿ ಕಂಡ ಮರಗಳು ರಾತ್ರಿ ಹೊತ್ತಿನಲ್ಲಿ ದೆವ್ವವಾಗಿ ಕಾಣುತ್ತಿದ್ದವು. ಚಿಕ್ಕಂದಿನಲ್ಲಿ ದೆವ್ವದ ಕತೆಗಳನ್ನು ಹಿರಿಯರಿಂದ ಕೇಳಿ ಕೇಳಿ ದೊಡ್ಡವರಾದ ಮೇಲೆ ರಾತ್ರಿ ಹೊತ್ತಿನಲ್ಲಿ ಪ್ರಕೃತಿಯೇ ದೆವ್ವವಾಗಿ ಕಾಣುತ್ತಿತ್ತು. ಭಯದಿಂದ ಹುಲಿಯ ನಿರೀಕ್ಷಣೆಯಲ್ಲಿ ಕಾಯುತ್ತಾ ಕುಳಿತೆ. ಸಂಪೂರ್ಣ ಕತ್ತಲಾಗಿ ಹಸಿರುದೀಪ ತೋರಿಸುವ ಮಿಣಕುಹುಳಗಳ ಹಾರಾಟ ಶುರುವಾಯಿತು. ಚಿಕ್ಕಂದಿನಲ್ಲಿ ಈ ಮಿಣುಕು ಹುಳುಗಳನ್ನೆ ದೆವ್ವವೆಂದು ನಾನು ತಿಳಿದಿದ್ದೆ. ಮಳೆ ಜೋರಾಗಿ ಸುರಿಯತೊಡಗಿತು. ಗಾಳಿಯು ಭೀಕರವಾಗಿ ಬೀಸುತ್ತಿತ್ತು. ಕಂಬಳಿಯನ್ನು ಹೊದ್ದುಕೊಂಡು ಗಡದ್ದಾಗಿ ಕುಳಿತೆ. ಮಳೆ ಸುರಿಯುತ್ತಿದ್ದುದರಿಂದ ಹುಲಿ ಬರುವುದೊ ಇಲ್ಲವೋ ಎಂಬ ಅನುಮಾನವಾಯಿತು. ಮಳೆ ಸುರಿಯುತ್ತಿದ್ದರೆ ಹುಲಿಗಳು ಬಯಲಿಗೆ ಬರುವುದಿಲ್ಲ. ಪೊದೆಯ ಮರೆಯಲ್ಲಿ ಕುಳಿತು ಬಿಡುತ್ತವೆ. ಮಳೆ ನಿಂತ ಮೇಲೆಯೇ ಮತ್ತೆ ಬಯಲಿಗೆ ಬರುವುದು ನಾನು ಯೋಚನೆ ಮಾಡುತ್ತಾ ಕುಳಿತೆ. ಶಿಕಾರಿಗೆ ಮರಸು ಕುಳಿತಾಗ ಒಮ್ಮೊಮ್ಮೆ ಶಿಕಾರಿಯಾಗುವುದೇ ಇಲ್ಲ. ಪ್ರಾಣಗಳು ಅತ್ತ ಸುಳಿಯುವುದೇ ಇಲ್ಲ. ಕೆಲವೊಮ್ಮೆ ಬೇಗನೆ ಶಿಕಾರಿಯಾಗುವುದೂ ಇದೆ. ಶಿಕಾರಿಯಲ್ಲಿ ನಶ್ಯ, ಬೀಡಿ, ಸಿಗರೇಟು ಸೇದುವುದು ನಿಶಿದ್ಧ. ಬೀಡಿ ಸಿಗರೇಟು ನಶ್ಯದ ವಾಸನೆಗೆ ಪ್ರಾಣಿಗಳು ಆಕಡೆ ಸುಳಿಯುವುದಿಲ್ಲ. ಯಾರಾದರೂ ತಿಳಿದೋ ತಿಳಿಯದೆಯೋ ಸೇದಿದರೆ ಅವರು ಸಹ ಶಿಕಾರಿಯುವರಿಂದ ಹೀನಾಮಾನಾ ಬೈಸಿಕೊಳ್ಳಬೇಕಾಗುತ್ತದೆ. ನನಗೆ ಬೈಯುವವರು ಯಾರೂ ಇಲ್ಲದಿದ್ದರೂ ನಾನು ಸಿಗರೇಟು ಹೊರತೆಗೆಯಲಿಲ್ಲ. ಹುಲಿ ಶಿಕಾರಿ ಮಾಡಲೇಬೇಕೆಂಬ ಹಟ ನನ್ನಲ್ಲಿತ್ತು. ಈ ಅವಕಾಶ ಬಿಟ್ಟರೆ ಹುಲಿ ಮತ್ತೆ ಜಾನುವಾರುಗಳ ಮೇಲೆ ದಾಂಧಲೆ ಮಾಡುತ್ತಿರುತ್ತದೆ. ಸ್ವಲ್ಪ ಹೊತ್ತಿನಲ್ಲಿ ಮಳೆ ಕ್ರಮೇಣ ಕಡಿಮೆಯಾಗುತ್ತಾ ಬಂದು ಕೊನೆಗೆ ನಿಂತೇ ಹೋಯಿತು. ಮಳೆ ಸದ್ದಿನಲ್ಲಿ ಸಣ್ಣದಾಗಿ ಕೇಳಿದ ಕಪ್ಪೆಗಳ ವಟವಟ ದನಿ ಮಳೆ ನಿಂತಮೇಲೆ ಜೋರಾಗಿ ಕೇಳಹತ್ತಿತು. ಗುಡ್ಡದಿಂದ ಹರಿದು ಬರುವ ನೀರು ಹಳ್ಳಕ್ಕೆ ಹೊಳೆಗೆ ಭೋರ್ಗರೆದು ಬೀಳುವುದು ಕೇಳಿಸಿತು.

ಹುಲಿಯ ಸದ್ದಿಲ್ಲದೆ ಕೂತು ಕೂತು ಬೇಸರವಾಗಿ ನನಗೆ ತೂಕಡಿಕೆ ಹತ್ತಿತು. ಬೇಗನೆ ಮಲಗಿ ಅಭ್ಯಾಸವಾದ್ದರಿಂದ ನಿದ್ದೆ ತಡೆಯಲಾಗಲಿಲ್ಲ. ಮರದಿಂದ ತೊಟ್ಟಿಕ್ಕುವ ನೀರಿಗೆ ಕೈಚಾಚಿ ಕಣ್ಣು ತೊಳೆದುಕೊಂಡೆ. ಆದೇನೋ ಎತ್ತಿನ ಮಾಂಸ ಚಪ್ ಚಪ್ ಎಂದು ತಿನ್ನುವುದು ಕೇಳಿಸಿ ಮೈಯೆಲ್ಲಾ ಕಿವಿಯಾಗಿ ಹೋಯಿತು; ನಿದ್ದೆ ತಾನಾಗಿಯೆ ಓಡಿಹೋಯಿತು. ಮಾಂಸ ತಿನ್ನುತ್ತಿರುವುದೇನೆಂದು ಕಾಣಲಿಲ್ಲ. ಕುಳಿತಲ್ಲೆ ಬಾಗಿ ಸತ್ತ ಎತ್ತಿನ ಕಡೆಗೆ ನೋಡಿದೆ. ಹೆಡ್‌ಲೈಟ್ ಹಾಕಿ ನೋಡಲು ಧೈರ್ಯವಾಗಲಿಲ್ಲ. ಒಮ್ಮೆ ಮಿಂಚು ಹೊಡೆದು ಬೆಳಕಿನಲ್ಲಿ ಎರಡು ನರಿಗಳು ಮಾಂಸ ತಿನ್ನುವುದು ಕಂಡಿತು. ಅವುಗಳನ್ನು ಓಡಿಸದೆ ಮೌನವಾಗಿದ್ದೆ. ಹನ್ನೊಂದು ಘಂಟೆಯ ಸುಮಾರಿಗೆ ದೂರದಲ್ಲಿ ಹುಲಿ ಕಾಡು ನಡುಗುವಂತೆ ಗರ್ಜಿಸಿ ಕೂಗುವುದು ಕೇಳಿಸಿತು. ತಾನು ಕೊಂದ ಬಲಿಯನ್ನು ಹುಲಿ ತಿನ್ನಲು ಬರುವುದೇ ರಾತ್ರಿ ಹೊತ್ತಿನಲ್ಲಿ, ಹಗಲಿನಲ್ಲಿ ಮನುಷ್ಯರ ಭಯ ಇರುವುದರಿಂದ. ಹುಲಿಯ ಗರ್ಜನೆಗೆ ಹತ್ತಿರದ ಪೊದೆಗಳ ಮರೆಯಲ್ಲಿ ನಿಂತಿದ್ದ ಪ್ರಾಣಿಗಳು ಹೆದರಿ ದಡದಡ ಓಡಿದವು. ನನಗೂ ಭಯವಾಯಿತು. ಧೈರ್ಯಕ್ಕೆ ಯಾರನ್ನಾದರೂ ಕರೆದುಕೊಂಡು ಬರಬೇಕಿತ್ತು ನಾನು ತಪ್ಪು ಮಾಡಿದೆ ಎಂದುಕೊಂಡೆ. ಮತ್ತೊಂದು ಸಾರಿ ಹುಲಿ ಹತ್ತಿರದಲ್ಲೆ ಕೂಗಿದ್ದು ಕೇಳಿಸಿತು. ನಾನು ತಲೆಗೆ ಹೆಡ್‌ಲೈಟ್ ಕಟ್ಟಿಕೊಂಡು ಸಿದ್ಧನಾದೆ. ಬೆಳಕು ಹಾಕಲಿಲ್ಲ. ಬಂದೂಕನ್ನು ಎತ್ತಿಟ್ಟುಕೊಂಡೆ. ಕತ್ತಲೆಯಲ್ಲಿ ಬೇಣದಲ್ಲಿ ಹುಲಿರಾಯ ನಿಧಾನವಾಗಿ ಠೀವಿಯಿಂದ ಬರುವುದು ಕಂಡಿತು. ಹುಲಿಯನ್ನು ಕಂಡು ಮಾಂಸ ತಿನ್ನುತ್ತಿದ್ದ ನರಿಗಳು ಓಡಿದವು. ಹುಲಿ ಬಂದದ್ದೆ ಎತ್ತಿನ ಮಾಂಸ ತಿನ್ನಲು ಶುರು ಮಾಡಲಿಲ್ಲ. ಬಡುವಿನ ಹತ್ತಿರ ಕುಳಿತು ಏನಾದರೂ ಅಪಾಯವಿದೆಯೆ ಎಂದು ಸುತ್ತಮುತ್ತ ನೋಡುತ್ತಾ ಕುಳಿತಿತು. ಒಮ್ಮೆ ಗುಂಡಿನೇಟು ಬಿದ್ದಿದ್ದರೆ ಹುಲಿ ತಾನೆ ಹಿಡಿದ ಪ್ರಾಣಿಗಳನ್ನೂ ಮತ್ತೆ ಮತ್ತೆ ಬಂದಾಗ ಬೇಗ ಬೇಗ ತಿನ್ನಲು ಶುರು ಮಾಡುವುದಿಲ್ಲ. ಸ್ವಲ್ಪ ಹೊತ್ತು ಕಾದು ನೋಡುತ್ತದೆ. ಕೆಲವು ಹೊತ್ತಿನ ನಂತರ ಹುಲಿರಾಯನೆದ್ದು ಮಲಗಿಕೊಂಡು ಬಡುವಿನ ಮಾಂಸ ತಿನ್ನಲು ಶುರು ಮಾಡಿತು. ಈ ಎಲ್ಲ ನಾಟಕವನ್ನು ನಾನು ಮಿಂಚಿನ ಬೆಳಕಿನಲ್ಲಿ ನೋಡಿದೆ. ನನ್ನ ಕಣ್ಣು ಕತ್ತಲೆಗೆ ಹೊಂದಿಕೊಂಡಿತ್ತು. ಹುಲಿ ನಿರಾತಂಕವಾಗಿ ಮಾಂಸ ತಿನ್ನುತ್ತಾ 'ಕಟ್ ಕಟ್' ಎಂದು ಎಲುಬು ಕಡಿಯುವುದೂ ಕೇಳಿಸಿತು. ಹುಲಿ ಜಗತ್ತನ್ನು ಮರೆತು ತಿನ್ನುವುದರಲ್ಲಿದ್ದಾಗ ಬಂದೂಕನ್ನೆತ್ತಿಕೊಂಡೆ. ಹೆಡ್‌ಲೈಟ್ ಸ್ವಿಚ್ ಒತ್ತಿ ಬೆಳಕು ಹಾಕಲು ಭಯವಾಗಿ ಹೋಯಿತು. ಪ್ರಪ್ರಥಮವಾಗಿ ಹುಲಿ ಹೊಡೆಯುತ್ತಿರುವುದು, ಏನೋ? ಎಂತೋ? ಎಂಬ. ಬೇರೆ ಯಾವುದೇ ಪ್ರಾಣಿಗೆ ಗುಂಡು ಹಾರಿಸಿದರೆ ಏಟು ತಗುಲದಿದ್ದರೂ ಅವು ಓಡಿಹೋಗುತ್ತವೆ. ಹುಲಿಗೆ ಏಟು ತಗುಲಿ

ಉಳಿದರೆ ತುಂಬಾ ಅಪಾಯ. ಬೆಳಕು ಬಿದ್ದ ಕಡೆಗೆ ಹಾರುವುದೂ ಇದೆ. ಬಹಳ ಮಂದಿ ಹುಲಿ ಶಿಕಾರಿಯಲ್ಲಿ ಪ್ರಾಣ ಕಳೆದುಕೊಂಡವರಿದ್ದಾರೆ. ಏಟು ಬಿದ್ದು ತಪ್ಪಿಸಿ ಕೊಂಡರೂ ದಾರಿಹೋಕರ ಮೇಲೆ ಅವು ಬೀಳುವುದೂ ಇದೆ. ಅದನ್ನೆಲ್ಲ ನೆನೆಸಿಕೊಂಡು ನಾನು ಎತ್ತರದಲ್ಲೆ ಅಟ್ಟಲು ಕಟ್ಟಿಸಿದ್ದೆ. ಹುಲಿ ಮೇಲಕ್ಕೆ ಹಾರಿದರೂ ನನಗೆ ಅಪಾಯವಾಗದಂತೆ ಮುನ್ನೆಚ್ಚರಿಕೆ ತೆಗೆದುಕೊಂಡಿದ್ದೆ. ಆದರೂ ಭಯ ಎಂಬುದು ಇದೆಯಲ್ಲ?

ನನಗೆ ತಿಳಿಯದಂತೆ ನನ್ನ ಕೈ ಹೆಡ್‌ಲೈಟಿನ ಸ್ವಿಚ್ಚನ್ನು ಒತ್ತಿಬಿಟ್ಟಿತು. ಬೆಳಕು ಪ್ರಕಾಶಮಾನವಾಗಿ ನೀಳವಾಗಿ ಹುಲಿಯ ಮೇಲೆ ಬಿದ್ದಿತು. ತಲೆಯನ್ನಾಡಿಸಿ ಹುಲಿಯ ಮುಖಕ್ಕೆ ಬೆಳಕು ಚೆಲ್ಲಿದೆ. ಬೆಳಕಿನಲ್ಲಿ ಹುಲಿಯ ಭರ್ಜರಿ ಗಾತ್ರ ಕಂಡಿತು. ಮೃಗ ರಾಜ ಹೀಗೆ ಬೆಳೆಯಬೇಕಾದರೆ ಎಷ್ಟು ವನ್ಯಜಂತುಗಳನ್ನು ತನ್ನ ಜೀವಿತ ಕಾಲದಲ್ಲಿ ತಿಂದು ಹಾಕಿತ್ತೊ? ಒಮ್ಮೆಲೆ ಮೈಮೇಲೆ ಬಿದ್ದ ಬೆಳಕನ್ನು ನೋಡಿ ಹುಲಿ ಗಾಬರಿ ಯಾಗಿ ಬೆಳಕಿನ ಕಡೆಗೆ ಮುಖ ತಿರುಗಿಸಿತು. ರಾತ್ರಿ ಹೊತ್ತು ಕಾಡುಪ್ರಾಣಿಗಳ ನೀಲಿ ಕಣ್ಣುಗಳನ್ನು ನೋಡಿದ ಹುಲಿಗೆ ಪ್ರಕಾಶಮಾನವಾದ ಬೆಳಕು ನೋಡಿ ಭಯ ಕೋಪ ಎರಡೂ ಬಂದಿರಬೇಕು. ಅದರ ಮುಖದಲ್ಲಿದ್ದ ಭಯ ಮಾಯವಾಗಿ ನಿಧಾನವಾಗಿ ಆಕ್ರೋಶ ಮೂಡುತ್ತಿರುವುದನ್ನು ನಾನು ಕಂಡೆ. ಅದರ ಗಾಜುಕಣ್ಣು ಬಿಳಿಯಮೀಸೆ ಕೆಂಪುಪಟ್ಟೆ ಬಾಚಿ ಹಲ್ಲುಗಳು ನನ್ನನ್ನು ತತ್ತರ ನಡುಗಿಸಿದವು. ಬೆಳಕಿನಲ್ಲಿ ತಟಪಟ ಬೀಳುವ ಮಳೆ ಹನಿಗಳೂ ಕಾಣಿಸಿತು. ಹುಲಿ ನಿಧಾನವಾಗಿ ಮೇಲಕ್ಕೆ ಏಳುವ ಹೊತ್ತಿಗೆ ನಾನು ಹುಲಿಯ ಪಕ್ಕೆಗೆ ಗುರಿ ಇಟ್ಟಿದ್ದೆ. ನನ್ನ ಕೈಬೆರಳು ಬಂದೂಕಿನ ಕುದುರೆಯನ್ನು ಎಳೆದೇ ಬಿಟ್ಟಿತು. 'ಢಾಂ' ಎಂದು ಸಿಡಿದ ಗುಂಡು ಕಾಡಿನಲ್ಲಿ ತರಂಗವನ್ನೆಬ್ಬಿಸಿ ಮಾಲೆ ಮಾಲೆಯಾಗಿ ಎಲ್ಲೋ ದೂರದಲ್ಲಿ ಪ್ರತಿಧ್ವನಿಸಿತು. ಹುಲಿ 'ಆ' ಎಂದು ಗರ್ಜಿಸಿ ನಾನು ಕುಳಿತಿದ್ದಲ್ಲಿಗೆ ಜಿಗಿದು ಕೆಳಕ್ಕೆ ಬಿದ್ದಿತು. ನಾನು ಹೆದರಿ ಬಂದೂಕನ್ನು ಕೈಬಿಟ್ಟೆ. ಬಂದೂಕು ಎಲ್ಲೋ ಪೊದೆಗೆ ಬಿದ್ದಿತು. ಹುಲಿಯನ್ನು ನೋಡುವ ಧೈರ್ಯ ವಾಗದೆ ಆತುರದಲ್ಲಿ ಬೆಳಕನ್ನು ಆರಿಸಿದೆ. ಬೆಳಕು ನೋಡಿದರೆ ತಾನೆ ಹುಲಿ ಮತ್ತೆ ಮೇಲಕ್ಕೆ ಹಾರುವುದು? ಬೆಳಕು ಆರಿದ ನಂತರ ಎಲ್ಲೆಲ್ಲೂ ಕತ್ತಲೆ ಆವರಿಸಿತು. ಹಸಿರು ಬೆಳಕು ತೋರಿಸುವ ಸಾವಿರಾರು ಮಿಣುಕು ಹುಳುಗಳು ಕಣ್ಣಿಗೆ ಕಂಡವು. ಕಪ್ಪೆಗಳ ವಟವಟ ದನಿ ಕಿವಿ ಮೇಲೆ ಬಿದ್ದಿತು. ಹುಲಿಯ ಸದ್ದಿಲ್ಲ. ಹುಲಿ ಸತ್ತು ಹೋಯಿತೆ? ಹೆದರಿ ಓಡಿಹೋಯಿತೆ? ಅಥವಾ ನನ್ನನ್ನು ಹಿಡಿಯಲು ನಿಧಾನವಾಗಿ ಹುಲಿ ಮರ ಹತ್ತುತ್ತಿದೆಯೆ? ಎಂದು ನನಗೆ ಅನುಮಾನವಾಯಿತು. ಭಯದಿಂದ ಕತ್ತಲೆಯಲ್ಲಿ ನಡುಗುತ್ತ ಸುತ್ತಮುತ್ತ ನೋಡಿದೆ. ಎಷ್ಟು ಹೊತ್ತಾದರೂ ಹುಲಿಯ ಸದ್ದಿಲ್ಲ. ಪ್ರಕೃತಿಯ ಮೌನ ನನ್ನ ಪಾಲಿಗೆ ಹುಲಿಯಾಗಿತ್ತು. ನಿದ್ದೆ ನನ್ನನ್ನು ಬಿಟ್ಟು ಯಾವಾಗಲೋ ಓಡಿಹೋಗಿತ್ತು. ಸುಮಾರು ಅರ್ಧಗಂಟೆಯ

ನಂತರ ಧೈರ್ಯ ಮಾಡಿ ಹೆಡ್‌ಲೈಟ್ ಹಾಕಿ ನೋಡಿದೆ. ಹುಲಿ ಸತ್ತು ಬಿದ್ದಿತ್ತು. ಹುಲಿಯ ಪಕ್ಕೆಗೆ ಗುಂಡು ತಗುಲಿದ ಜಾಗದಿಂದ ನೆತ್ತರು ಸೋರುತ್ತಿತ್ತು. ಹುಲಿ ಸತ್ತದ್ದು ನೋಡಿ ಮತ್ತೊಷ್ಟು ಹುಲಿ ಶಿಕಾರಿ ಮಾಡುವ ಹುಮ್ಮಸ್ಸು ನನಗೆ ಬಂದಿತು.

ತುಡಿತ

ಆರದೋ ತುಡಿತ ಮಿಡಿತಗಳಿಗೆ
ರೂಪುಗೊಂಡವರು ನಾವು
ಚಿಗುರಾಗಿ, ಮೊಗ್ಗಾಗಿ ಹೆಮ್ಮರವಾಗಿ
ಬೆಳೆಯುವಲ್ಲಿ ನಮ್ಮದು ಬೇರೆಯ ರೂಪ

ನೆಲದಿಂದ ಮುಗಿಲಿಗೇರಿದ ಗಿಡದ ಹೂ
ಭೂಮಿಯಿಂದ ಬೇರಾದಂತೆ
ನಮಗೆ ನಮ್ಮನ್ನೀ ಜಗಕೆ ತಂದವರಿಗೆ
ಪರಸ್ಪರ ಸಂಬಂಧವೇ ಉಳಿಯದು

ಬೇರೊಂದೇ ವೃಕ್ಷಕೆ
ಬದುಕು ಬೇರೆ ಬೇರೆ ಕೊಂಬೆಗಳಿಗೆ
ಅಂತೆಯೇ ಫಲವೂ ಬೇರೆ ಬೇರೆ
ಆರಿಗೆ ಆರೂ ಪೂರಕವಲ್ಲ

ಹಡೆದವರ ಋಣ ಅನಿವಾರ್ಯ
ಒಡಹುಟ್ಟಿದವರ ಋಣ ಸಹ ಅಂತೆಯೇ
ನೆಲದ ಋಣ ನೀರಿನ ಋಣ ಈ
ಋಣಗಳ ತೀರಿಸುವಲ್ಲಿಯೇ
ನಮ್ಮ ನೆಲದ ಋಣ ಮುಗಿವುದು

ಕಾಲಾನಂತರ ನಾವೂ ಕೊನೆಗೆ
ಉಳಿಸಿ ಹೋಗುವುದು
ನಮ್ಮ ತುಡಿತ ಮಿಡಿತಗಳಿಗೆ
ರೂಪುಗೊಂಡುದನೆ.

—ವತ್ಸಲಾ

ವತ್ಸಲಾ D/o ವೆಂಕಟಾಚಲಯ್ಯ, 506, ಪುರೋಹಿತ್ ಸ್ಟ್ರೀಟ್, ಈಶ್ವರ ಟೆಂಪಲ್ ಕ್ರಾಸ್ ಹತ್ತಿರ, ಚನ್ನಪಟ್ಟಣ, ಬೆಂಗಳೂರು ಜಿಲ್ಲೆ

ನನಗೆ ಮೆಚ್ಚುಗೆಯಾದ ಕವನ

—ಜರಗನಹಳ್ಳಿ ಶಿವಶಂಕರ್

ಒಂದು ಒಳ್ಳೆಯ, ಮೆಚ್ಚುಗೆಯಾಗುವ ಕವಿತೆಗಾಗಿ ಹುಡುಕಾಡುವ ನನ್ನಂಥವರಿಗೆ ಕವನ ಸಿಗುವುದು, ಕಾಣಿಸುವುದು ಅಪರೂಪವೇ ಸರಿ. ಅವರವರ ಅಭಿರುಚಿ, ಮನೋಧರ್ಮಗಳಿಗೆ ಅನುಗುಣವಾಗುವ ಕವನ ಅವರವರ ಪಾಲಿನ ಅದೃಷ್ಟವೂ ಹೌದು.

ಹೀಗೆ ನನಗೆ ಮೆಚ್ಚುಗೆಯಾದ ಕವನ ನಜೀರ್ ಚಂದಾವರ ಅವರ 'ಎಷ್ಟೊಂದು ದೋಣಿಗಳು ಎಲ್ಲಿಯುವರೆಗೆ' 'ಸುಧಾ' ವಾರಪತ್ರಿಕೆ 15 ಸೆಪ್ಟೆಂಬರ್ 1991, ಪುಟ 41ರಲ್ಲಿ ಪ್ರಕಟವಾಗಿದೆ.

ಮನುಷ್ಯ ಕವನವನ್ನಾದರೂ ಮೆಲುಕು ಹಾಕುತ್ತಾನೆ.

ಅಧ್ಯಯನಕ್ಕಾಗಿ ಓದಬೇಕಾದ ಕವಿತೆಗಳು ಅನಿವಾರ್ಯವಾಗುತ್ತವೆ. ಇಂದಿನ ಸಾಹಿತ್ಯಕ ರಾಜಕೀಯ ಸಂದರ್ಭದಲ್ಲಿ ಕವಿತೆಗಳು ಕೂಡ ಗಲಭೆ, ಗಲಾಟೆ ಎಬ್ಬಿಸಿ ಅನಿವಾರ್ಯ ಕವಿತೆಗಳಾಗಿ ಒಂದು ಹೊಸ ಆಯಾಮ ಪಡೆದುಕೊಳ್ಳುತ್ತಿವೆ.

ಕಾವ್ಯ ಕೂಡ ಕಲುಷಿತವಾಗುವುದು ಖಚಿತವಾಗಿದೆ,

ರಾಜಕೀಯ ವಲಯದಿಂದ ತುಂಬಾ ದೂರ ಉಳಿದ ಒಬ್ಬ ಮುಗ್ಧ ಕವಿಗೆ ಮಾತ್ರ ಬರೆಯಲು ಸಾಧ್ಯವಾಗುವಂಥ ಈ ಕವಿತೆ ಅಪರೂಪದ ಮುಗ್ಧ ಕವಿತೆಯಾಗಿ ಸೆಳೆದು ಬಿಡುತ್ತೆ.

ಈ ಕವಿತೆಯಲ್ಲಿ ಪ್ರತಿಮೆಯಾಗಿ ಕಾಣಿಸುವ ದೋಣಿಗಳು ಅದರ ಹಿಂದಿರುವ ಅನೇಕ ಶ್ರಮಜೀವಿಗಳ ಬದುಕಿನ ಆಸೆ, ಆಕಾಂಕ್ಷೆ, ಕನಸಿನ ರೆಕ್ಕೆಗಳನ್ನು ಬಿಚ್ಚುತ್ತಾ ಒಂದು ದಿನದ ಮಾರ್ಮಿಕ ಬದುಕಿನ ಅರ್ಥವನ್ನು ಚಿತ್ರಿಸುತ್ತೆ.

ಎಷ್ಟು ದೋಣಿಗಳಿವೆಯೋ ಅಷ್ಟು ಹುಟ್ಟುಗಳು ಎಷ್ಟು ಹುಟ್ಟುಗಳಿವೆಯೋ ಅಷ್ಟು ದುಡಿವ ಹುಟ್ಟುಗಳ ಬಗ್ಗೆಯೂ ಇದು ಬಿಂಬಿಸುತ್ತೆ.

ಎಲ್ಲರ ಯಾಂತ್ರಿಕ ಬದುಕಿನ ನಿರಾಶೆಗೆ, ವಿಷಾದಕ್ಕೆ ಈ ಕವನ ಕನ್ನಡಿಯಂತೆ ಪ್ರತಿಬಿಂಬಿಸುತ್ತೆ.

ಅಗಾಧ ಸಾಗರದಲ್ಲಿ ನಿಲ್ಲುವ ದೈತ್ಯ ಹಡಗಾಗದೆ, ಊರು ಸಾಗರಗಳ ನಡುವಿನ ಕಡಲಲ್ಲಿ ನಿಲ್ಲುವ ಈ ದೋಣಿಗಳು ಮಧ್ಯಮವರ್ಗದವರಂತೆ ನಿಲ್ಲುತ್ತವೆ. ಸಾಗರದ ವಿಕೋಪಕ್ಕೆ ಸಿಕ್ಕದೆ ತೇಲಿ ವಾಪಸ್ಸು ಬಂದು ಸಮಾಧಾನದ ಧನ್ಯವಾದ, ದೈನ್ಯತೆ

ಜರಗನಹಳ್ಳಿ ಶಿವಶಂಕರ್, ಶುಭದ ಪ್ರಕಾಶನ, ಜರಗನಹಳ್ಳಿ, ಜೆ.ಪಿ. ನಗರ ಅಂಚೆ, ಬೆಂಗಳೂರು-78

ತೋರುತ್ತೆ. ಕಡಲ ಕಿನಾರ ಎಷ್ಟು ವಿಸ್ತಾರವಿದ್ದರೂ ಒಂದು ಕಡೆ ಕೂಡುವ Slum (ಸ್ಲಂ)ನ ಒಗ್ಗಟ್ಟಿದೆ.

ಒಬ್ಬ ಹತ್ತಿರದ ಸ್ನೇಹಿತನ ಬಗ್ಗೆ ಹೀಗೆ ಬರೆಯಲು ಸಂಕೋಚವಿದ್ದರೂ ಕವಿತೆ ಬರೆಸಿಕೊಂಡಿದೆ ಎಂದರೆ ತಪ್ಪಾಗಲಾರದು ಎಂದು ನಂಬಿದ್ದೇನೆ.

ನಿಯಂತಕಾಲಿಕೆಗಳಲ್ಲಿ ಕಾಣಿಸಿಕೊಳ್ಳುವ ಕವನಗಳು ಅನೇಕ ಕಾರಣಗಳಿಂದ ಓದಲು ತಪ್ಪಿಹೋಗುವ ಕಾರಣಗಳಿಂದ ಮತ್ತೆ ಒಮ್ಮೆ ಓದಲಿ ಎಂಬ ಉದ್ದೇಶವೆ ಈ ಪ್ರಯತ್ನ.

●

ನಮ್ಮ ಸಾಮಾಜಿಕ ವ್ಯವಸ್ಥೆ, ಬದುಕಿನ ಜಂಜಾಟಗಳಿಗೆ ಆಹುತಿಯಾಗುತ್ತಿದ್ದ ಗೆಳೆಯ, ಕಾಲನ್ನು ಕಳೆದುಕೊಂಡು ಸಾಹಿತ್ಯಕ್ಕೆ ಕೊಡುಗೆಯಾಗಿ, ನನ್ನಂತಹವರಿಗೆ ಆಪ್ತ ಸಹೃದಯಿಯಾದ ಸ. ರಘುನಾಥ. "ದಾರಿ ಮತ್ತು ಆಕಾಶ" ಹಸ್ತಪ್ರತಿಯ ಸಂಕಲನಕ್ಕೆ 1991ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿ ಈತನ ಪಾಲಾಗಿರುವುದು ಬಹಳ ಅರ್ಥಪೂರ್ಣ.

ಈ ನಮ್ಮ ಪತ್ರಿಕೆಯಲ್ಲಿ ನಾವು ಒಂದಾಗಿರುವ ಮನೋಧರ್ಮಕ್ಕೆ, ಪ್ರಸ್ತುತ ಸಂದರ್ಭದಲ್ಲಿ ನಾವು ಒಟ್ಟಾಗಿ ಬರೆಯುತ್ತಿರುವುದಕ್ಕೆ, ನನಗೆ ವೈಯಕ್ತಿಕವಾಗಿ ಪ್ರಿಯವಾಗುವ ಸ್ನೇಹ ಸಾಮ್ಯಕ್ಕೆ ಸಂತೋಷವಾಗುವುದರಲ್ಲಿ ಅತಿಶಯ ಇರಲಾರದು.

ಈತ ಕತೆ ಹಾಗೂ ತೆಲುಗಿನ ಅನುವಾದಗಳಿಗೆ ಹೆಚ್ಚಿನ ಶ್ರಮ ವಹಿಸಿದವ, ಕಾವ್ಯ ವ್ಯಾಮೋಹಕ್ಕೆ ಇತ್ತೀಚಿನ ವರ್ಷಗಳಲ್ಲಿ ಆಕರ್ಶಿತನಾಗಿ ಇಂತಹ ಒಂದು ಗಮನಾರ್ಹ ಪ್ರಶಸ್ತಿ ಗಳಿಸಿಕೊಂಡಿರುವುದು ಈತನಿಂದ ಇನ್ನೂ ಹೆಚ್ಚಿನದನ್ನು ಕುತೂಹಲ, ಆಸಕ್ತಿಗಳಿಂದ ಕಾಯುವಂತಾಗಿದೆ.

ಶುಭಾಶಯಗಳೊಂದಿಗೆ

ಜರಗನಹಳ್ಳಿ ಶಿವಶಂಕರ್

ಓದುಗರ ಓಲೆ / ಓಣ್ಣನೋಟ

ಶೂದ್ರ ಸೆಪ್ಟೆಂಬರ್ 1991ರಲ್ಲಿ ಪ್ರಕಟವಾಗಿರುವ ಬಾಪು ಹೆದ್ದೂರಶೆಟ್ಟಿಯವರ ಪತ್ರಕ್ಕೆ ನನ್ನ ಕೆಲವು ಅನಿಸಿಕೆಗಳು ಈ ಕೆಳಗಿನಂತಿವೆ.

1. "ರೋಮನ್ ಕ್ಯಾಥೋಲಿಕರು ತಮ್ಮನ್ನು ಇತರೆ ಎಲ್ಲಾ ಕ್ರಿಶ್ಚಿಯನ್ ಪಂಗಡಗಳಿಗಿಂತ ಶ್ರೇಷ್ಠ ಎಂದು ನಂಬುತ್ತಾರೆ, ಹಾಗೆಯೇ ಶಿಯಾಗಳು ಅಥವಾ ಸುನ್ನಿಗಳು ಮುಸಲ್ಮಾನರೆಲ್ಲರಲ್ಲಿ ತಮ್ಮ ಪಂಗಡವನ್ನೇ ಶ್ರೇಷ್ಠ ಎಂದು ನಂಬುತ್ತಾರೆ. ಆದರೆ ಹಿಂದೂಗಳಿಗೂ ಹಾಗೂ ಕ್ರೈಸ್ತರು ಅಥವಾ ಮುಸಲ್ಮಾನರಿಗೂ ಇರುವ ವ್ಯತ್ಯಾಸವೆಂದರೆ ಹಿಂದುಗಳಲ್ಲಿರುವ ದಲಿತರಂತೆ ಇವರಲ್ಲಿ ಯಾವ ಪಂಗಡವವರೂ ತಮ್ಮನ್ನು ಇತರ ಪಂಗಡಗಳಿಗಿಂತ ಕನಿಷ್ಠ ಎಂದು ಭಾವಿಸುವುದಿಲ್ಲ. ಅಂದರೆ ಹಿಂದೂ ಸಮಾಜದಲ್ಲಿ ಜಾತಿಗಳು ಅಸಮಾನತೆಯನ್ನು ಒಪ್ಪಿಕೊಳ್ಳುತ್ತವೆ; ಬೇರೆ ಅಂದರೆ ಕ್ರೈಸ್ತ ಅಥವಾ ಮುಸ್ಲಿಂ ಸಮಾಜಗಳು ಅಸಮಾನತೆಯನ್ನು ಒಪ್ಪಿಕೊಳ್ಳುವುದಿಲ್ಲ" ಎಂದಿದ್ದಾರೆ. ಶ್ರೇಷ್ಠ-ಕನಿಷ್ಠ ಎಂಬ ಪರಿಕಲ್ಪನೆಯೇ ಅಸಮಾನತೆಯ ಸೆಲೆಯಲ್ಲವೇ? ಹಾಗಾಗಿ ಈ ಎಲ್ಲಾ ಧರ್ಮಗಳಲ್ಲೂ ಅಸಮಾನತೆಯ ಅಂಶಗಳು ಒಳಗೊಂಡಿವೆ. ಉದಾ: ಮುಸ್ಲಿಂ ಜನಾಂಗದಲ್ಲಿ 'ಪಿಂಜಾರರು' ಎಂಬ ಒಳಪಂಗಡವನ್ನು ತುಂಬಾ ಕೀಳಾಗಿ ಕಾಣಲಾಗುತ್ತಿದೆ. ಈ ಮೂರೂ ಧರ್ಮಗಳಲ್ಲಿ ಮೇಲು-ಕೀಳುಗಳ ಪ್ರಮಾಣಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಮೇಲು-ಕೀಳುಗಳ ಕಲ್ಪನೆ ಜೀವಂತ ಸತ್ಯ.

2. "ನನಗನ್ನಿಸುವಂತೆ ಜಾತಿ ಜಾತಿಗಳ ನಡುವೆ ಸಾಮಾಜಿಕ ಸಮಾನತೆ ತರುವುದು ನಮ್ಮ ಧ್ಯೇಯವಾಗಿರಬೇಕು" ಎಂದಿರುವ ಲೇಖಕರು ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡು ಸಮಾನತೆಯನ್ನು ಸಾಧಿಸುವ ಸುಂದರ ಸ್ವಪ್ನವನ್ನು ಕಂಡಂತಿದೆ. ವಾರಣಾಸಿಯಲ್ಲಿ ದಿ॥ ಜಗಜೀವನ್‌ರಾಮ್ ಅನಾವರಣ ಮಾಡಿದ ಶ್ರೀಕೃಷ್ಣನ ಪ್ರತಿಮೆಯನ್ನು ಮಾರನೆಯ ದಿನವೇ ಗಂಗಾಜಲ ತಂದು ಶುದ್ಧಿ ಮಾಡಿದ ಘಟನೆಯನ್ನು ಹಿಂದೊಮ್ಮೆ ಸಭೆಯೊಂದರಲ್ಲಿ ಲೇಖಕರೇ ಹೇಳಿದುದನ್ನು ಮರೆತಂತಿದೆ. ಎಲ್ಲಾ ಸ್ತರಗಳಲ್ಲೂ ಉನ್ನತ ಮಟ್ಟಕ್ಕೇರಿ 'ಗಣ್ಯವ್ಯಕ್ತಿ' (ಸಮಾನ) ಎನಿಸಿಕೊಂಡ ದಲಿತ ಮಂತ್ರಿ ದಿ॥ ಜಗಜೀವನ್‌ರಾಮ್‌ಗೆ ಉಂಟಾದ ಈ ಅವಹೇಳನದ ಮೂಲಸೆಲೆ

ಜಿ. ಟಿ. ನಾಗರಾಜು, 2708, ಮಹಡಿ, 7ನೇ 'ಎ' ಮುಖ್ಯರಸ್ತೆ. ಆರ್.ಪಿ.ಸಿ. ಲೇಔಟ್
ವಿಜಯನಗರ ಎರಡನೇ ಹಂತ, ಬೆಂಗಳೂರು-40

ಜಾತಿವ್ಯವಸ್ಥೆ ಮತ್ತು ಅದರ ಬೆನ್ನಿಗಂಟಿದ ಅಸಮಾನತೆ. ಅಸಮಾನತೆ ಮತ್ತು ಜಾತಿ ವ್ಯವಸ್ಥೆ ಒಂದೇ ನಾಣ್ಯದ ಎರಡು ಮುಖಗಳು. ಜಾತಿಗಳನ್ನು ಉಳಿಸಿಕೊಂಡು ಸಮಾನತೆಯನ್ನು ಸಾಧಿಸಬಹುದು ಎನ್ನುವ ಮಾತು "ಹುಚ್ಚು ಬಿಡೋವರೆಗೂ ಮದುವೆಯಾಗೋಲ್ಲ, ಮದುವೆಯಾಗೋವರೆಗೂ ಹುಚ್ಚು ಬಿಡೋಲ್ಲ" ಎಂಬ ಗಾದೆಯನ್ನು ನೆನಪಿಗೆ ತರುತ್ತದೆ.

3. "ಆದರೆ ಜಾತಿಯಿಂದಾಗುವ ಪ್ರಯೋಜನವನ್ನು ಗುರುತಿಸಿದ್ದೇನೆ. ಜಾತಿಯಲ್ಲಿರುವಷ್ಟು ಜನರನ್ನು ಸಂಘಟಿಸುವ ಶಕ್ತಿ ಬೇರೆ ಯಾವ ಪರಿಕಲ್ಪನೆಯಲ್ಲೂ ಇಲ್ಲ ಎಂಬುದನ್ನು ನೀವು ಗಮನಿಸಿರಬಹುದು, ಉದಾಹರಣೆಗೆ ಇಂತಹ ಶಕ್ತಿ ರಾಜಕೀಯ ಸಿದ್ಧಾಂತಗಳಿಗೂ ಇಲ್ಲ. ಬಹುಶಃ ಮತ ಅಥವಾ ಧರ್ಮಗಳಲ್ಲಿರಬಹುದು" ಎನ್ನುವ ಅಭಿಪ್ರಾಯ ಲೇಖಕರದು. ಜಾತಿ ಸಂಘಟನೆಗಳನ್ನು ಕಟ್ಟುವುದು ಸುಲಭ ಮತ್ತು ಅವುಗಳು ಸದೃಢವಾಗಿರುತ್ತವೆ ಎನ್ನುವುದಾದರೆ 'ಸಮಾಜವಾದ, ಇತರೆ ರಾಜಕೀಯ ಸಿದ್ಧಾಂತಗಳು ಮತ್ತು ರಾಜಕೀಯ ಪಕ್ಷಗಳು ಅಪ್ರಸ್ತುತವಾಗುವುದಿಲ್ಲವೆ? ಜನತಾಂತ್ರಿಕ ಸಮಾಜವಾದಿಗಳ ಯೋಚನಾ ಜಾಡು ಈ ಹೊಸ ದಿಕ್ಕು ಹಿಡಿದಿರುವುದ ರಿಂದ ಇನ್ನು ಮುಂದೆ ಅವರುಗಳು ಜಾತಿ, ಧರ್ಮ, ಭಾಷೆಗಳ ಆಧಾರದ ಮೇಲೆ ರಾಜಕೀಯ ಪಕ್ಷಗಳನ್ನು ಕಟ್ಟಲು ತೊಡಗಬಹುದು. ಉದಾ: ಬ್ರಾಹ್ಮಣರ ಪಕ್ಷ, ಲಿಂಗಾಯಿತರ ಪಕ್ಷ, ಒಕ್ಕಲಿಗರ ಪಕ್ಷ........ಇತ್ಯಾದಿ. ಈ ಪಕ್ಷಗಳು ರಾಜಕೀಯ ಅಧಿಕಾರವನ್ನು ಪಡೆದುಕೊಂಡು ತಮ್ಮ ತಮ್ಮ ಜಾತಿ, ಧರ್ಮ ಮತ್ತು ಭಾಷೆಗಳನ್ನು ಅಭಿವೃದ್ಧಿ ಹೊಂದಿಸುವ ಮೂಲಕ ಅಸಮಾನತೆ ಮತ್ತು ಬಡತನವನ್ನು ಹೋಗ ಲಾಡಿಸಿ, ದೇಶೋದ್ಧಾರ ಮಾಡಲು ಸಾಧ್ಯ ಎನ್ನುವ ಹೊಸ ರಾಜಕೀಯ ಸಿದ್ಧಾಂತ ಸೃಷ್ಟಿಸಿದ ಕೀರ್ತಿ ಜನತಾಂತ್ರಿಕ ಸಮಾಜವಾದಿಗಳಿಗೆ ಸಲ್ಲಬೇಕು. ಲಿಂಗಾಯಿತರಿಗೆ ರಾಜಕೀಯ ಅಧಿಕಾರ ಬೇಕಾದಲ್ಲಿ, ಅವರೇನು ಮಾಡಬೇಕು? ಈ ಹೊಸ ಸಿದ್ಧಾಂತದ ಪ್ರಕಾರ ಆಧ್ಯಾನಿ ಮಾದರಿಯಲ್ಲಿ "ಬಸವ ಮಂದಿರ" ಕಟ್ಟಲು ಶರಣ–ಶರಣೆಯರು ರಥಯಾತ್ರೆ ಕೈಗೊಳ್ಳುವ ಮೂಲಕ ರಾಜಕೀಯ ಗದ್ದುಗೆ ಏರಬಹುದು! ಜಾತಿ ವ್ಯವಸ್ಥೆ ಉಳಿಸಿಕೊಂಡು ಅಸಮಾನತೆ ವಿನಾಶ ಮಾಡಬಹುದು ಎಂದು ಆಲೋಚಿಸುವ ಜನತಾಂತ್ರಿಕ ಸಮಾಜವಾದಿಗಳಿಗೆ, ಅಂಬೇಡ್ಕರ್ ಅನುಭವಿಸಿದಂತಹ ಅವಮಾನವೀಯ ಕ್ರೂರತೆಗಳ ಅನುಭವವಾಗದ ಹೊರತು, ಬೆಲ್ಚಿ ಮತ್ತು ತ್ಸುಂದೂರ್‌ಗಳಲ್ಲಿ ಮಾನವತೆಯ ಮಾಂಸ ಬೇಯಿಸಿದ ದಳ್ಳುರಿಗಳ ಕಿಡಿಗಳು ದಹಿಸದ ಹೊರತು, ಈ ಜನರಿಗೆ ಸತ್ಯದ ಅರಿವಾಗದೇನೋ? ಜನತಾಂತ್ರಿಕ ಸಮಾಜವಾದಿಗಳ ಈ ಹೊಸ ಆಲೋಚನೆ degeneration ಸಂಕೇತವೇ!

4. ಜಾತಿ ಆಧಾರಿತ ಶಿಕ್ಷಣ ಸಂಸ್ಥೆಗಳಿಂದ ಬ್ರಾಹ್ಮಣರು ಮತ್ತು ಲಿಂಗಾಯಿತರು ಸಾಮಾಜಿಕ–ಆರ್ಥಿಕ ಸ್ಥಾನಮಾನ ಗಳಿಸುವುದು ಸಾಧ್ಯವಾಯಿತು ಎನ್ನುವವಾದ. ಇತ್ತೀಚೆಗೆ ದ್ವಿಚಕ್ರ ವಾಹನಗಳಲ್ಲಾದ ಕ್ರಾಂತಿಯನ್ನು ಕಂಡು ಭಾರತದಲ್ಲಿ ಬಡತನವೇ ಇಲ್ಲ! ಎಂದು ಹೇಳುವಂತಿದೆ. ಶತಶತಮಾನಗಳಿಂದ ತಿಂದುಂಡು ಕೊಬ್ಬಿರುವ ಜನರು ಜಾತಿ ಆಧಾರಿತ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿಕೊಂಡು ತಮ್ಮನ್ನಷ್ಟೇ ಉದ್ಧಾರ ಮಾಡಿಕೊಂಡಿರುವುದು ಬರೆಯುವಂತಹ ಸಾಧನೆಯೆ? ಈ ಮೇಲ್ವರ್ಗದ ಜನರಿಗೆ ಐಶ್ವರ್ಯ–ಸ್ಥಾನಮಾನ ಸಿಕ್ಕಿದೆ ನಿಜ, but, at whose cost? ಇಲ್ಲಿ ವಿವೇಕಾನಂದರ ಮಾತೊಂದನ್ನು ನೆನೆಯಬೇಕು : "……So long as the millions live in hunger and ignorance I hold every man a traitor who having been educated at their expense, pays not the slightest heed to them?"

ಯಾವ ದೇಶದಲ್ಲಿ ಶೇ.50 ಕ್ಕಿಂತ ಹೆಚ್ಚು ಜನರು (ಬಹುಪಾಲು ದಲಿತರು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು) ಹೊಟ್ಟೆಗಿಲ್ಲದೇ ನರಳುವರೋ, ಆ ದೇಶದ ಇನ್ನರ್ಧದಷ್ಟು ಜನರು ಗಳಿಸಿದ ಐಶ್ವರ್ಯ, ಸ್ಥಾನಮಾನ ಮತ್ತು ಪ್ರಗತಿ ಮಸಣದ ಹೂವಿಗೆ ಸಮಾನ.

—ಜಿ. ಟಿ. ನಾಗರಾಜು

●

ಬಸವಣ್ಣನವರ ಜಾತಿ-ರಹಿತ ಹಾಗೂ ವರ್ಗ-ರಹಿತ ಸಮಾಜ ಪರಿಕಲ್ಪನೆಯ ಬಗ್ಗೆ—ಒಂದು ಪ್ರತಿಕ್ರಿಯೆ

ಬಾಪು ಹೆದ್ದೂರಶೆಟ್ಟಿಯವರು 'ಶೂದ್ರ'ದ ಸೆಪ್ಟೆಂಬರ್ 1991ರ ಸಂಚಿಕೆಯಲ್ಲಿ "ಬಸವಣ್ಣನವರು ಬರಿ ಜಾತ್ಯಾತೀತ ಸಮಾಜವನ್ನಲ್ಲ, ಜಾತಿರಹಿತ ಸಮಾಜವನ್ನೂ ಕಟ್ಟಬಯಸಿದ್ದರು" ಎಂಬ ಮಠಾಧೀಶರೊಬ್ಬರ ಮಾತಿಗೆ ತಮ್ಮ ಪ್ರತಿಕ್ರಿಯೆಯನ್ನು ಸೂಚಿಸಿ ಬರೆದಿರುವುದು ಸರಿಯಷ್ಟೆ. ಮೊದಲು ಬಾಪು ಅವರ ಪ್ರತಿಕ್ರಿಯೆಗೆ ನನ್ನ ಸಹಮತವಿದೆ ಎಂಬುದನ್ನು ಹೇಳಿಬಿಡುತ್ತೇನೆ ಮತ್ತು ಅವರ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಒಂದೆರಡೂ ಮಾತುಗಳನ್ನೂ ಇಲ್ಲಿ ಹೇಳಬಯಸುತ್ತೇನೆ.

ಮೊದಲನೆಯ ಮಾತು, ಬಸವಣ್ಣನವರು ಜಾತಿರಹಿತ ಸಮಾಜವನ್ನೂ ಕಟ್ಟಬಯಸಿದ್ದರು ಎಂಬ ಬಗ್ಗೆ. ಇದು ಅವರು ಬದುಕಿದ್ದ ಕಾಲ-ದೇಶಗಳಲ್ಲಿ ಸಾಧ್ಯವೇ ಇರಲಿಲ್ಲ. ಜಾತಿ-ರಹಿತ ಅಥವಾ ಜಾತ್ಯಾತೀತ (ಸೆಕ್ಯೂಲರಿಸಂ) ಎಂಬ ಪರಿಕಲ್ಪನೆಯೇ

ಶಿವರಾಮಯ್ಯ, ರೀಡರ್, ಕನ್ನಡ ವಿಭಾಗ, ಆರ್. ಸಿ. ಕಾಲೇಜು, ಬೆಂಗಳೂರು-560 001

ತೀರ ಈಚಿನದು. ಮಹಾಮನೆಯಲ್ಲಿ ಅನ್ನ ದಾಸೋಹಕ್ಕೆ ಹಾಗೂ ಅನುಭವ ಮಂಟಪದಲ್ಲಿ ಜ್ಞಾನ ದಾಸೋಹಕ್ಕೆ ಎಲ್ಲ ಜಾತಿಯ ಹಾಗೂ ಎಲ್ಲ ವರ್ಗದ ಜನರಿಗೂ ಸಮಾನವಾದ ಅವಕಾಶವಿತ್ತು, ನಿಜ. ಆದರೆ, ಇದಕ್ಕೆ ಕಡ್ಡಾಯವಾಗಿದ್ದ ಅರ್ಹತಾ ಪದವಿ ಎಂದರೆ, ಅವರು ಶಿವಭಕ್ತರಾಗಿರಲೇ ಬೇಕಾಗಿತ್ತು. (ಆದ್ದರಿಂದ ಹೊಟ್ಟೆಪಾಡಿನ ಡಾಂಭಿಕ ಭಕ್ತರು ಒಳಗೆ ನುಸುಳಿದ್ದುಂಟು. ಈ ವಿಚಾರ ಆ ಮೇಲೆ)

"ಅಪ್ಪ ನಮ್ಮ ಮಾದಾರ ಚೆನ್ನಯ್ಯ, ಹೊಲೆಮಾದಿಗರಿಗೆ ಹುಟ್ಟಿದವನು ನಾನು" ಇತ್ಯಾದಿಯಾಗಿ ಬಸವಣ್ಣ ಹೇಳಿದ್ದು ಕೀಳರಿಮೆಯಿಂದ ಹುಟ್ಟಿದ ದೈನ್ಯದ ಮಾತಲ್ಲ. ಇದು ಮೇಲ್‌ಜಾತಿಯವರಿಗೆ ಸವಾಲು ಹಾಕಿ (ಅವರ ಹುಟ್ಟು ಎಲ್ಲರಿಗೂ ಗೊತ್ತಿದ್ದ ವಿಚಾರ) ಕೆಳಜಾತಿಗಳೂ ಉತ್ತಮ ಜಾತಿಗಳಿಗೆ **ಸಮಾನ** ಎಂಬ ಸ್ವಾಭಿಮಾನವನ್ನು, ಆತ್ಮಪ್ರತ್ಯಯವನ್ನು ಅವರಲ್ಲಿ ಹುಟ್ಟು ಹಾಕಲು ಹಾಗೆ ಹೇಳಿದರು ಮತ್ತು ಕೆಳಜಾತಿಗಳೊಂದಿಗೆ ತನ್ನನ್ನು ಗುರ್ತಿಸಿಕೊಂಡ ಬಸವಣ್ಣ ಅವರೊಂದಿಗೆ ಆತ್ಮೀಯತೆಯನ್ನು ಗಳಿಸಿಕೊಂಡರು (ಗಾಂಧೀಜಿಯನ್ನು ಸ್ಮರಿಸಿಕೊಳ್ಳಿ).

ಹೀಗೆ, ಸಮಾನತೆಗಾಗಿ ಹೋರಾಡುವ ಸಂದರ್ಭದಲ್ಲಿಯೇ ಅವರು ತಾವೇ ನಿರ್ಮಿಸಿಕೊಂಡ ಇನ್ನೊಂದು ಧಾರ್ಮಿಕ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದು ಭವಿ (ಶಿವಭಕ್ತನಲ್ಲದವನು, ಅವನು ಅನ್ಯ ದೈವಭಕ್ತನಾಗಿದ್ದರೆ?) ಮತ್ತು ಭಕ್ತ (ಇವನು ಕೇವಲ ಶಿವಭಕ್ತ ಮಾತ್ರ) ಎಂಬ ಹೊಸ ಗುಂಪುಗಳನ್ನು ಶರಣರು ಹುಟ್ಟು ಹಾಕಿದರು. ಕೂಡಲಸಂಗಗಲ್ಲದೆ ಮತ್ತೊಂದಕ್ಕೆರಗಿದಡೆ ಕಿವಿ ಮೂಗ ಕೊಯ್ಯುವನು' ಎಂದು ವೀರ ಮಹೇಶ್ವರ ಸ್ಥಲದಲ್ಲಿ ಹೇಳಿದ ಬಸವಣ್ಣನವರು ಅನ್ಯ ದೈವಭಕ್ತರ ಬಗ್ಗೆ ಅಸಹನೆಯಿಂದ ನಡೆದುಕೊಂಡರೆಂದು ಹೇಳಬೇಕಾಗುತ್ತದೆ. ಆದರೆ, ಈ ಮಾತು ಸರಿಯಲ್ಲ, ಅವರು ಭಯಮೂಲವಾದ ಜಾತಿ-ರಹಿತ ಸಮಾಜವನ್ನು ಕಟ್ಟಲು ಬಯಸಲಿಲ್ಲ. ಅವರು ಕಟ್ಟಬಯಸಿದ್ದು ಸ್ನೇಹಮೂಲವಾದ ಸಮಾನತೆಯ ಆಧಾರದ ಮೇಲೆ ನಿಲ್ಲಬಲ್ಲ ಸಮಾಜವನ್ನು ಎಂದು ತಿಳಿಯಬೇಕು. ಆದ ಕಾರಣ ವಚನಕಾರರು ತಮ್ಮ ಜಾತಿಸೂಚಕ ಶಬ್ದಗಳನ್ನು ಬಳಸತೊಡಗಿದರು. ಆದರೆ ಉತ್ತಮ ಜಾತಿಯಲ್ಲಿ ಹುಟ್ಟಿಬಂದವರಿಗೆ ಹಾಗೆ ಬಳಸುವ ಅಗತ್ಯವಿರಲಿಲ್ಲ. ಈಗ ಪಾಶ್ಚಾತ್ಯ ರಾಷ್ಟ್ರಗಳಲ್ಲಿ (Black is beautiful) 'ಕಪ್ಪು ಸೌಂದರ್ಯ' ಎಂದು ಹೇಳಿ ಸಮಾನತೆಯನ್ನು ಸಾಧಿಸಲು ಹೊರಟಿರುವ ಪ್ರವೃತ್ತಿಯನ್ನು ನಾವು ಇಲ್ಲಿ ಸ್ಮರಿಸಬಹುದು.

ಎರಡನೆಯ ಮಾತು, ಬಸವಣ್ಣನವರು ವರ್ಗ-ರಹಿತ ಸಮಾಜವನ್ನು ಕಟ್ಟಬಯಸಿದ್ದರು ಎಂಬ ಬಗ್ಗೆ. ಅವರ ವರ್ಗರಹಿತ ಪರಿಕಲ್ಪನೆ ಇವತ್ತಿನ 'ಕಮ್ಯೂನಿಸಂ' ಮಾದರಿಯ ದಿಕ್ಕು ಎಂದು ಕೆಲವರ ಅಂಬೋಣ. ಆದರೆ ಇದೂ ಸಹ ಅವಸರದ ನಿರ್ಣಯವೆನಿಸುತ್ತದೆ. ಏಕೆಂದರೆ, ಬಸವಾದಿಗಳು ಶಿವಭಕ್ತನಲ್ಲದ ಕೇವಲ ಭವಿಗಳ

ಮೇಲೆ ಸಿಟ್ಟುಗೊಂಡರೇ ಹೊರತು 'ಉಳ್ಳವರ' ಮೇಲೆ ಹೋರಾಟಕ್ಕಿಳಿಯಲಿಲ್ಲ. ಅವರೊಂದಿಗೆ ರಾಜಿ ಮಾಡಿಕೊಂಡರು. ಆಗ ಬಡಪರಾದ ಭವಿಗಳ ಗತಿ ಏನಾಗಿರಬೇಡ? ಅವರನ್ನು ಸಂಪೂರ್ಣ ಮರೆತು ಬಿಟ್ಟರು. ಶಿವಭಕ್ತರಾದವರಿಗೆ ಮಾತ್ರ ಕೆಲವು ಅನುಕೂಲತೆಗಳು (ಮೀಸಲಾತಿ)ಗಳು ದೊರೆತವು ಎಂಬುದಕ್ಕೆ ಸ್ಪಷ್ಟ ಪುರಾವೆಗಳಿವೆ. (ಈ ಮಾತು ಇವತ್ತಿನ Reservationಗೆ ಸಮಾನಾಂತರ) ಆರ್ಥಿಕ ಸೌಲಭ್ಯಗಳಿಗಾಗಿ ಜನರು ಈಗ ನಾನು–ತಾನು ಹಿಂದುಳಿದವನು, ಪರಿಶಿಷ್ಟ ಎಂದು ಜಾತಿ ಪ್ರಮಾಣ ಪತ್ರಗಳನ್ನು ಪಡೆಯಲು ಪಾಡು ಪಡುತ್ತಾರಷ್ಟೆ. ಹಾಗೆಯೇ ಹಿಂದೆ ಹೊಟ್ಟೆಪಾಡಿನ ಕೆಲವು ಕಳ್ಳರು ಭಕ್ತನ ವೇಷವನ್ನು ಹಾಕಿದ್ದುಂಟು. ಇದಕ್ಕೆ ಪರೋಕ್ಷವಾಗಿ ಶಿವಶರಣರೇ ಕಾರಣರು. ಯಾಕೆಂದರೆ ಎಲ್ಲ ಬಡವರನ್ನು ಸಮಾನವಾಗಿ ಕಂಡು 'ಅನ್ನ ದಾಸೋಹ' ನಡೆಸಿದ್ದರೆ ವೇಷ ಕಟ್ಟುವ ಅವಶ್ಯಕತೆ ಏನಿತ್ತು? ಬಹುಶಃ ಕೆಳಜಾತಿಯ ಎಲ್ಲ ಬಡವರೂ ಅಂದು ವೀರಶೈವ ಧರ್ಮದ ಆಶ್ರಯಕ್ಕೆ ಬಂದಿದ್ದರು ಎಂದು ಭಾವಿಸುವುದಾದರೆ ಇವತ್ತು ಕರ್ನಾಟಕದಲ್ಲಿ ಕೆಳವರ್ಗ, ಕೆಳಜಾತಿಗಳ ಸುಳಿವೇ ಇರಬಾರದಾಗಿತ್ತು. ಇಂದಿಗೂ ಈ ನೆಲದಲ್ಲಿರುವ, ವೀರಶೈವ ಮತವೂ ಸೇರಿದಂತೆ, ಇನ್ನೂ ಉಳಿದಿರುವ ಜಾತಿ ಭೇದ ಹಾಗೂ ವರ್ಗಭೇದದ ಬೇರುಗಳೇ ಜ್ವಲಂತ ಸಾಕ್ಷಿ ಹೇಳುತ್ತವೆ, ಬಸವಾದಿಗಳ ಸೋಲಿನ ಪರಂಪರೆಯನ್ನು ನೋಡಿ ಎಂಬುದಾಗಿ.

ಆದರೆ, ಇಷ್ಟಾಗಿಯೂ ಬಸವಣ್ಣ ಮುಂತಾದವರು ತಮ್ಮ ಧರ್ಮದ ಚೌಕಟ್ಟಿನಲ್ಲಿಯೇ ಅಸಾಧಾರಣವಾದ ಕೆಲವು ಮಾನವೀಯ ಮೌಲ್ಯಗಳನ್ನು ರೂಪಿಸಿದರು. ಗಂಡು–ಹೆಣ್ಣಿನ ನಡುವೆ ಸಮಾನತೆಯನ್ನು ಸಾಧಿಸಿ ತೋರಿಸಿದರು; ಕಾಯಕದ ಮಾತನ್ನು ಮಾಡಿ ತೋರಿಸಿದರು; ಸತ್ಯ, ಅಹಿಂಸೆ, ಅಪರಿಗ್ರಹಗಳನ್ನು ಎತ್ತಿಹಿಡಿದರು.

ಬಾಪು ಹೆದ್ದೂರಶೆಟ್ಟರ ಮತ್ತೊಂದು ಅಭಿಪ್ರಾಯಕ್ಕೆ ನನ್ನ ಸಹಮತವಿಲ್ಲ. ಏನೆಂದರೆ, 'ಕ್ರೈಸ್ತರಲ್ಲಿ, ಮುಸಲ್ಮಾನರಲ್ಲಿ ಅನೇಕ ಪಂಗಡ ಒಳಪಂಗಡಗಳಿದ್ದೂ ಸಹ ಅವುಗಳಲ್ಲಿ ಪರಸ್ಪರ ಸಮಾನತೆ ಎಂಬುದು ಇದೆ. ಆದರೆ, ಹಿಂದೂ ಧರ್ಮದಲ್ಲಿ ಬ್ರಾಹ್ಮಣಾದಿ ಜಾತಿಗಳವರು ಮೇಲರಿಮೆಯಿಂದಲೂ, ಶೂದ್ರಾದಿಗಳು ಕೀಳರಿಮೆಯಿಂದಲೂ ವರ್ತಿಸುತ್ತವೆ' ಎಂದೆನ್ನುತ್ತಾರೆ; ಆದರೆ ನನಗೆ ತಿಳಿದ ಮಟ್ಟಿಗೆ ಕ್ರೈಸ್ತರಲ್ಲಿ ಹಾಗೂ ಮುಸಲ್ಮಾನರಲ್ಲಿಯೂ ಕೂಡ ಪಂಗಡ ಒಳಪಂಗಡಗಳಿದ್ದೂ ಅವುಗಳಲ್ಲಿಯೂ ಮೇಲರಿಮೆ. ಕೀಳರಿಮೆ ಉಂಟು. ಇದನ್ನು ಬಾಪುರವರು ಇನ್ನಷ್ಟು ಸ್ಪಷ್ಟಗೊಳಿಸಿದರೆ ಒಳ್ಳೆಯದು.

ಸಾರಾಂಶವಾಗಿ, ಬಸವಾದಿ ವಚನಕಾರರು ತಾವೇ ಸೃಷ್ಟಿಸಿಕೊಂಡ 'ಭಕ್ತ–ಭವಿ' ಎಂಬಂಥ ಧಾರ್ಮಿಕ ಚೌಕಟ್ಟಿನಲ್ಲಿ ಸಿಲುಕಿದ ಪ್ರಯುಕ್ತ ಏನೆಲ್ಲವನ್ನೂ ಸಾಧಿಸಬಹುದಾಗಿದ್ದ ವಚನ 'ಚಳವಳಿ'ಯು ತನಗೆ ತಾನೇ ತಣ್ಣಗಾಗಿ ಹೋಗಬೇಕಾಯಿತು.

ಇದೇ ಅದರ ಮಿತಿಯೂ ಹೌದು. ಆದ್ದರಿಂದ ನಾವು ಬಸವಣ್ಣನವರು ಜಾತಿ-ರಹಿತ ಹಾಗೂ ವರ್ಗರಹಿತ ಸಮಾಜವನ್ನು ಕಟ್ಟಬಯಸಿದ್ದರು (ಸೆಕ್ಯೂಲಾರಿಸಂ ಮತ್ತು ಕಮ್ಯೂನಿಸಂ) ಎಂದು ಮುಂತಾಗಿ ವೈಭವೀಕರಿಸಿ ಮಾತನಾಡುವುದು ಅಷ್ಟು ಸೂಕ್ತ ವಲ್ಲ. ಅವರು ಬಹುಶಃ ಜಾತಿಗಳಲ್ಲಿ ಪರಸ್ಪರ ಸಮಾನತೆಯನ್ನು ಸಾಧಿಸಲು ಪ್ರಯತ್ನ ಪಟ್ಟರು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಸಮಾಜವಾದಿಗಳು ತಳೆದಿರುವ ಅಭಿಪ್ರಾಯದಂತೆ, ಮನುಷ್ಯರ ಜಾತಿಗಳನ್ನು ನಷ್ಟಮಾಡಲು ಸಾಧ್ಯವಿಲ್ಲ ವಾದರೂ ಅವುಗಳು ಪರಸ್ಪರ ಸಮಾನತೆಯನ್ನು ಸಾಧಿಸಿಕೊಂಡು ಸೃಜನಶೀಲವಾಗಿ ಬೆಳೆಯಬಹುದೆಂಬುದರಲ್ಲಿ ಹೆಚ್ಚು ವಾಸ್ತವಾಂಶವಿದೆ ಮತ್ತು ಆರೋಗ್ಯಕರ ಪ್ರಜಾ ಪ್ರಭುತ್ವಕ್ಕೆ ಇದು ಬಿಟ್ಟು ಬೇರೆ ದಾರಿಯೇ ಇಲ್ಲ.

—ಶಿವರಾಮಯ್ಯ

●

ಪ್ರೀತಿಯ ಶೂದ್ರ,

ನಿನ್ನ ಪತ್ರಿಕೆ ಬರಿ ನಿನ್ನ ಪತ್ರಿಕೆಯಾಗಿಲ್ಲ ನಮ್ಮೆಲ್ಲರ ಪತ್ರಿಕೆಯಾಗಿದೆ. ಇದಕ್ಕೆ ಕಾರಣ ಹಗೆತನ, ವ್ಯಕ್ತಿವಾದ ಮತ್ತು ವೈರುಧ್ಯಗಳನ್ನು ಮೀರುವ ಅದರ ಸಮನ್ವಯ ಶೀಲತೆ ಮತ್ತು ಸ್ನೇಹಸೂತ್ರ. ಶೂದ್ರ, ಬ್ರಾಹ್ಮಣ, ಶ್ರೇಷ್ಠ-ಕನಿಷ್ಠ, ನವೋ ದಯ-ನವ್ಯ, ದಲಿತ-ಬಂಡಾಯ, ಸಾಹಿತ್ಯಕ-ಸಾಹಿತ್ಯೇತರ, ಮಹಿಳೆ-ಪುರುಷ, ಹಿರಿಯ-ಕಿರಿಯ, ರಾಜಧಾನಿಯ-ರಾಜ್ಯದ ಮೂಲೆಯ, ಮಾರ್ಕ್ಸ್‌ವಾದಿ-ಲೋಹಿಯಾ ವಾದಿ, ಗಾಂಧೀವಾದಿ-ಅಂಬೇಡ್ಕರ್‌ವಾದಿ ಗುಂಪುಗಳನ್ನೆಲ್ಲ ಸಮಾನ ವೇದಿಕೆಗೆ ತರುವ ಜಾಯಮಾನದ ಆತ್ಮೀಯ ಪತ್ರಿಕೆ 'ಶೂದ್ರ'.

ಇದಕ್ಕೂ ಬೇರೆ ಪತ್ರಿಕೆಗಳಿಗೂ ಒಂದು ವ್ಯತ್ಯಾಸವಿದೆ. ಬೇರೆ ಪತ್ರಿಕೆಗಳು ವ್ಯಕ್ತಿವಾದಿ ಸಂಪಾದಕರ ಹೆಸರು ಲಾಂಛನಗಳಿಂದ ತಮ್ಮ ವ್ಯಕ್ತಿತ್ವ ಬೆಳೆಸಿಕೊಂಡಿವೆ. ಆದರೆ 'ಶೂದ್ರ' ತನ್ನ ಸಂಪಾದಕನಿಗೇ ಒಂದು ವ್ಯಕ್ತಿತ್ವ ತಂದುಕೊಟ್ಟಿದೆ. ಈ ವ್ಯಕ್ತಿತ್ವ ಸಮುದಾಯ ಪ್ರೇಮದ ಸಮೂಹ ಪ್ರಜ್ಞೆಯ ವ್ಯಕ್ತಿತ್ವ. ಅಸಂಖ್ಯಾತ ಓದುಗರ ಒತ್ತಾಸೆಯಿಂದ ಸಾಧ್ಯವಾಗಿರುವಂಥದು ಇದು, ಹೀಗಾಗಿ ನಮ್ಮ ಸಮಷ್ಟಿಯ ಬ್ಯಾಲೆನ್ಸ್‌ಡ್ ಟೆಂಪ್ರೇಚರ್ ಕಾಯ್ದುಕೊಳ್ಳಲು ಸಹಾಯ ಮಾಡುವ ಥರ್ಮಾಮೀಟ ರ್‍ರಾಗಿದೆ 'ಶೂದ್ರ'.

ಜ್ವರ ಅಳೆಯುವ ಥರ್ಮಾಮೀಟರಿಗೇ ಜ್ವರ ಏರಿದರೆ ಗತಿ ಏನು?

ವಯಸ್ಸಾದರೂ ಕನಸು ಕಾಣುವುದನ್ನ ಬಿಡಲಾರೆ ಎಂಬ ಹಟವಿದೆ ನಿನ್ನ ಕಣ್ಣುಗಳಲ್ಲಿ. ಇದು ಇಷ್ಟವಾಗುತ್ತದೆ. ಆದರೆ ಒಮ್ಮೊಮ್ಮೆ ಈ ಮುಗ್ಧ ಕಣ್ಣು

ಬಿದರಹಳ್ಳಿ ನರಸಿಂಹಮೂರ್ತಿ, 'ಅನಿಮಿಷ', ದುರ್ಗಿಗುಡಿ, ಹೊನ್ನಾಳಿ-577 217

ಗಳನ್ನು ಯಾವುದೋ ಕಾಳಿಂಗ ಕಣ್ಣುಗಳು ನುಂಗಿ ಗ್ರಹಣದ ಕತ್ತಲೆ ಆವರಿಸಿದಾಗ ದುಃಖವಾಗುತ್ತದೆ. ಹೇಸಿಗೆಯೊಡನೆ ಆಡುವ ಮಗುವನ್ನು ಕಂಡ ತಾಯಿಗೆ ಆಗುವ ನೋವಾಗುತ್ತದೆ. ನಿನ್ನ ಹೃದಯ ನಿರ್ಮಲವಾದದ್ದು. ಅದನ್ನು ಹಿತಶತ್ರುಗಳ ಎದೆಪದಕ ಮಾಡಿ ತೂಗು ಹಾಕಬೇಡ ದಯವಿಟ್ಟು. ಅದರ ಬೆಳಕು ಮಾಸದಂತೆ ನೋಡಿಕೋ.

ಶಿವಪ್ರಕಾಶ್‌ಗೆ ಕೀರು, ನಾನು, ರಾಮುನ್, ಶರತ್ ಕೂಡ ನಿನ್ನಷ್ಟೆ ಆತ್ಮೀಯರು. ನಮಗೆಂದೂ ಅವನು ಜಾತಿವಾದಿ ಎನಿಸಿಲ್ಲ. ನಮ್ಮ ಹಾಗೆ ಅವನೂ ಜಾತಿ ಬಿಟ್ಟವನು. ಪಿತೃಪರಂಪರೆ ಅಪ್ಪನಾಸ್ತಿ-ಪಾಸ್ತಿ ಎಲ್ಲಕ್ಕು ತಿಲಾಂಜಲಿ ಕೊಟ್ಟು ನಮ್ರವಾಗಿ ಬದುಕು ತ್ತಿರುವ ಗೆಳೆಯ. ಅವನಿಗೆ ಹಿಡಿಶಾಪ ಹಾಕುತ್ತಲೆ ಇರುವವರು ಕೆಲವರಾದರೆ, ಹೊತ್ತು ಮೆರೆಯುವ ಅಭಿಮಾನಿಗಳು ಕೆಲವರಿರುತ್ತಾರೆ. ಅದು ಅವನ ತಪ್ಪೆ? ಅವನು ಸಂಕಿರಣಕ್ಕೆ ಬಂದೇ ಇರಲಿಲ್ಲ. ಅವನಿಗೆ ಯಾರೂ ಸನ್ಮಾನವನ್ನೂ ಮಾಡಿಲ್ಲ.

ಚಿಕ್ಕಂದಿನಲ್ಲೇ ತಾಯಿ ಸತ್ತು ತಬ್ಬಲಿಯಾಗಿ ಅಪ್ಪನ ಆಟಾಟೋಪದಲ್ಲಿ ಬೆಳೆದ. ಕಟ್ಟಿಕೊಂಡಿದ್ದ ಸಂಸಾರದಲ್ಲೂ ಸುಖಕ್ಕೆ ಸಲ್ಲದೆ ತಳವುಳದ ಸಾಗರದಲ್ಲಿ ಈಸುತ್ತಿದ್ದಾನೆ. ಗುರುವನ್ನೆ ಅಪ್ಪ ಅಮ್ಮ ಎಂದು ಸ್ನೇಹಿತರನ್ನೆ ಬಂಧುಗಳೆಂದು ನಂಬಿಕೊಂಡಿದ್ದಾನೆ. ಕಾಂಕ್ರೀಟು ಕಾಡುಗಳಿಂದ ಜನಾರಣ್ಯಗಳಿಂದ ತುಂಬಿಹೋಗಿರುವ ಮಹಾನಗರಗಳ ನೋವನ್ನು ಎಲ್ಲ ಖಂಡಗಳ ಸಂಕಟವನ್ನು ಅವನ ಹೃದಯದಲ್ಲಿ ಕಂಡಿದ್ದೇವೆ ನಾವು. ಅವನೊಳಗಿನ ಕವಿಯನ್ನು ಕಾಪಾಡಬೇಕು ನಾವೆಲ್ಲಾ. ನಿನ್ನಂಥ ಗೆಳೆಯರು ಅವನ ಮನಸ್ಸಿನ ಸ್ಥಿಮಿತವನ್ನು ಕಾಪಾಡಬೇಕು. ದೂರದಲ್ಲಿರುವವರು ವಿನಾಕಾರಣ ಯಾರನ್ನೂ ಅಪಾರ್ಥ ಮಾಡಿಕೊಳ್ಳದಂತೆ ಎಚ್ಚರವಹಿಸಬೇಕು.

ಅವನ ಬರವಣಿಗೆಯನ್ನ ಬೆಲೆಗಟ್ಟುವ ಕೆಲಸ ಬೇರೆಯವರಿಗಿರಲಿ. ಗೆಳೆಯರಾದ ನಾವು ಅವನ ವ್ಯಕ್ತಿತ್ವದ ವಿಕಾಸವನ್ನು ಗೌರವಿಸೋಣ. ಅವನು ಕೇವಲ ಪ್ರೀತಿಗೆ ಅರ್ಹನಾದವನು ಎಂಬುದನ್ನು ಅರಿಯೋಣ.

— ಬಿದರಹಳ್ಳಿ ನರಸಿಂಹಮೂರ್ತಿ

ಪ್ರಿಯ ಶೂದ್ರ,

ಅಕ್ಟೋಬರ್ ಸಂಚಿಕೆಯ 'ಕನಸಿಗೊಂದು ಕಣ್ಣು' ಅಂಕಣದಲ್ಲಿ ಮುಂದೇಕಿ ಘಾತಿ ಮೂಳ ಗಂಡ ಮತ್ತು ಮಕ್ಕಳ ಸಂಖ್ಯೆ ಇವುಗಳ ಬಗ್ಗೆ ಬಹಳ ಸೂಕ್ಷ್ಮವಾಗಿ ಲೇವಡಿ ಮಾಡಿದ್ದೀರಿ. ನಿಮಗೆ ಹನ್ನೆರಡು ಮಕ್ಕಳು ಇರುವುದು ಮತ್ತು ನಿಮ್ಮ ಪತ್ನಿ

ನೊ. ಸಂ. ತಿಮ್ಮೇಗೌಡ, ನಂ. 24, 2ನೇ ಕ್ರಾಸ್, ವಿದ್ಯಾನಗರ, ಶಿವಮೊಗ್ಗ-577203

ಹದಿನಾರನೆಯವರು ಎಂದು ಹೇಳುವುದರ ಮೂಲಕ ನಮ್ಮ ಆರ್. ಎಸ್. ಎಸ್. ಮಿತ್ರರ ರೀತಿಯಲ್ಲಿಯೇ ನೀವು ಮುಸ್ಲಿಂ ಜನಸಂಖ್ಯೆಯು ಹೆಚ್ಚಳದ ಬಗ್ಗೆ ಲೇವಡಿ ಮಾಡಿದ್ದೀರಿ.

ಮಕ್ಕಳನ್ನು ಪಡೆಯುವವರು ಹೆಂಗಸರೇ ಹೊರತು ಗಂಡಸರಲ್ಲ. ಐದು ಜನ ಹೆಂಗಸರು ಒಬ್ಬನನ್ನೇ ಮದುವೆ ಮಾಡಿಕೊಂಡರೂ ಅಥವಾ ಬೇರೆ ಬೇರೆಯಾಗಿ ಐದು ಜನರನ್ನು ಮದುವೆ ಮಾಡಿಕೊಂಡರೂ ಪಡೆಯುವ ಮಕ್ಕಳ ಸಂಖ್ಯೆಯಲ್ಲಿ ವ್ಯತ್ಯಾಸ ವಾಗುವುದಿಲ್ಲ. ಒಬ್ಬ ಮುಸಲ್ಮಾನ ಐದು ಜನ ಹೆಂಡತಿಯರನ್ನು ಮದುವೆ ಮಾಡಿ ಕೊಂಡಿದ್ದರಿಂದ ಜನಸಂಖ್ಯೆ ಜಾಸ್ತಿಯಾಗುತ್ತದೆ ಎಂಬುದು ಕೇವಲ ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟುವುದಕ್ಕೆ ಹೇಳುವ ಮಾತು.

ಕಳೆದ ತಲೆಮಾರುಗಳಲ್ಲಿ ಹಿಂದೂಗಳಲ್ಲೂ ಪ್ರತಿ ಹೆಂಗಸರಿಗೂ ಅರ್ಧ ಡಜನ್ ನಿಂದ ಒಂದು ಡಜನ್‌ವರೆಗೆ ಮಕ್ಕಳು ಇರುತ್ತಿದ್ದುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ.

ಮುಸಲ್ಮಾನರಲ್ಲೂ ಈ ಅರಿವು ಕ್ರಮೇಣ ಬರುತ್ತಿದೆ. ನನಗೆ ತಿಳಿದಿರುವ ಅನೇಕ ಮುಸ್ಲಿಂ ಕುಟುಂಬಗಳು ಸಂತಾನ ನಿಯಂತ್ರಣವನ್ನೂ ಮಾಡಿವೆ.

ಒಬ್ಬ ಗಂಡಸು ಅನೇಕ ಹೆಂಡತಿಯರನ್ನು ಹೊಂದಿದ ಮಾತ್ರಕ್ಕೆ ಮಕ್ಕಳ ಸಂಖ್ಯೆ ಹೆಚ್ಚಾಗುವುದಿಲ್ಲ. ಮಕ್ಕಳ ಸಂಖ್ಯೆ ಹೆಚ್ಚಾಗಲು ಬಡತನ, ಅಜ್ಞಾನ ಕಾರಣ ಎಂಬುದನ್ನು ನಾವು ಗಮನಿಸಬೇಕು. ಈ ವಿಷಯದಲ್ಲಿ ಮುಸಲ್ಮಾನರನ್ನು ಲೇವಡಿ ಮಾಡುವುದನ್ನು ಬಿಡಬೇಕು.

ಶೂದ್ರದ ಅಜೀವ ಚಂದಾ ಹೆಚ್ಚಾಗಿದೆ. ಈ ಹೆಚ್ಚಾದ ಹಣವನ್ನು ಮುಂದಿನ ತಿಂಗಳು ಕಳುಹಿಸಿ ಕೊಡುತ್ತೇನೆ. ಸೆಪ್ಟೆಂಬರ್ ಸಂಚಿಕೆ ನನಗೆ ಬರಲಿಲ್ಲ. ಬಹುಶಃ ಅಂಚೆ ಕಛೇರಿಯ ವ್ಯತ್ಯಾಸ ಇರಬಹುದು. ಅಕ್ಟೋಬರ್ ಸಂಚಿಕೆ ಬಂದಿದೆ.

ಶಿವಮೊಗ್ಗ ಸಾಹಿತ್ಯ ಸಮಾವೇಶದ ನಂತರ ಸಾಹಿತ್ಯವನ್ನು ದಲಿತ ಬಂಡಾಯ ಚಳುವಳಿಗಿಂತ ಭಿನ್ನವಾದ ನೆಲೆಯಲ್ಲಿ ನೋಡುವ ಕ್ರಮ ತೆರೆದುಕೊಂಡಿದೆ. "ಅನುಭವ ಲೋಕಗಳು ಮತ್ತು ಅವುಗಳ ಸಂವೇದನೆಗಳು" ಈ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ನೋಡಬಹುದು. ಸಾಹಿತ್ಯ ಚಳುವಳಿ ಅಲ್ಲ. ಅದು ಬೀದಿಯ ಘೋಷಣೆ, ಪುರಸ್ಕಾರದ ಬೈಠಕ್ ಅಲ್ಲ. ಸಾಹಿತ್ಯವೆಂದರೆ ಸಂವೇದನೆಗಳು ಆಕಾರ ಪಡೆಯುವ ಕ್ರಮ.

ಈ ಹಿನ್ನೆಯಲ್ಲಿ ನೀವು ನಮ್ಮ ಶೂದ್ರದಲ್ಲಿ ಲೇಖನಗಳನ್ನು ಪ್ರಕಟಿಸಿದರೆ ನಮಗೆ ಉಪಯುಕ್ತ.

— ನೊ. ಸಂ. ತಿಮ್ಮೇಗೌಡ

ಪ್ರಿಯ ಶೂದ್ರ,

ನಿನ್ನ ಅಕ್ಟೋಬರ್ ಸಂಚಿಕೆಯಲ್ಲಿ ಶ್ರೀ ಬಾಪೂ ಹೆದ್ದೂರಶೆಟ್ಟಿಯವರು, ರಷ್ಯಾದಲ್ಲಿ ನಡೆಯುತ್ತಿರುವ ಬದಲಾವಣೆಗಳ ಬಗ್ಗೆ ದೂರದರ್ಶನದ ಚರ್ಚೆಯಲ್ಲಿ ಭಾಗವಹಿಸಿದ ನನ್ನ ಒಂದು ಅಂಶದ ಬಗ್ಗೆ ವಿಶ್ಲೇಷಿಸಿ, ಸಮಾನತೆ ಇರುವ ಸಮಾಜ ಮಾತ್ರ ಸಮಾಜವಾದಿ ಸಮಾಜವಾಗಬಲ್ಲದು ಎಂದಿದ್ದಾರೆ. ಇದು ಸಂಪೂರ್ಣವಾಗಿ ಒಪ್ಪತಕ್ಕ ಅಂಶ. "ಎಲ್ಲಿಯವರೆಗೆ ಬಡತನವಿರುತ್ತದೆಯೋ, ಅಲ್ಲಿಯವರೆಗೆ ಸಮಾಜವಾದವಿರುತ್ತದೆ" ಎಂದು ದೂರದರ್ಶನದ ಚರ್ಚೆಯಲ್ಲಿ ನಾನು ಹೇಳಿದ ಅಂಶವನ್ನು ಪ್ರಶ್ನಿಸಿದ ಬಾಪೂ ಅವರಿಗೆ ನನ್ನ ಉತ್ತರವಿಷ್ಟೆ—ಬಡತನ ತೊಲಗುವುದು ಮಾತ್ರ ಸಮಾಜವಾದವಲ್ಲ ಬಡತನ ಹಾಗೂ ಸಮಾಜವಾದಗಳೆರಡೂ ಜೊತೆಗೇ ಇರಲಾರವು ಎಂಬರ್ಥವೂ ಅಲ್ಲ, ಬಡತನವನ್ನು ಸಮಾನವಾಗಿ ಹಂಚಿಕೊಳ್ಳಬಹುದು. "ಎಲ್ಲಿಯವರೆಗೆ ಬಡತನವಿರುತ್ತದೆಯೋ, ಅಲ್ಲಿಯವರೆಗೆ ಸಮಾಜವಾದವಿರುತ್ತದೆ" ಎಂದು ನಾನು ಹೇಳಿರುವುದು—ಬಡತನವಿರುವವರೆಗೂ ಸಮಾಜವಾದಕ್ಕಾಗಿ ಹೋರಾಟವಿದ್ದೇ ಇರುತ್ತದೆ ಎಂಬ ಅರ್ಥದಲ್ಲಿ. ಸಮೃದ್ಧಿ ಇದ್ದಾಗ ಸಮಾಜವಾದಕ್ಕಾಗಿ ಇರುವ ತವಕ ಕ್ಷೀಣವಾಗುತ್ತದೆ. ಆದರೆ ಎಲ್ಲ ಸ್ಥಿತಿ ಮತ್ತು ಅವಸ್ಥೆಯಲ್ಲೂ ಸಮಾಜವಾದವಿರಬೇಕು. ಅದೇ ನಮ್ಮ ಸಿದ್ಧಾಂತ.

—ರಮೇಶ್ ಬಂದಗದ್ದೆ

●

ಗೆಳೆಯ ನೊ. ಸಂ. ತಿಮ್ಮೇಗೌಡ ಅವರು ಅಕ್ಟೋಬರ್ ಸಂಚಿಕೆಯ 'ಕನಸಿಗೊಂದು ಕಣ್ಣು'ವಿನ ಬಗ್ಗೆ ಆಕ್ಷೇಪಣೆ ಎತ್ತಿದ್ದಾರೆ. ಅಲ್ಲಿ ನಾನು ಆರ್. ಎಸ್. ಎಸ್. ಧೋರಣೆಯಿಂದ ಘಾತಿಮಾಳನ್ನು ನೋಡಿದ್ದೇನೆ ಎಂಬುದು ಗೌಡರ ಸಂಶೋಧನೆ. ಯಾಕೆಂದರೆ ಘಾತಿಮಾಳ ಮಕ್ಕಳ ಸಂಖ್ಯೆಯನ್ನು ಮತ್ತು ಆ ಮುಂದುಕಿಯನ್ನು ಲೇವಡಿ ಮಾಡಿದ್ದೇನೆ ಎಂದು. ಆ ರೀತಿ ಮಾಡುವ ಕೆಟ್ಟ ಸ್ಥಿತಿಗೆ ನಾನು ಇಳಿದಿಲ್ಲ. ಗೌಡರಂಥವರು ಇಳಿಸಬಾರದು. ನನ್ನ ಹೆಂಡತಿ, ನನ್ನ ಮಾವನಿಗೆ ಎರಡನೆ ಹೆಂಡತಿಗೆ ಹದಿನಾರನೆಯವಳು. ಇದರಿಂದ ನನ್ನ ಮಾವನ ಬಗ್ಗೆ ಆಗಲಿ ಅತ್ತೆ ಬಗ್ಗೆಯಾಗಲಿ ಎಂದೂ ಗೌರವ ಕಡಿಮೆಯಾಗಲಿಲ್ಲ. ಹಾಗೆಯೇ ನಾನೂ ಬಂದಿರುವುದು ಸಹ ಘಾತಿಮಾ ರೀತಿಯ ಹೆಂಗಸರ ನಡುವಿನ ಕುಟುಂಬದಿಂದ. ನನ್ನನ್ನು ಬೆಳೆಸಿ ತಿಳುವಳಿಕೆ ಕೊಟ್ಟ ನನ್ನ ದೊಡ್ಡಪ್ಪನಿಗೆ ಹತ್ತು ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಇವರಲ್ಲದೆ ಮಧ್ಯೆ ಮೂರು ಜನ ಸತ್ತಿರಬಹುದು. ಅವಿಭಕ್ತ ಕುಟುಂಬದಲ್ಲಿ ನಂಬಿಕೆಯುಳ್ಳ ನನಗೆ ಭಾರತದ ಕುಟುಂಬ ವ್ಯವಸ್ಥೆಯ ಬಗ್ಗೆ ಗೌರವ ರೀತಿಯ ಕುತೂಹಲವಿದೆ. ಹಾಗೆಯೇ

ಪ್ರತಿಯೊಬ್ಬರ ಬದುಕನ್ನು ಅಭಿಮಾನದಿಂದ ನೋಡುತ್ತೇನೆ. ಅಂದು ಬಸ್‌ಸ್ಟಾಪಿನಲ್ಲಿ ಘಾತಿಮಾ ನನ್ನನ್ನು ಆಕರ್ಷಿಸಿದ್ದು; ಆ ವಯಸ್ಸಿನಲ್ಲಿಯೂ ಅದಮ್ಯ ಉತ್ಸಾಹವನ್ನು ಅವಳು ತೋರುತ್ತಿದ್ದ ಬಗೆಗೆ. ಈಗಲೂ ಆ ಬಸ್‌ಸ್ಟಾಪಿನ ಕಡೆ ಹೋದಾಗ ಆ ಮುದುಕಿ ಕಾಣಿಸಬಾರದೆ ಅನ್ನಿಸುತ್ತದೆ. ಇಷ್ಟು ಹೇಳಿದ ಮೇಲೂ ನನ್ನಂತರಂಗದಲ್ಲಿ ಆರ್.ಎಸ್.ಎಸ್. ಅವಿತುಕೊಂಡಿದ್ದರೆ ಅದನ್ನು ಕಿತ್ತಾಕಲು ಪ್ರಯತ್ನಿಸುವೆ. ನಾನು ಎಲ್ಲವನ್ನು ಮೀರಿನಿಂತ ಪ್ರವಾದಿಯಲ್ಲ, ನಾನೊಬ್ಬ ಮನುಷ್ಯ ಅಷ್ಟೆ.

—ಶೂದ್ರ ಶ್ರೀನಿವಾಸ್

ಪ್ರಿಯ ಡಾ॥ ಕರೀಗೌಡ ಬೀಚನಹಳ್ಳಿ,

'ಶೂದ್ರ'ದಲ್ಲಿ ನಿಮ್ಮ ಪ್ರಬಂಧ ಓದಿ ಚಮತ್ಕೃತನಾದೆ. ಹಿಂದೊಮ್ಮೆ ಭೆಟ್ಟಿಯಾಗಿತ್ತಲ್ಲವೆ? ನಿಮ್ಮ ಕತೆಗಳನ್ನು ಓದಿದ್ದೇನೆ. ಅವುಗಳ ಹೆಡಸು ಸಾಂಸ್ಕೃತಿಕ ಚಿತ್ರಣದಿಂದಲೂ, ಬಡತನದಲ್ಲೇ ಮಿಂಚುವ ಧೀರೋದಾತ್ತತೆಗೂ ಮನಸೋತಿದ್ದೇನೆ. ನಿಮ್ಮ ಪ್ರಬಂಧ ಸಕಾಲಿಕವಾಗಿದೆ.

ಬೆಂಗಳೂರು ವಿ. ವಿ. ಪ್ರಸಾರಾಂಗ ಪ್ರಕಟಿಸಿದ ನನ್ನ "HARIJAN CONTRIBUTION TO MEDIEVAL INDIAN THOUGHT" ನೋಡಿದ್ದೀರಾ? ಕ್ಷೇಮವಷ್ಟೆ?

ತಮ್ಮ,
ಶಂಕರ ಮೊಕಾಶಿ ಪುಣೇಕರ
ಧಾರವಾಡ

ಜಸವಂತ ಜಾಧವ್ ಅವರ 'ಚಾರ್ಲಿ ಎಂಬ ಮಗು' ಮತ್ತು ಶೇಷಾದ್ರಿ ಗವಾಯಿ ಕುರಿತ ಶಾಲಿನಿ ಶ್ರೀನಿವಾಸ್ ಅವರ ಲೇಖನ ಮೆಚ್ಚಿಕೊಂಡು ಸಾಕಷ್ಟು ಪತ್ರಗಳು ಬಂದಿವೆ. ಅವುಗಳನ್ನೆಲ್ಲ ಪ್ರಕಟಿಸಲಾಗದ್ದಕ್ಕೆ ವಿಷಾದಿಸುತ್ತೇವೆ. —ಸಂ.

ಪುಸ್ತಕ ವಿಮರ್ಶೆ

ಮುಸ್ಲಿಂ ಮಹಿಳೆ ರಜಿಯಾರ 'ಛಾಯೆ'

ಇತ್ತೀಚೆಗೆ ಬೆಂಗಳೂರಿನ ಪ್ರತಿಭಾ ಯುವ ವೇದಿಕೆಯು ಉತ್ಸಾಹಿ ಗೆಳೆಯರು ಪ್ರಕಟಿಸಿದ ಸವಿತಾ, ಭಗವತಿ, ಸುಧಾಶರ್ಮ ಚವತ್ತಿ ಎಂಬ ಮೂವರು ತರುಣಿಯರ ಕೂಟ ಸಂಕಲನ **ಅತ್ತುಬಿಡೇ ಗೆಳತಿ** ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸ ಬೇಕಾದ ಸಂದರ್ಭಕ್ಕಾಗಿ ನಾನು ಕನ್ನಡದ ಮಹಿಳಾ ಕಾವ್ಯ ಕುರಿತು ಯೋಚಿಸ ಬೇಕಾಯಿತು. ರಜಿಯಾ ಪುಸ್ತಕ ಕುರಿತಂತೆ ಬರೆಯುವಾಗ ಆ ಒಂದೆರಡು ಅಂಶ ಗಳನ್ನು ದಾಖಲಿಸುವ ಪ್ರಯತ್ನ ಮಾಡುತ್ತೇನೆ.

ಅಂತಃಶಕ್ತಿಯುಳ್ಳ ನಿಜ ಲೇಖಕರಿಗೆ ಈ ಇಂಥ ಯಾವುದೇ ವರ್ಗೀಕರಣಗಳ ಬೆನ್ನೆಲುಬು ಬೇಕಿಲ್ಲವೆಂಬುದು ದಿಟವಾದರೂ ಚಾರಿತ್ರಿಕ ರಿಯಾಯಿತಿ ತೋರುವುದೂ ತಪ್ಪೇನಲ್ಲ. ಕನ್ನಡದಲ್ಲಿ ಇಂದು ಬರೆಯುತ್ತಿರುವ ಕವಯಿತ್ರಿಯರಲ್ಲಿ ಕೆಲವರಂತೂ ಯಾವುದೇ ಕಾರುಣ್ಯಾಪೇಕ್ಷೆ ಇಲ್ಲದೇ ತಮ್ಮದೇ ಹೆಜ್ಜೆಗಳನ್ನು ಗಟ್ಟಿಯಗಿ ಊರುತ್ತಿರು ವುದು ಸಂತೋಷದ ಸಂಗತಿ. ಈಗಾಗಲೇ ಒಂದೆರಡು ಸಂಕಲನ ಪ್ರಕಟಿಸಿರುವ ಪ್ರತಿಭಾ ನಂದಕುಮಾರ್, ಭಾಗ್ಯಲಕ್ಷ್ಮಿ, ವೈದೇಹಿ, ಮಾಲತಿ, ಹೇಮಾ, ಕಮಲಾ ಹೆಮ್ಮಿಗೆ, ಉತ್ತನೂರು ರಾಜಮ್ಮ, ಎಂ. ಆರ್. ಕಮಲ, ಬಿ. ಸಿ. ಶೈಲ, ಸವಿತಾ ನಾಗಭೂಷಣ, ಪ್ರೇಮಲೀಲಾ, ಆರತಿ ಮುಂತಾದವರಲ್ಲದೆ ಇನ್ನೂ ಸಂಕಲನ ಹೊರತರದೆ ಅದ್ಭುತ ಪ್ರಯೋಗಗಳಲ್ಲಿ ತಲ್ಲೀನರಾಗಿರುವ ತರುಣಿಯರಾದ ಮಮತಾ ಸಾಗರ್, ಹೆಚ್. ಎಲ್. ಪುಷ್ಪ ಮುಂತಾದವರ ಪ್ರತಿಭಾ ಸಾಮರ್ಥ್ಯ ಕೌತುಕದಿಂದ ನಿರೀಕ್ಷಿಸಲ್ಪಡುತ್ತಿದೆ. ಇವರಾರೂ ಯಾವುದೇ ವಿಮರ್ಶಾತ್ಮಕ ರಿಯಾಯಿತಿ ಅಪೇಕ್ಷಿಸದೆ ಬರೆಯುತ್ತಿದ್ದಾ ರೆಂಬುದೇ ಮೆಚ್ಚುಗೆಯ ಮಾತು.

ಹೆಣ್ಣು ಗಂಡಿನ ಸಂಬಂಧಗಳ ಸಂಕೀರ್ಣ ಲೋಕವನ್ನು ಮತ್ತು ಸ್ತ್ರೀಜನ್ಯ ಅನುಭವಗಳನ್ನು (ಮುಟ್ಟಾಗುವ, ಬಸಿರಾಗುವ, ಮೈನೆರೆಯುವ) ಪ್ರತಿಭಾರಂತಹ

ಎಲ್. ಎನ್. ಮುಕುಂದರಾಜ್, ನಂ. 5, 1ನೇ ತಿರುವು, ನಾಗಪ್ಪ ಬೀದಿ, ಅರಮನೆ ಗುಟ್ಟಹಳ್ಳಿ
ಬೆಂಗಳೂರು-560 003

ಎಷ್ಟೋ ಜನ ಕವಯಿತ್ರಿಯರು ತಮ್ಮ ಕವಿತೆಗಳಲ್ಲಿ ಹದವಾಗಿ ಬಳಸಿದ್ದಾರೆ. ಪ್ರತಿಭಾಗೆ ಗಂಡಸುತನದ ಅಪ್ಯಾಯು ಅಪೇಕ್ಷೆ ಎಷ್ಟು ತೀವ್ರವಾಗಿದೆಯೋ ಅದನ್ನು ತಿರಸ್ಕರಿಸಿ ವ್ಯಗ್ರತೆ ಕಾರುವ ರಮಾಕುಮಾರಿಯಂತಹ ಕವಯಿತ್ರಿಯರೂ ಇದ್ದಾರೆ. ಇಂಥ ಅಸಾಧಾರಣ ಮನಸ್ಥಿತಿ ಅಸಾಧಾರಣ ಕಾವ್ಯರೂಪ ಪಡೆಯಬಲ್ಲವು.

ಈ ಯಾವುದೇ ಲೇಖಕಿಯರಿಗಿಲ್ಲದ ಮತ್ತೊಂದು ಅನೂಹ್ಯ ಲೋಕ ರಜಿಯಾಗಿದೆ. ಈಗಾಗಲೇ ಸಾರಾ, ಭಾನು ಗದ್ಯದಲ್ಲಿ ಅದನ್ನು ವ್ಯಕ್ತಗೊಳಿಸುವ ಪ್ರಯತ್ನ ಮಾಡಿದ್ದಾರೆ. ಹಿಂದಿನಿಂದಲೂ ಹಿಂದೂ ಹೆಣ್ಣು ಅಕ್ಷರವಂಚಿತೆಯಾಗಿದ್ದರೂ ಜಾನಪದ ಗೀತೆ, ಒಡಪು, ಗಾದೆಗಳ ಮೂಲಕ ತನ್ನ ನೋವು ನಲಿವಿನ ಅನುಭವಗಳನ್ನು ಅಭಿವ್ಯಕ್ತಗೊಳಿಸಿದ್ದಾಳೆ. ಬಹುಶಃ ಈ ಸ್ವಾತಂತ್ರ್ಯಾನುಕೂಲತೆ ಇಲ್ಲದ ಮುಸ್ಲಿಂ ಮಹಿಳೆ ಈಗ ಮಾತನಾಡುವುದೇ ಮಹತ್ವ. ಅದಕ್ಕಾಗಿ ರಜಿಯಾ ಮತ್ತು ಆಕೆಯ ಸಂಕಲನ ನಮ್ಮನ್ನು ಮುಟ್ಟುವುದು. ಅಂದ ಮಾತ್ರಕ್ಕೆ ರಜಿಯಾಗೆ ರಿಯಾಯಿತಿ ಬೇಕೆಂದೇನೂ ಅಲ್ಲ. ತನ್ನ ಮೊದಲ ಬರವಣಿಗೆಯಲ್ಲೇ ಆಕೆ ತೋರುವ ಸ್ಥಿತಿಪ್ರಜ್ಞತ, ಸ್ತ್ರೀಪ್ರಜ್ಞೆ, ಅನನ್ಯ ವಿನ್ಯಾಸ, ಗೇಯ-ಲಯಗಳ ಕುಸುರಿತನ ಓದುಗರನ್ನು ತನ್ನೆಡೆಗೆ ಸೆಳೆಯುತ್ತವೆ. "ಮಾಯೆ ನಾನಾದೇನು ನೀನಾದರೆ ನನ್ನೆಲ್ಲ ತಲ್ಲಣಗಳ ಅಲ್ಲಮ" ಎಂಬಿತ್ಯಾದಿ ಸಾಲುಗಳೇ ಆಕೆಯ ಸಾಚಾ ಕವಿತನಕ್ಕೆ ಸಾಕ್ಷಿಯಾಗಬಲ್ಲವು.

ಸಿರಿವಂತಿಕೆಗೆ ಹೆಣ್ಣು ಯಾವಾಗಲೂ ವಾರಸುದಾರಳಲ್ಲ. ಅದರ ಮಾನ ಮರ್ಯಾದೆ ಘನತೆಗಳ ಅಂಕುಶದಲ್ಲಿ ಆಕೆ ಅಧೀರ–ಅಧೀನಳಾಗಿರಲೇಬೇಕು. ಅವರಿವರ ಕಣ್ಣಿರಿಗೆ ಸೀಯಲೇಬೇಕು. ಅದಕ್ಕೆ ಅವಳು ಅಹವಾಲಸ್ನೆತ್ತದೆ ಪ್ರೌಢಳಾಗುತ್ತಾಳೆ, ನಿಗೂಢಳಾಗುತ್ತಾಳೆ, ಸದಾ ಪಿತ, ಪತಿ, ಪುತ್ರರ ನೀತಿ ಸಂಹಿತೆಗಳಲ್ಲಿ ಹಣ್ಣಾಗುತ್ತಾಳೆ. ಕೇವಲ ಸಂತತಿಯ ಬೀಜಗಳಿಗೆ ಮಣ್ಣಾಗುತ್ತಾಳೆ. ರಜಿಯಾರ ಮಾತು ಮತ್ತು ಮನಸ್ಸಿನ ಮುಕ್ತ ದಿಕ್ಕುಗಳನ್ನು ಈ ರೀತಿ ಸ್ಪಷ್ಟವಾಗಿ ಗುರುತಿಸಬಹುದು.

ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದೇ ಘೋಷಿಸಿದ ಹಿಂದೂ ಧರ್ಮ ಕ್ರಮೇಣ ತನ್ನ ಮೌಢ್ಯದ ಚಿಪ್ಪೊಡೆದು ಹೊರಬರುತ್ತಿದೆ. ಆದರೆ ಇಂಥ ಸುಧಾರಣಾ ಸಾಧ್ಯತೆ ಮುಸ್ಲಿಂ ಮಹಿಳೆಗೆ ಇನ್ನೂ ದಕ್ಕಿಲ್ಲದಿರುವುದು ಶೋಚನೀಯ. ಉದಾಹರಣೆಗೆ "ಅಕಸ್ಮಾತ್ ಭಾರತ ಪಾಕಿಸ್ತಾನವಾದರೆ ಏನಾಗಬಹುದೆಂಬ ಪ್ರಶ್ನೆಗೆ ಈ ರೀತಿಯ ಉತ್ತರ ಕೇಳಿದ್ದ ನೆನಪು — ಗಂಡಸರಿಗೆ ಏನೂ ಆಗುವುದಿಲ್ಲ, ಇರುವ ಗಡ್ಡವನ್ನೇ ಒಂದಿಷ್ಟು ಉದ್ದ ಬಿಟ್ಟರಾಯಿತು, ಆಗುವ ತೊಂದರೆಯೆಲ್ಲ ಮಹಿಳೆಗೇ. ದೇಶದ ಅರ್ಧದಷ್ಟು ಜನ ಸದಾ ಕರಿತೆರೆಯ ಕತ್ತಲ ಲೋಕದಲ್ಲಿ ಅಡಗಿ, ಅಕ್ಷರವಂಚಿತೆಯಾಗಿ, ಮಕ್ಕಳನ್ನು ಹೆರುವ ಯಂತ್ರಗಳಾಗಿ, ಸದಾ ಗಂಡಿನ ಗುಲಾಮಳಾಗಿ ಬದುಕಬೇಕಾದ

ಪರಿಸ್ಥಿತಿ – ಹೀಗಾಗದಿರಲಿ." ಇಂಥ ಆಕಸ್ಮಿಕ ಸಂಭವವುಂಟಾದಲ್ಲಿ ಮುಸ್ಲಿಂ ಮಹಿಳೆಯ ಪ್ರತಿಭಟನೆಯು ಸೊಲ್ಲು ರಜಿಯಾರಂಥ ಕವಯಿತ್ರಿಯರ ಬರವಣಿಗೆಯ ಮೂಲಕ ಹೊರಬರಬೇಕಾಗುತ್ತದೆ. ಇಂಥ ಅಗಾಧ ಹೊಣೆಗಾರಿಕೆ, ಸಾಮಾಜಿಕ ಜವಾಬ್ದಾರಿ ಮುಸ್ಲಿಂ ಮಹಿಳೆಯರ ಬರವಣಿಗೆಗೆ ಇರಲೇಬೇಕಾಗುತ್ತದೆ. ರಜಿಯಾ ಇದನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಮೊದಲ ಸಂಕಲನದಲ್ಲೇ ಪ್ರಕಟಪಡಿಸಿರುವುದು ಗಮನಾರ್ಹ. ಇವರೇ ನಮ್ಮವರು, ನಾನು, ಮುಂಡೇಲ, ರೀತಿ, ಎಚ್ಚರ ಇತ್ಯಾದಿ ಕವಿತೆಗಳಲ್ಲಿ ಮೇಲಿನ ಮಾತುಗಳಿಗೆ ದಾಖಲೆ ಇದೆ.

ಮೋಹಕ ಲಯ ಪ್ರಾಸಗಳು ರಜಿಯಾ ಬರವಣಿಗೆಯ ಮತ್ತೊಂದು ವಿಶಿಷ್ಟತೆ. ಅಷ್ಟೇನೂ ಓದಿನ ಹಿನ್ನೆಲೆಯಿರದ, ಛಂದಸ್ಸಿನ ಬಗ್ಗೆ ಆಳವಾದ ಜ್ಞಾನವಿಲ್ಲದ ರಜಿಯಾ "ನಮ್ಮ ಕಾಯ್ವ ನೆಂಟರು, ನಮಗೆ ಆಪ್ತ ಬಂಟರು, ಅನುರಾಗದ ಘನರಾಗ ಶ್ರುತಿ ತಪ್ಪದೆ ಹಾಡಿ ಪ್ರೀತಿಯಲ್ಲೆ ತೊಡಿಸುವರು ನಮ್ಮ ಕೈಗೆ ಬೇಡಿ" ಎಂದು ಪ್ರಾಸಬದ್ಧವಾಗಿ ಹಾಡಬಲ್ಲರು. "ಆಗಸದ ತಾರೆಗಳ ತಿರುಚಿ ತರುವೆ, ಕಡಲ ಮುತ್ತನ್ನು ಬಿಡಿಸಿ ಕೊಡುವೆ" ಎಂಬ ಭಾವ ಬಂಧ, ಬಿಗಿ ಇಡೀ ಕವಿತೆಯನ್ನು ಆವರಿಸಿಕೊಳ್ಳುವುದಾಗಿದ್ದಲ್ಲಿ 'ಪೊಳ್ಳು' ಕವಿತೆ ಇನ್ನಷ್ಟು ಗಟ್ಟಿಯಾಗಿರುತ್ತಿತ್ತು. ಯಥಾ ಈ ಅಂಶವನ್ನೇ ಮುಖ್ಯವಾಗಿ ಗುರುತಿಸಿರುವ ಮುನ್ನುಡಿಕಾರ ಡಾ॥ ಲಕ್ಷ್ಮೀನಾರಾಯಣ ಭಟ್ಟರು ರಾಮಚಂದ್ರಶರ್ಮರನ್ನು ಗೀತ ವಿರೋಧಿ ಎಂದು ಹಳಿಯುತ್ತಾ ಇಡೀ ಸಂಕಲನವನ್ನು ಅಚ್ಚುಕಟ್ಟಾಗಿ ಪರಿಚಯಿಸಿದ್ದಾರೆ.

ಒಟ್ಟಾರೆ ರಜಿಯಾಗೆ ಕವಿತೆ ಬರೆಯುವ ತಾಕತ್ ಖಂಡಿತಾ ಇದೆ. ತಮ್ಮ ಸ್ತ್ರೀ ಸಹಜ ಸಂಕೋಚ ಮೌನಗಳನ್ನು ಶಾಬ್ದಿಕ ರೂಪಕ್ಕೆ ತರುವುದರಲ್ಲಿ ಆಕೆ ಕನ್ನಡದಲ್ಲೊಬ್ಬ ಅರ್ಥಪೂರ್ಣ ಮುಸ್ಲಿಂ ಕವಯಿತ್ರಿಯಾಗಿ ದಾಖಲಾಗುತ್ತಾರೆ, ಉಳಿಯುತ್ತಾರೆ.

—ಎಲ್. ಎನ್. ಮುಕುಂದರಾಜ್

●

ಶೂದ್ರಕ್ಕೆ ಶುಭಾಶಯಗಳು

ಅಕ್ಷರ ಪ್ರಕಾಶನ

ಹೆಗ್ಗೋಡು, ಸಾಗರ, ಶಿವಮೊಗ್ಗ ಜಿಲ್ಲೆ

ಮ್ಯಾಗ್‌ಸೆಸೆ ಪ್ರಶಸ್ತಿಗೆ ಪ್ರತಿಸ್ಪಂದನ

ನನ್ನದು ನದಿಗಳ ದೇಶ. ನಿಮ್ಮದು ಸಮುದ್ರದ ದೇಶ. ನದಿಗಳ ದೇಶದ ನನ್ನ ಜನತೆಯಿಂದ ಸಮುದ್ರದ ದೇಶದ ನಿಮ್ಮ ಜನತೆಗೆ ಪ್ರೀತಿ ಶುಭಾಶಯಗಳನ್ನು ಹೊತ್ತು ತಂದಿದ್ದೇನೆ. ಎತ್ತಿಕೊಳ್ಳಿ.

ನಿಮ್ಮದು ಔದಾರ್ಯದ ದೇಶ. ಏಸ್ಯಾ ಖಂಡದ ರಾಷ್ಟ್ರಗಳ ನಡುವೆ ಸ್ನೇಹದ ಬಲೆ ಹೆಣೆಯಲಿಕ್ಕಾಗಿ ಮತ್ತು ನಮ್ಮ ಅನೇಕ ರಾಷ್ಟ್ರಗಳ ಮೂಲೆಮೂಲೆಗಳಲ್ಲಿ ಈ ಖಂಡದ ಜೀವಶಕ್ತಿಯು ಹೊಸ ಕುಡಿಯೊಡೆಯುತ್ತಿರುವುದನ್ನು ಗುರುತಿಸಿ ಹೊಗಳಲಿಕ್ಕಾಗಿ ಪ್ರಶಸ್ತಿಯನ್ನು ಸ್ಥಾಪಿಸಿದ್ದೀರಿ. ಈ ಪ್ರಶಸ್ತಿಗೆ, ಏಸ್ಯಾ ಖಂಡಕ್ಕೇ ಗಣ್ಯನಾದ ನಿಮ್ಮ ರಾಷ್ಟ್ರನಾಯಕ ದಿ. ರಮೋನ್ ಮ್ಯಾಗ್‌ಸೆಸೆಯ ಹೆಸರಿಟ್ಟು ಹೆಚ್ಚಿನ ಗೌರವ ತುಂಬಿದ್ದೀರಿ. ನನ್ನ ರಾಷ್ಟ್ರದ ಹಲವು ಗಣ್ಯರಿಗೆ ಈಗಾಗಲೇ ಈ ಪ್ರಶಸ್ತಿ ನೀಡಿದ್ದೀರಿ. ಈಗ, ಈ ಉನ್ನತ ಪ್ರಶಸ್ತಿಯನ್ನು ನನ್ನ ಹೆಸರಿಗೆ ಕೊಡುತ್ತಿರುವಾಗ, ನಿಮ್ಮ ಜನತೆಯ ಪ್ರೀತಿ ಔದಾರ್ಯಗಳನ್ನು ಸ್ಮರಿಸುತ್ತ, ಹಿಂದೆ ಇದನ್ನು ಸ್ವೀಕರಿಸಿದ ನನ್ನ ಪುರೋಗಾಮಿಗಳನ್ನು ನೆನೆಯುತ್ತ ಸಂತೋಷದಿಂದ ಸ್ವೀಕರಿಸುತ್ತೇನೆ; ಕೃತಜ್ಞತೆಯಿಂದ ನಮ್ರನಾಗಿ ಸ್ವೀಕರಿಸುತ್ತೇನೆ.

ಪ್ರಜಾಪ್ರಭುತ್ವ ಜೀವನಪದ್ಧತಿಯ ಚೌಕಟ್ಟಿನಲ್ಲಿ ಪ್ರಶಸ್ತಿಗಳನ್ನು ಕೊಡುವುದು ಅಥವಾ ಕೊಳ್ಳುವುದು ಸೂಕ್ತವೇ ಎನ್ನುವ ಬಗ್ಗೆ ನನಗೆ ಸಂದೇಹಗಳಿವೆ. ಹಾಗಿರುವಾಗಲೂ ಈ ಪ್ರಶಸ್ತಿಯು ನನಗೆ ಮಹತ್ತರವಾದ ಸಂತೋಷವನ್ನು ತಂದುಕೊಟ್ಟಿದೆ. ಅದಕ್ಕೆ ಕಾರಣಗಳನ್ನು ಹೇಳುತ್ತೇನೆ.

ಪ್ರಶಸ್ತಿಯು ನನ್ನ ಹೆಸರಿಗೆ ಸಂದಿದೆಯಾದರೂ ಇದು ನನಗೆ ವೈಯಕ್ತಿಕವಾಗಿ ಸಂದಿದ್ದಲ್ಲ ಎನ್ನುವುದು ನಿಶ್ಚಿತ. ಒಂದು ವೇಳೆ, ಇದಕ್ಕಿಂತ ಸಣ್ಣ ಪ್ರಶಸ್ತಿಯಾಗಿದ್ದರೆ ಇದು ನನಗೇ ಎಂದು ನಾನು ಭ್ರಮೆಗೊಳ್ಳುವ ಸಾಧ್ಯತೆ ಇರಬಹುದಿತ್ತು. ಆದರೆ, ಇದು ಬಹು ದೊಡ್ಡ ಪ್ರಶಸ್ತಿ; ಉಳಿದವರಿರಲಿ, ಸ್ವತಃ ನಾನೇ ನನ್ನ ಕಟ್ಟೇಕಾಂತದಲ್ಲಿ ಕೂತು ಯೋಚಿಸುವಾಗಲೂ ಇದು ನನಗೆ ವೈಯಕ್ತಿಕವಾಗಿ ಸಿಕ್ಕಿದ್ದು ಎಂದು ಭ್ರಮೆಗೊಳ್ಳಲು ಸಾಧ್ಯವಾಗುವುದಿಲ್ಲ — ಅಷ್ಟು ದೊಡ್ಡದು. ನನ್ನ ಹೆಸರಿನ ಸುತ್ತ ನೀನಾಸಮ್, ಅಕ್ಷರ ಪ್ರಕಾಶನ ಸಂಸ್ಥೆಗಳು, ಹೆಗ್ಗೋಡು ಕರ್ನಾಟಕ ಪ್ರದೇಶಗಳು

ಕೆ. ವಿ. ಸುಬ್ಬಣ್ಣನವರು ಮ್ಯಾಗ್‌ಸೆಸೆ ಪ್ರಶಸ್ತಿ ಸ್ವೀಕಾರದ ಸಮಯದಲ್ಲಿ ಮುಂಡಿಸಿದ ಲೇಖನ. 'ಶೂದ್ರ'ದ ಓದುಗರಿಗೆ ಅರ್ಥಪೂರ್ಣ ಅನ್ನಿಸಿದ್ದಕ್ಕೆ ಇಲ್ಲಿ ಪ್ರಕಟಿಸುತ್ತಿದ್ದೇವೆ. — ಸಂ.

ಕೆ. ವಿ. ಸುಬ್ಬಣ್ಣ, ಹೆಗ್ಗೋಡು, ಸಾಗರ, ಶಿವಮೊಗ್ಗ ಜಿಲ್ಲೆ

ಸುತ್ತಿಕೊಂಡಿವೆ. ಪ್ರಶಸ್ತಿ ಸುಂದರವಾಗುವುದು ನಿಜವಾಗಿ ಅವಕ್ಕೆ. ಮತ್ತು – ಕನ್ನಡದಲ್ಲೇ ನಾಲ್ಕು ದಶಕಕ್ಕೆ ಮೊದಲು ನಮ್ಮ ಮಹಾವ್ಯಕ್ತಿ ಶಿವರಾಮ ಕಾರಂತರು ಒಂದು ಚಿಕ್ಕ ಪಟ್ಟಣದಲ್ಲಿ ಇಂಥದೇ ಸಾಂಸ್ಕೃತಿಕ ಆಂದೋಲನ ನಡೆಸಿದ್ದರು. ಅದಕ್ಕೆ ಮೊದಲು ನಮ್ಮ ಇನ್ನೊಬ್ಬ ಮಹಾವ್ಯಕ್ತಿ ಕುವೆಂಪು ಸಾಹಿತ್ಯಕವಾಗಿ ಇಂಥದೊಂದು ಕನಸು ಕಟ್ಟಿ ಕೊಟ್ಟಿದ್ದರು. ಪ್ರಶಸ್ತಿಯ ಪಾಲು ಹಾಗೆ ಅನೇಕರಿಗೆ ಸಲ್ಲುತ್ತದೆ. ನನ್ನ ಅಹಂಕಾರ ವನ್ನು ಪೊಳ್ಳಾಗಿ ಊದಿ ಉಬ್ಬಿಸದೆ, ನನಗೆ ಸಂತೋಷ ಕೊಡುವ ಪ್ರಶಸ್ತಿ ಇದು.

ಇಂಡಿಯಾ ಒಂದು ವಿಶಾಲವಾದ ರಾಷ್ಟ್ರ. 25-30 ಪುಟ್ಟದೊಡ್ಡ ರಾಜ್ಯಗಳು ಅದರಲ್ಲಿ ಒಗ್ಗೂಡಿಕೊಂಡಿವೆ. ತೀರ ದೊಡ್ಡದೂ ಅಲ್ಲದ, ಅಷ್ಟು ಚಿಕ್ಕದೂ ಅಲ್ಲದ ಮಧ್ಯಮಗಾತ್ರದ ರಾಜ್ಯ ನನ್ನ ಕರ್ನಾಟಕ. ಕರ್ನಾಟಕದ ವಿಸ್ತೀರ್ಣ ಜನಸಂಖ್ಯೆಗಳು ಸುಮಾರಾಗಿ ನಿಮ್ಮ ರಾಷ್ಟ್ರದ ಮುಕ್ಕಾಲರಷ್ಟು. ಇಂಡಿಯಾದಲ್ಲಿ ಸುಮಾರು ಒಂದು-ಒಂದೂವರೆ-ಎರಡು ಸಾವಿರಗಳಷ್ಟು ವರ್ಷ ಹಿಂದಿನಿಂದ ಬೆಳೆದುಕೊಂಡು ಬಂದ ಹದಿನೈದು-ಇಪ್ಪತ್ತು ಪ್ರಧಾನ ಪ್ರಾದೇಶಿಕ ಭಾಷೆಗಳಿವೆ. ಅವು ಸಾಹಿತ್ಯಸಮೃದ್ಧ ವಾಗಿವೆ. ನಮ್ಮ ಕರ್ನಾಟಕದ ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸ ವಿದೆ. ಶ್ರೀಮಂತ ಸಾಹಿತ್ಯ ಪರಂಪರೆಯಿಂದೆ. ಮತ್ತು ನಮ್ಮ ಆಧುನಿಕ ಸಾಹಿತ್ಯವು ಇವತ್ತಿನ ವಿಶ್ವಸಾಹಿತ್ಯದಲ್ಲಿ ಗಣನೀಯವೆನ್ನಿಸಬಲ್ಲ ಸತ್ತ್ವವನ್ನು ಪಡೆದುಕೊಂಡಿದೆ.

ಕರ್ನಾಟಕದ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳಿವೆ. ಅಲ್ಲಿ ಮಳೆ ಸಮೃದ್ಧವಾಗಿ ಸುರಿಯುತ್ತದೆ; ನಿತ್ಯಹಸಿರಾಗಿರುವ ಕಾಡುಗಳು ಬೆಟ್ಟಗಳು ಹಬ್ಬಿಕೊಂಡು ನಿಂತಿವೆ. ಘಟ್ಟದ ಏರುವೆಯಲ್ಲಿ, ನಗರಕೇಂದ್ರಗಳಿಂದ ಬಹುದೂರವಾಗಿ, ಕಾಡಿನ ಮಡಿಲಲ್ಲಿರುವ ಒಂದು ಚಿಕ್ಕಹಳ್ಳಿ. ಹೆಗ್ಗೋಡು. ಈ ಚಿಕ್ಕಹಳ್ಳಿಯ ಜನಸಂಖ್ಯೆ ಐದುನೂರು ಕೂಡ ಇಲ್ಲ. ಇದರ ಸುತ್ತ ಇರುವ ಇದಕ್ಕಿಂತಲೂ ಚಿಕ್ಕದಾದ ಹತ್ತಾರು ಹಳ್ಳಿಗಳು ಕೂಡಿ ಒಂದು ಗ್ರಾಮೀಣ ಜನಪದ ಎನ್ನಬಹುದು. ಈ ಗ್ರಾಮೀಣ ಜನಪದ, ಹೊಸ ಇಂಡಿಯಾದ ಕನಸು ಕಾಣುತ್ತ ಅದನ್ನು ತನ್ನ ನೆಲದಲ್ಲೆ ಮೂರ್ತಗೊಳಿಸಿಕೊಳ್ಳಲು ಹೆಣಗಾಡಿಕೊಳ್ಳುತ್ತಿರುವುದಕ್ಕೆ ನೀನಾಸಮ್ ರಂಗಸಂಸ್ಥೆ ಒಂದು ಸಾಕ್ಷಿ ಎನ್ನಬಹುದು.

ಶತಮಾನಗಳ ಕಾಲ ವಸಾಹತು ದೇಶವಾಗಿ ದಾಸ್ಯದಲ್ಲಿದ್ದ ನಮ್ಮ ಇಂಡಿಯಾ ಸುಮಾರು ಒಂದು ಶತಮಾನದ ಜನ ಹೋರಾಟದ ಅನಂತರ, 1947ರಲ್ಲಿ – ನಿಮಗೆ ಸ್ವಾತಂತ್ರ್ಯ ದೊರಕಿದ ಮರುವರ್ಷದಲ್ಲಿ – ಸ್ವಾತಂತ್ರ್ಯ ಪಡೆದುಕೊಂಡಿತು. ಇಂಗ್ಲೆಂಡ್ ಶತಮಾನಗಳ ಕಾಲ ನಮ್ಮ ದೇಶವನ್ನು ಭೌತಿಕವಾಗಿ ಆಕ್ರಮಿಸಿಕೊಂಡದ್ದು ಮಾತ್ರವಲ್ಲ, ಈ ಅವಧಿಯ ಉದ್ದಕ್ಕೂ ಮತ್ತು ಅದರಿಂದ ಮುಂದೆ ಈಗ ಇವತ್ತಿನ ತನಕವೂ ಉತ್ತರ ಗೋಲದ ವಿಜ್ಞಾನ ನಾಗರಿಕತೆ ನಮ್ಮ ಮೇಲೆ ಆಕ್ರಮಣ ನಡೆಸುತ್ತಲೇ ಇದೆ.

ಅಥವಾ — ಇದನ್ನು ಭೌತಿಕ ಆಕ್ರಮಣದ ಥರದಲ್ಲಿ 'ಆಕ್ರಮಣ' ಎಂದು ನಿಶ್ಚಿತವಾಗಿ ಹೇಳುವುದೂ ಕಷ್ಟವೇ.

ಜಾಪಾನಿನ ಅಕಿರ ಕುರಸೊವ ನಿರ್ಮಿಸಿದ ರಶೊಮೋನ್ ಚಿತ್ರ ನೋಡಿದ್ದೀರಲ್ಲ? ಒಬ್ಬ ಡಕಾಯಿತ ಮತ್ತು ಒಂದು ಸಮುರಾಯ್ ದಂಪತಿಗಳ ಅದರ ಕಥೆಯಲ್ಲಿ ಒಂದು ಸಂಗತಿ ಕಡೆಗೂ ಸ್ಪಷ್ಟವಾಗದೆ ಉಳಿದುಹೋಗುತ್ತದೆ. ಡಕಾಯಿತನು ಸಮುರಾಯ್‌ನ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದನೋ ಅಥವಾ ಅವಳೇ ಡಕಾಯಿತನಲ್ಲಿ ಅನುರಕ್ತಳಾಗಿ ಹೋದಳೋ ಎನ್ನುವ ಸಂಗತಿ ಮತ್ತು ಸಮುರಾಯ್‌ನನ್ನು ಡಕಾಯಿತನು ಕೊಲೆ ಮಾಡಿದನೋ ಅಥವಾ ಸಮುರಾಯ್ ತಾನೇ ಆತ್ಮಹತ್ಯೆ ಮಾಡಿಕೊಂಡನೋ ಎನ್ನುವ ಸಂಗತಿ. ಅದೇ ಥರ ನಮ್ಮ ಮತ್ತು ವಿಜ್ಞಾನನಾಗರಿಕತೆಯ ನಡುವಣ ಸಂಬಂಧ ಸಂಕೀರ್ಣದ್ದಾಗಿದೆ. ಅಸ್ಪಷ್ಟವಾಗಿದೆ. ಅದು ಆಕ್ರಮಣವೂ ಹೌದು, ಆಕರ್ಷಣೆಯೂ ಹೌದು, ಸಂಘರ್ಷವೂ ಹೌದು, ಸಮ್ಮೇಲವೂ ಹೌದು, ಮಂಥನವೂ ಹೌದು, ಮೈಥುನವೂ ಹೌದು.

ಇಂಡಿಯಾದಲ್ಲಿ ನಡೆದದ್ದನ್ನು ಹೇಳಿದೆ. ಆದರೆ, ಈ ಸಂಘರ್ಷ ಮಂಥನ ಪ್ರಕ್ರಿಯೆ ಇಲ್ಲಿಗೇ ಸೀಮಿತವಾದದ್ದಲ್ಲ. ಇದು ನಿಜವಾಗಿ ಜಾಗತಿಕ ಪ್ರಕ್ರಿಯೆ. ತೃತೀಯ ಜಗತ್ತು ಎಂದು ನಾವು ಸಾಮಾನ್ಯವಾಗಿ ಹೆಸರಿಸುವ ಪ್ರಪಂಚದ ದೊಡ್ಡ ಭಾಗದ ಅನೇಕಾನೇಕ ಹಿಂದುಳಿದ ರಾಷ್ಟ್ರಗಳು ಈ ಸಂಘರ್ಷ ಪ್ರಕ್ರಿಯೆಯಲ್ಲಿ ಭಾಗಿಗಳಾಗಿವೆ; ತಮ್ಮತಮ್ಮ ಪರಂಪರೆಗನುಗುಣವಾಗಿ ತಮ್ಮತಮ್ಮ ರೀತಿಯಲ್ಲಿ ಇದಕ್ಕೆ ಪ್ರತಿಕ್ರಿಯೆ ಗೊಟ್ಟಿವೆ.

ವಿಜ್ಞಾನ ನಾಗರಿಕತೆಗೆ ಪ್ರತಿಯಾಗಿ ತೃತೀಯ ಜಗತ್ತಿನ ರಾಷ್ಟ್ರಗಳು ವಿವಿಧ ರೀತಿಗಳಲ್ಲಿ ಪ್ರತಿಭಟನೆಯನ್ನು ಒಡ್ಡಿದರೂ ಒಟ್ಟಿನಲ್ಲಿ, ಈ ಕೆಲವು ಶತಮಾನಗಳ ಕಾಲ ವಿಜ್ಞಾನ ನಾಗರಿಕತೆಯೇ ಮನುಷ್ಯ ಕುಲದ ಇತಿಹಾಸವನ್ನು ಮುನ್ನಡೆಸುವ ನಾಯಕ ಶಕ್ತಿಯಾಯಿತು ಎನ್ನುವುದು ಸುಳ್ಳಲ್ಲ. ವಿಜ್ಞಾನ, ಯಂತ್ರಸಾಧನೆಗಳು ಮುಂತಾದವುಗಳಲ್ಲದೆ ಸಮಾನತೆ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮುಂತಾದ ಹೊಸ ಮೌಲ್ಯಗಳನ್ನು ಕೂಡ ಅದು ಸೃಷ್ಟಿಸಿಕೊಟ್ಟಿತು. ತೀರ ಪ್ರಾಚೀನ ಕಾಲದಲ್ಲಿ ಕೂಡ ಸ್ವಾತಂತ್ರ್ಯ ಸಮಾನತೆಗಳಂಥ ಮೌಲ್ಯಗಳು ಮುಖ್ಯವೆಂದು ಪರಿಗಣಿತವಾಗಿದ್ದವು ನಿಜ. ಆದರೆ ಆ ಮೌಲ್ಯಗಳನ್ನು ಮಾನವಜೀವನದ ಕೇಂದ್ರವನ್ನಾಗಿ ಮಾಡಿದ್ದು ಮತ್ತು ಅದನ್ನು ವಾಸ್ತವದಲ್ಲಿ ಕಾರ್ಯಸಾಧ್ಯಗೊಳಿಸಿದ್ದು ವಿಜ್ಞಾನ ನಾಗರಿಕತೆಯೇ.

ನಮ್ಮ ದೇಶದ್ದೇ ಉದಾಹರಣೆ, ದೀರ್ಘ ಸಾಂಸ್ಕೃತಿಕ ಇತಿಹಾಸದ ಮೂಲಕ ನಾವು ಪರಂಪರೆಯ ಸಮೃದ್ಧಿಯನ್ನು ಪಡೆದುಕೊಂಡಿದ್ದೇವು. ಆದರೆ ಆದೇ ಪರಂಪರೆಯು

ನಮ್ಮಲ್ಲಿ ಜಾತಿಭಿನ್ನತೆ ವೈಷಮ್ಯ ಪಕ್ಷಪಾತಗಳ ಹೀನ ಪಾಪಪಾತಕಗಳನ್ನೂ ಸೃಷ್ಟಿಸಿ ನಮ್ಮ ಸಂಸ್ಕೃತಿಯನ್ನು ಅಮಾನವೀಯವಾಗಿಸಿತ್ತು. ನಮ್ಮದೇ ಸಂಸ್ಕೃತಿಯ ಈ ಅಮಾನವೀಯಂತೆಯನ್ನು ಕಣ್ಣುಬಿಚ್ಚಿಸಿ ನಮಗೆ ಕಾಣಿಸಿಕೊಟ್ಟದ್ದು ವಿಜ್ಞಾನ ನಾಗರಿಕತೆಯೇ.

ಅಂಥ ವಿಜ್ಞಾನ ನಾಗರಿಕತೆಗೆ ಇದೀಗ ದುರಂತ ಪ್ರಾಪ್ತವಾಗಿರುವಂತೆ ಕಾಣುತ್ತದೆ. ಇದಕ್ಕೆ ಕಾರಣ ಪ್ರಾಯಶಃ, ಅದು ತನ್ನಲ್ಲೆ ಬೆಳೆಯಗೊಟ್ಟ ವಿಕೃತಿಗಳು. ಜಗತ್ತಿನ ದೊಡ್ಡ ಭಾಗವನ್ನು ಹೊರಗಿಟ್ಟು ಪ್ರತ್ಯೇಕವಾಗಿ ತಾನೇ ತಾನಾಗಿ ರೂಪುಗೊಂಡದ್ದು ವಿಜ್ಞಾನ ನಾಗರಿಕತೆಯ ವಿಕೃತಿಗಳಿಗೆ ಬಹುಶಃ ಕಾರಣವಿದ್ದಿರಬಹುದು. ಆ ನಾಗರಿಕತೆಯನ್ನು ರೂಪಿಸಿದ ಜನಪದ, ಲೋಕವೆಂದರೆ ತಾನೇ ಎಂದು ಆಗ ನಂಬಿಕೊಂಡಿತ್ತು. ಉಳಿದೆಲ್ಲ ಭೂಭಾಗವು ತನ್ನ ಸಾಧನೆಗೆ ಮೀಸಲಾಗಿರುವ ಸಂಪನ್ಮೂಲ ಮಾತ್ರ ಎಂದು ನಂಬಿಕೊಂಡಿತ್ತು.

ಸ್ವಾತಂತ್ರ್ಯ ಸಮಾನತೆಗಳು ಒಂದು ದ್ವಂದ್ವ. ಪರಸ್ಪರ ವಿರುದ್ಧವಾಗಿ ಕಾಣಿಸಿಯೂ ಮೂಲತಃ ಒಂದೇ ಆಗಿರುವಂಥವು. ಆ ದ್ವಂದ್ವವನ್ನು ಏಕಕಾಲದಲ್ಲಿ ಏಕತ್ರ ಗ್ರಹಿಸಿ ತೋಲನವನ್ನು, ಸಮತ್ವವನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಸಮತ್ವ ಕೊಂಚ ತಪ್ಪಿದರೂ ಸಾಕು. ಎರಡೂ ಮೌಲ್ಯಗಳು ನಾಶವಾಗಿ ಹೋಗುತ್ತವೆ. ಸ್ವಾತಂತ್ರ್ಯ ಸಮಾನತೆಗಳನ್ನು ಕೊರಳೆತ್ತಿ ಉದ್ಘೋಷಿಸಿದ ವಿಜ್ಞಾನ ನಾಗರಿಕತೆಯು ಕ್ರಮೇಣ ಅವೆರಡನ್ನೂ ಕಳೆದುಕೊಳ್ಳುತ್ತ ನಡೆದಿರುವುದನ್ನು ಕಾಣುತ್ತೇವೆ.

ವಿಜ್ಞಾನ ನಾಗರಿಕತೆಯ ಒಂದು ಬಣ (ಬಂಡವಾಳ ಆಧಾರಿತ – ಸ್ವತಂತ್ರ) ಸ್ವಾತಂತ್ರ್ಯಕ್ಕೆ ಒತ್ತುಕೊಟ್ಟಿತು. ಇನ್ನೊಂದು ಬಣ (ಶ್ರಮಗಾರ ಕೇಂದ್ರಿತ – ಸಮಾನತೆ) ಸಮಾನತೆಗೆ ಒತ್ತುಕೊಟ್ಟಿತು. ಆದರೆ ಈಗ ನೋಡುವಾಗ, ಎರಡೂ ಬಣದ ಜನತೆ ಸ್ವಾತಂತ್ರ್ಯ – ಸಮಾನತೆಗಳೆರಡನ್ನೂ ನಾಶಪಡಿಸಿಕೊಂಡಿರುವುದನ್ನು ಕಾಣುತ್ತೇವಲ್ಲವೆ? ಸ್ವತಂತ್ರ ಬಣದಲ್ಲಿ ಅತಿಕೇಂದ್ರಿತ ಬಂಡವಾಳಶಾಹಿ ಉದ್ಯಮ ಸಂಘಟನೆಯು ಜನರ ಉಡುಗೆತೊಡುಗೆ ಅನ್ನಾಹಾರಗಳಿಂದ ಹಿಡಿದು ಸಮಸ್ತವನ್ನೂ ಕ್ಲುಪ್ತವಾಗಿ ನಿಯಂತ್ರಿಸುತ್ತ ಅವರನ್ನು ಅತಿದಾಸ್ಯಕ್ಕೆ ತಳ್ಳಿದೆ. ಸಮಾನತೆಯ ಬಣದಲ್ಲಿ ಅತಿಕೇಂದ್ರಿತ ಅಧಿಕಾರಶಾಹಿ ಆಡಳಿತ ಸಂಘಟನೆಯು ಜನರನ್ನು ಅತಿ ಅಸಮಾನತೆಗೆ ತಳ್ಳಿದೆ. ಎರಡೂ ಬಣಗಳೂ ಪ್ರಜಾಪ್ರಭುತ್ವ ಜನಪ್ರಭುತ್ವಗಳ ಮಾತು ಜಪಿಸುತ್ತ ತದ್ವಿರುದ್ಧವಾದ ದಾರಿಯಲ್ಲಿ ಧಾವಿಸುತ್ತಿವೆ.

ನಮ್ಮ ಬಹುದೊಡ್ಡ ಚಿಂತಕ, ರಾಜಕೀಯ ಕ್ರಿಯಾವಂತ ರಾಮಮನೋಹರ ಲೋಹಿಯಾ ಹೇಳುತ್ತಿದ್ದರು, ನಮಗೆ ತೃತೀಯ ಜಗತ್ತಿಗೆ ವಿಜ್ಞಾನ ನಾಗರಿಕತೆಯು

ಎರಡೂ ಬಣಗಳೂ ನಿರುಪಯುಕ್ತ, ಅಯೋಗ್ಯ ಎಂದು. ತಮ್ಮ ಆಡಳಿತವ್ಯವಸ್ಥೆಯಲ್ಲಿ ಇವು ಪರಸ್ಪರ ತೀರ ಭಿನ್ನವೆನ್ನುವಂತೆ ಕಂಡರೂ ಅಂತಿಮವಾಗಿ ಅವುಗಳ ಲಕ್ಷ್ಯ ಒಂದೇ—ಅಭಿವೃದ್ಧಿ. ಅವರ ಕಲ್ಪನೆಯಲ್ಲಿ ಅಭಿವೃದ್ಧಿಯೆಂದರೆ ಮನುಷ್ಯನ ಸುಖ ಸೌಕರ್ಯ ಭೋಗಗಳನ್ನು ಗುಣಿತದಲ್ಲಿ ವೃದ್ಧಿಗೊಳಿಸಿಕೊಳ್ಳುತ್ತ ರೇಖಾಗತಿಯಲ್ಲಿ ಮುಂದೆ ಹೋಗುತ್ತಲೇ ಇರುವುದು. ಆಯ್ತು. ಈ ಗುಣಾಕಾರ ನಾಗರಿಕತೆ ಮನುಷ್ಯನನ್ನು ಯಾವ ಸಿದ್ಧಿಗೆ ಒಯ್ಯುತ್ತದೆ? ಅತಿಶಯ ಸಿದ್ಧಿಯೇ ಮನುಷ್ಯನಿಗೆ ಸಾಧ್ಯವಿರುವ ಮತ್ತು ಅಪೇಕ್ಷಣೀಯವಾದ ಅಂತಿಮ ಸಿದ್ಧಿಯೆ? ಈ ವೃದ್ಧಿಗೂ ಒಂದು ಕೊನೆಯಿರ ಬೇಕಲ್ಲ? ಮನುಷ್ಯನ ಆಸೆ ಆಕಾಂಕ್ಷೆಗಳಿಗೆ ಮಿತಿಯಿಲ್ಲ ಆದರೆ, ಜಗತ್ತಿನ ಸಂಪನ್ಮೂಲ ಗಳಿಗೆ ಮಿತಿಯಿದೆಯಲ್ಲವೆ? ಮತ್ತು ಈ ಥರದ ಪ್ರಗತಿಗೆ ಪ್ರಚೋದನೆ ಸಿಕ್ಕುವುದು ಹಾಗೂ ಇದನ್ನು ಆಳೆಯಲು ಸಾಧ್ಯವಾಗುವುದು ಪರಸ್ಪರ ಸ್ಪರ್ಧೆಯ ಮೂಲಕವೇ. ಸ್ಪರ್ಧೆಯು ಅತ್ಯನಿವಾರ್ಯವಾಗಿ ಅಸೂಯೆ ದ್ವೇಷ ಹಿಂಸೆಗಳನ್ನು ಹುಟ್ಟಿಸು ತ್ತದೆ.

ದಾರಿತಪ್ಪಿದ ವಿಜ್ಞಾನ ನಾಗರಿಕತೆ—ಅದರ ಎರಡೂ ಬಣಗಳೂ—ಅಸೂಯೆ ದ್ವೇಷ ಹಿಂಸೆಗಳನ್ನು ಬೆಳೆಸಿ ಜಗತ್ತನ್ನು ಸದಾ ಯುದ್ಧಸನ್ನದ್ಧವನ್ನಾಗಿ ಮಾಡಿಟ್ಟಿದೆ. ಮನುಷ್ಯನ ದುರಾಶೆಗಳನ್ನು ಪೋಷಿಸಿ ಆತನನ್ನು ಯಂತ್ರನಾಗರಿಕತೆಯ ಅಥವಾ ಸರಕು ಸಂಸ್ಕೃತಿಯ ದಾಸ್ಯದಲ್ಲಿ ಭದ್ರವಾಗಿ ಬಂಧಿಸಿಬಿಟ್ಟಿದೆ. ಅಧಿಕಾರ ಸಂಪತ್ತುಗಳ ಕೇಂದ್ರೀಕರಣ, ಸಂಯಮವಿಲ್ಲದ ಅತಿಯಾಸೆ ಇವು ಪ್ರಾಯಃ, ವಿಜ್ಞಾನನಾಗರಿಕತೆಯ ಸ್ವಯಮುತ್ಪಾದಿತ ನಾಶಬೀಜಗಳಾಗಿವೆ.

ಈ ಹಂತದಲ್ಲಿ ತೃತೀಯ ಜಗತ್ತಿನ ಚಿಂತನೆ ಪ್ರಯೋಗಗಳು ಮುಖ್ಯವಾಗ ಬಹುದು. ಉದಾಹರಣೆಗೆ—ಎಂಗೆಲ್ಸ್‌ನಂತಹ ಮಹಾಚಿಂತಕ ಕೂಡ ಮನುಷ್ಯನ ಪ್ರಗತಿಗೆ ಕೆಲವೊಮ್ಮೆ ಆತನ ದುರಾಕಾಂಕ್ಷೆಗಳೇ ಕಾರಣವಾಗಿರಬಹುದು ಎಂದು ಅನುಮಾನಿಸುತ್ತಾನೆ. ಆದರೆ, ನಮಗೆ ಇಂಡಿಯಾದವರಿಗೆ, ಆಸೆಯೇ ದುಃಖಕ್ಕೆ ಮೂಲ ಎಂದು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪ್ರತಿಪಾದಿಸಿದ ಬುದ್ಧದೇವನ ಮಾತು ಮತ್ತು ಹಿಂದು ಸಂಸ್ಕೃತಿ ಪ್ರತಿಪಾದಿಸಿದ ಸಂಯಮ ಮುಂತಾದವು ಇನ್ನೂ ಪೂರ್ತಿ ಮರೆತಿಲ್ಲ. ಜನರು ಹಳ್ಳಿಹಳ್ಳಿಯ ಸ್ವಯಮಾಡಳಿತ ವ್ಯವಸ್ಥೆಯಲ್ಲಿ ಹೆಚ್ಚು ಸ್ವತಂತ್ರರಾಗಿ ಬದುಕುತ್ತಿದ್ದರೆಂಬುದು ಮರೆತಿಲ್ಲ. ಈ ಪರಂಪರೆಯ ವಿವೇಕದಿಂದ ನಾವು ವಿಜ್ಞಾನ ಯಂತ್ರಜ್ಞಾನಗಳನ್ನು ನಮ್ಮ ಪ್ರಯೋಜನಕ್ಕೆ ಪಳಗಿಸಿಕೊಳ್ಳಲು ಪ್ರಾಯಶಃ, ಹೆಣಗುತ್ತಿದ್ದೇವೆ. ತೃತೀಯ ಜಗತ್ತಿನ ಇಂಥ ಪ್ರಯೋಗಗಳಿಗೆ ಮಹಾತ್ಮಾಗಾಂಧಿ ಹರಳುಗಟ್ಟಿದ ಅಭಿವ್ಯಕ್ತಿಯಾಗಿ ಬಂದರು.

ಗಾಂಧೀಜಿ ಸರ್ವತ್ರ ವಿಕೇಂದ್ರೀಕರಣ ಮತ್ತು ಆಸೆಯ ಸಂಯಮ ಇವುಗಳನ್ನು ಕೇಂದ್ರವಾಗಿ ಪರಿಗಣಿಸಿದರು. ಪರಸ್ಪರ ಸ್ಪರ್ಧೆಗೆ ಬದಲಾಗಿ ಪ್ರೀತಿ ಸಹಕಾರಗಳನ್ನು ಪ್ರತಿಪಾದಿಸಿದರು. ಅಭಿವೃದ್ಧಿ ಅಥವಾ ಪ್ರಗತಿಯೆನ್ನುವುದನ್ನು ರೇಖಾಗತಿಯಾಗಿ ಪರಿಗಣಿಸಲಿಲ್ಲ: ಬದಲು, ಒಬ್ಬೊಬ್ಬ ವ್ಯಕ್ತಿಯೂ ತನ್ನ ಮಿತಿಯಲ್ಲಿ ಇಡೀ ಅರಳಿ ಕೊಳ್ಳುತ್ತ ಅಂತಿಮವಾಗಿ ಇಡೀ ಜನಪದ ತನ್ನ ಕಾಲ ದೇಶಗಳ ಚೌಕಟ್ಟಿನಲ್ಲಿ ಸಂಪೂರ್ಣ ಅರಳಿಕೊಳ್ಳುವುದೇ ಪ್ರಗತಿಯೆಂದು ಪ್ರತಿಪಾದಿಸಿದರು. ಆ ಪ್ರಕ್ರಿಯೆಯನ್ನು 'ಸರ್ವೋದಯ' ಎಂದು ಸಂಕೇತಿಸಿದರು.

ನಮ್ಮ ಸಂಸ್ಕೃತಿಯ ಶತಶತಮಾನದ ಜಾತಿ ವೈಷಮ್ಯದ ಕತ್ತಲಗರ್ಭದಿಂದ ಸೀಳಿಕೊಂಡು ಬಂದ ನರಸಿಂಹವ್ಯಕ್ತಿ ಡಾ. ಅಂಬೇಡ್ಕರ್. ರಾಷ್ಟ್ರದ ಹೊಸ ರಾಜ್ಯಾಂಗ ವನ್ನು ರೂಪಿಸಲಿಕ್ಕೆ ನಮ್ಮ ಜನ ಅವರಿಗೆ ನಾಯಕತ್ವ ಕೊಟ್ಟರು. ನಮ್ಮ ಕರ್ನಾಟಕದಲ್ಲಿ ತೀರ ಸಾಮಾನ್ಯರಿಂದ ಮೇಲೆದ್ದು ಬಂದ ಗೋಪಾಲಗೌಡ ಎನ್ನುವವರು, ಅಷ್ಟಾಗಿ ಇಂಗ್ಲೀಷ್ ಕೂಡ ಬಲ್ಲವರಲ್ಲ, ಕರ್ನಾಟಕದ ಹೊರಗೆ ಹೋಗಿದ್ದೂ ಅಪರೂಪ. ತನ್ನ ಸ್ಥಳದಲ್ಲೇ ಅಲ್ಲಿದ್ದ ಕೃಷಿಗೇಣಿದಾರರನ್ನು ಸಂಘಟಿಸಿ ರಾಷ್ಟ್ರಕ್ಕೇ ಮಹತ್ವದ್ದೆನ್ನಿಸಿದ ಪ್ರಕ್ರಿಯೆಯೊಂದನ್ನು ಪ್ರಾರಂಭಗೊಳಿಸಿದರು. ನಮ್ಮ ರಾಜ್ಯ ಅವರನ್ನೇ ಅತ್ಯಂತ ಶ್ರೇಷ್ಠ ನಾಯಕನೆಂದು ಪರಿಗಣಿಸುತ್ತದೆ. ರಾಜಕಾರಣದಲ್ಲಿ ನಾವು ಹೊಸ ದಾರಿ ಕಂಡುಕೊಳ್ಳುತ್ತಿರುವುದಕ್ಕೆ ಇವೆಲ್ಲ ಸಾಕ್ಷಿಗಳು.

ಇಂಡಿಯಾ ಮಾತ್ರವಲ್ಲ, ತೃತೀಯ ಜಗತ್ತಿನ ಎಲ್ಲಾ ಭಾಗಗಳಲ್ಲಿ ಬೇರೆಬೇರೆ ಅಸಂಖ್ಯಾತ ಕ್ಷೇತ್ರಗಳಲ್ಲಿ ಮೂಲೆಮೂಲೆಗಳಲ್ಲಿ ಇಂಥ ಪ್ರಯೋಗವು ವಿವಿಧ ಹಂತಗಳಲ್ಲಿ ನಡೆದಿದೆ ಎನುವುದು ನನ್ನ ನಂಬಿಕೆ. ಚೀನಾದ ನಾಯಕ ಮಾವೋತ್ಸೆತುಂಗ್ ಸೋವಿಯತ್ ಬಣದ ರಾಜಕೀಯ ಸಿದ್ಧಾಂತಗಳನ್ನು ಒಪ್ಪಿಕೊಂಡಿದ್ದರು. ಆದರೂ ಅವರು ವಿಶೇಷವಾಗಿ ಶ್ರಮಿಸಿದ್ದು ನರಕಸಂಸ್ಕೃತಿಗೆ ಪರ್ಯಾಯವಾಗಿ ಸಮಸ್ತರಿಗೂ ಲಭ್ಯವಾಗಬಲ್ಲ ಸರಳ ಜೀವನಕ್ರಮವನ್ನು ರೂಪಿಸಲಿಕ್ಕಾಗಿ.

ನಮ್ಮ ಸಹೋದರ ರಾಷ್ಟ್ರವಾದ ನಿಮ್ಮ ಫಿಲಿಪೀನ್ಸ್ ಪಶ್ಚಿಮಕ್ಕಿಂತ ಭಿನ್ನವಾದ ಹೊಸ ಪ್ರಜಾಪ್ರಭುತ್ವ ಪದ್ಧತಿಯನ್ನು ರೂಪಿಸಿಕೊಳ್ಳಲು ಹಲವು ಬಗೆಯ ಪ್ರಯತ್ನ ನಡೆಸಿರುವುದನ್ನೂ, ಮುಖ್ಯವಾಗಿ, ನಿಮ್ಮ ಗ್ರಾಮಾಡಳಿತ (ಬರಾಂಗ್ ಕೌನ್ಸಿಲ್) ಪ್ರಯೋಗಗಳನ್ನು ನಾನು ಕೇಳಿದ್ದೇನೆ. ನಮ್ಮಲ್ಲಿ ಕೂಡ, ಪ್ರಾಥಮಿಕ ಆಡಳಿತ ಘಟಕವಾಗಿ ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸಿ ರಾಜಕೀಯದಲ್ಲಿ ಆತ್ಯಂತಿಕ ವಿಕೇಂದ್ರೀ ಕರಣವನ್ನು ಸಾಧಿಸುವ ಪ್ರಯತ್ನಗಳು ಪ್ರಾರಂಭವಾಗಿವೆ. ನಮ್ಮ ಹಳೆಯ ಗ್ರಾಮ ಪಂಚಾಯಿತಿಗಳು ಆಡಳಿತದ ಘಟಕಗಳಾಗಿ ಮತ್ತು ನಾವು ಹೊಸದಾಗಿ ತಂದುಕೊಂಡ ಪಾರ್ಲಿಮೆಂಟ್ ರಾಷ್ಟ್ರೀಯ ಸಹಕಾರ ಘಟಕವಾಗಿ ಎರಡೂ ಒಟ್ಟುಗೂಡಿಸಿಕೊಂಡು ಒಂದು

ಹೊಸಬಗೆಯ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವಾದೀತೆ ಅರ್ಥಾತ್, ಆಡಳಿತದ ವಿಕೇಂದ್ರೀಕರಣ ಮತ್ತು ಸಹಕಾರದ ಕೇಂದ್ರೀಕರಣಗಳನ್ನು ಸಾಧಿಸಲಿಕ್ಕಾದೀತೆ ಎಂದು ನಾನು ಆಸೆಯಿಂದ ನಿರೀಕ್ಷಿಸುತ್ತೇನೆ.

ಒಟ್ಟಿನಲ್ಲಿ, ಈ ಇಡೀ ಪ್ರಕ್ರಿಯೆಯನ್ನು ಹೀಗೆ ಹೇಳಬಹುದು: ನಮ್ಮ ನಮ್ಮ ವಿವಿಧ ಪರಂಪರೆಯ ಗತಿ (ಥೆಸಿಸ್) ವಿಜ್ಞಾನಸಂಸ್ಕೃತಿಯ ವಿಗತಿ (ಆಂಟಿಥೆಸಿಸ್) ಯೊಡನೆ ಸಂಘರ್ಷಿಸಿ ಹೊಸ ಸಂಗತಿ (ಸಿಂಥೆಸಿಸ್)ಯನ್ನು ಸೃಜಿಸುವ ಪ್ರಕ್ರಿಯೆ ಇದು ಎನ್ನಬಹುದು.

ನಮ್ಮ ರಾಷ್ಟ್ರದ ಒಂದು ಮೂಲೆಯ ಬಹುಪುಟ್ಟ ಹಳ್ಳಿಯೊಂದರಲ್ಲಿ ಅಲ್ಲಿನ ಜನ ನಡೆಸಿರುವ ಪುಟ್ಟದೊಂದು ಪ್ರಯೋಗವನ್ನು ಹುಡುಕಿ ಕಂಡು ಅದಕ್ಕೆ ನನ್ನ ಹೆಸರಲ್ಲಿ ಈಗ ಪ್ರಶಸ್ತಿ ನೀಡುತ್ತಿದ್ದೀರಲ್ಲ. ಇದು ಪ್ರಾಯಃ, ತೃತೀಯ ಜಗತ್ತಿನ ಹೊಸ ಸಂಗತಿ (ಸಿಂಥೆಸಿಸ್)ಯ ಪ್ರಕ್ರಿಯೆಗೆ ಸಂದ ಪ್ರಶಸ್ತಿ.

ಮೇಲಿನ ಕೆಲವು ಮಾತುಗಳನ್ನು ಹೇಳುತ್ತಿದ್ದ ಹಾಗೆ, ಅದೇ ಮಾತುಗಳು ಇನ್ನೊಂದು ಮುಖದಿಂದ ನನ್ನನ್ನು ಅಣಕಿಸಿ ತಿಂದು ಕಾಡುತ್ತಿವೆ, ಅದನ್ನೂ ಹೇಳಿಕೊಳ್ಳಬೇಕು. ಇಂಡಿಯಾದ ಅಥವಾ ತೃತೀಯ ಜಗತ್ತಿನ ಇವತ್ತಿನ ದೈನಂದಿನ ಜೀವನದಲ್ಲಿ ವಾಸ್ತವವಾಗಿ ಕಾಣುತ್ತಿರುವುದೇನು? ನಾವೆಲ್ಲ ಏನನ್ನು ಅನುಭವಿಸುತ್ತಿದ್ದೇವೆ? ಹಣ, ಅಧಿಕಾರಲಾಲಸೆ, ಭ್ರಷ್ಟಾಚಾರ, ಅಮಾನವೀಯತೆ – ಕೇವಲ ಇವೇ. ಒಂದೇ ಮಾತಿನಲ್ಲಿ ಹೇಳುವುದಾದರೆ ನಾವೆಲ್ಲರೂ ಇವತ್ತು ನಮ್ಮ ನೆಲವನ್ನು ಅಸಹ್ಯನರಕವನ್ನಾಗಿ ಮಾಡಿಕೊಂಡು ಅಮಾನವೀಯವಾಗಿ ಬದುಕುತ್ತಿದ್ದೇವೆ. ತೀರ ಎದುರಿನ ಈ ವಾಸ್ತವದ ಜತೆ ನಮ್ಮ ಸಮಸ್ತ ಸತ್ತ್ವವನ್ನೂ ಬಳಸಿ ಹೋರಾಡಬೇಕಾದ್ದು ನಮ್ಮ ಪ್ರಪ್ರಥಮ ಕರ್ತವ್ಯವಾಗಿದೆ. ಅದನ್ನು ಕೊಂಚ ಮರೆತರೂ ನಮ್ಮ ದೇಶಗಳಿಗೆ ಭವಿಷ್ಯವೆಂಬುದೇ ಇಲ್ಲ. ಹಾಗೆ ಹೋರಾಡುವಾಗ, ಈ ನಮ್ಮ ನರಕಜೀವನದ ಆಳದ ಸ್ತರದಲ್ಲಿ ಮೇಲೆ ಹೇಳಿದ ಸೃಜನಪ್ರಕ್ರಿಯೆಯೊಂದು ಸುವರ್ಣರೇಖೆಯಂತೆ ಮಿಂಚುತ್ತಿರುವುದನ್ನು ಗಮನಿಸದೆ ಹೋಗಬಾರದು. ಒಂದನ್ನು ಮರೆತರೆ ನಾವು ಭೋಳೆಗಳಾಗುತ್ತೇವೆ; ಇನ್ನೊಂದನ್ನು ಮರೆತರೆ ಬರೀ ಸಿನಿಕರಾಗುತ್ತೇವೆ.

ಹಾಗೆ ಭವಿಷ್ಯದಲ್ಲಿ ಭರವಸೆ ಕಂಡುಕೊಂಡು ಅದರ ಸಾಧನೆಗಾಗಿ ಕಲುಷಿತ ವರ್ತಮಾನದಲ್ಲಿ ತೀವ್ರವಾದ ಹೋರಾಟ ನಡೆಸಿದಂಥವರಿಗೇ ಹೆಚ್ಚಾಗಿ ನಿಮ್ಮ ಗೌರವಯುತ ಪ್ರಶಸ್ತಿ ಈ ಹಿಂದೆ ಸಂದಿದೆ; ಅದರಿಂದಾಗಿ ಈ ಪ್ರಶಸ್ತಿ ನಮ್ಮ ಹೊಸ ನಾಯಕತ್ವವನ್ನು ರೂಪಿಸುತ್ತಿದೆ, ನಿರ್ದೇಶಿಸುತ್ತಿದೆ.

ಮ್ಯಾಗ್‌ಸೆಸೆ ಪ್ರಶಸ್ತಿಯನ್ನು ನೊಬೆಲ್ ಬಹುಮಾನಕ್ಕೆ ಹೋಲಿಸಿ, ಇದು ಏಸ್ಯಾದ ನೊಬೆಲ್ ಬಹುಮಾನ ಎಂದು ಹೆಸರಿಸುವುದುಂಟು. ನೊಬೆಲ್ ಬಹುಮಾನ

ನೀಡಂವುದಂ ಹೆಚ್ಚಾಗಿ ಯಾವುದೊಂದಂ ಕ್ಷೇತ್ರದಲ್ಲಿ ಯಾವನೊಬ್ಬ ವ್ಯಕ್ತಿ ಸಾಧಿಸಿದ ಪರಮಶ್ರೇಷ್ಠತೆಗಾಗಿ. ಆದರೆ ಮ್ಯಾಗ್‌ಸೆಸೆ ಪ್ರಶಸ್ತಿಯಂ, ನೊಬೆಲ್‌ಗೆ ಪರ್ಯಾಯಂವಾಗಿ, ಯಾವುದೊಂದಂ ಸಾಧನೆಯಂ ಮಾರ್ಗವನ್ನು ಅದರ ಸಾಮಾಜಿಕ ವ್ಯಾಪ್ತಿಯಂನ್ನು ಹೆಚ್ಚಾಗಿ ಪರಿಗಣಿಸಂತ್ತದೆ ಎಂದಂ ನನ್ನ ಅನಿಸಿಕೆ.

ಹಿಂದೆ ಈ ಪ್ರಶಸ್ತಿ ಪಡೆದಂಕೊಂಡ ನಮ್ಮ ದಿ. ಕಮಲಾದೇವಿ ಚಟ್ಟೋಪಾಧ್ಯಾಯಂರನ್ನೇ ತೆಗೆದುಕೊಳ್ಳಿ. ಅವರಂ ಯಾವುದೋ ಒಂದಂ ಕ್ಷೇತ್ರದಲ್ಲಿ ಪರಮಶ್ರೇಷ್ಠತೆಯಂನ್ನು ಸಾಧಿಸಿದವರಲ್ಲ; ಅವರಿಗಿಂತ ಮಿಗಿಲಾದ ರಾಜಕಾರಣ, ಸಮಾಜಸಂಧಾರಕಿ, ಕಲಾವಿದೆ, ಸಂಘಟನಕಾರ್ತಿ ಇತ್ಯಾದಿ ಬೇಕಷ್ಟಿದ್ದರಂ. ಆದರೆ ಈ ಎಲ್ಲಾ ಒಗ್ಗೂಡಿರಂವ ವ್ಯಕ್ತಿ ಮಂತ್ರ ತನ್ನ ಸಮಸ್ತವನ್ನೂ ಪ್ರಸ್ತುತ ಸಮಾಜಕ್ಕೆ ಸಂಬದ್ಧಗೊಳಿಸಿದ ವ್ಯಕ್ತಿ ಇನ್ನೊಬ್ಬರಿಲ್ಲ. ಶತಮಾನಗಳ ಕಾಲ ಇಂಡಿಯಾದ ಕವಿಗಳಂ ಕಲಾವಿದರಂ ಯಾವ ಧೀರ ಸುಂದರ ಪ್ರೇಮಲ ಸ್ತ್ರೀಮೂರ್ತಿಯಂನ್ನು ತಮ್ಮ ಕನಸಿನಲ್ಲಿ ತಿದ್ದಿತಿದ್ದಿ ರೂಪಿಸಿದರೋ ಅದಂ ಜೀವಗೊಂಡಂ ಬಂದವರಂ ಆಕೆ.

ಈ ಪ್ರಶಸ್ತಿ ಪಡೆದ ಜಾಪಾನಿನ ಫುಕವೊಕ ಕೃಷಿಕಾರರಂ. ನನ್ನ ವೃತ್ತಿಯಂೂ ಕೃಷಿಯೇ, ನಾನಂ ಅವರ ಸಹೋದ್ಯೋಗಿ ಎನ್ನುವುದಂ ನನಗೆ ಹೆಮ್ಮೆ. ಪಾಶ್ಚಾತ್ಯ ವಿಜ್ಞಾನ ನಾಗರಿಕತೆಯಂಲ್ಲಿ ಅವರಂ ಒಬ್ಬ ಶ್ರೇಷ್ಠ ಕೃಷಿವಿಜ್ಞಾನಿಯಾಗಂತ್ತಿದ್ದರೇನೋ. ಆದರೆ ಪೌರ್ವಾತ್ಯ ಸಂಸ್ಕೃತಿಯಂಲ್ಲಿ ಅವರಂ ತಾತ್ತ್ವಿಕರಾದರಂ; ಕೃಷಿಯಂ ಉದ್ಯೋಗದಲ್ಲಿ ವಿಶ್ವ ಉದ್ಯೋಗವನ್ನು ಸಾಕ್ಷಾತ್ಕರಿಸಿಕೊಂಡ 'ಋಷಿ'ಯಾದರಂ.

ಹೀಗೆ, ಈ ಪ್ರಶಸ್ತಿಯಂ ಪಶ್ಚಿಮಂದ ವಿಜ್ಞಾನದೃಷ್ಟಿಗೆ ಪರ್ಯಾಯಂವಾದ ಸಮ್ಯಕ್‌ದೃಷ್ಟಿಯೊಂದನ್ನು ಹುಡಂಕಲಂ, ಹುಡಂಕಿ ಗುರಂತಿಸಲಂ, ಗುರಂತಿಸಿ ಹೊಗಳಲಂ ಮೀಸಲಾಗಿದೆ.

ಏಷ್ಯಾದಲ್ಲಿ ವಸಾಹತಂಶಾಹಿಯಂನ್ನು ಮೊತ್ತಮೊದಲಿಗೆ ಕಿತ್ತೆಸೆದ ನಿಮ್ಮ ಧೀರಜನತೆಗೂ ಬೆಳಿಗ್ಗೆ ಪ್ರಪ್ರಥಮಂವಾಗಿ ಸೂರ್ಯಕಿರಣಗಳನ್ನು ಮೈದಂಂಬಿಕೊಳ್ಳುವ ನಿಮ್ಮ ನೆಲ–ಕಾಡಂ–ಕಡಲುಗಳಿಗೂ ತಲೆಬಾಗಿ ನಮಂಸ್ಕರಿಸಿ ಈ ಪ್ರಶಸ್ತಿಯಂನ್ನು ಸ್ವೀಕರಿಸಂತ್ತೇನೆ.

—ಕೆ. ವಿ. ಸುಬ್ಬಣ್ಣ

ಪ್ರಶಸ್ತಿ ಸ್ವೀಕಾರದ ಅನಂತರ ಮಾಡಿದ ಭಾಷಣದ ಮೂಲ ಕನ್ನಡ ರೂಪ—31-8-91
ಮನಿಲಾ (ಫಿಲಿಪೀನ್ಸ್)

ಕನಸಿಗೊಂದು ಕಣ್ಣು

ಯಾವುದು ನಮ್ಮ ನೆಲೆ ?

"ಅಳಿಯಾಸೆಗಳ ಸುಳಿಗೆ ಸಿಲುಕಿದಲೆ ಮನವೇ !
ನೆಲೆಯಿರದೆ ತೊಳಲುವುದು ಮನುಜ ಜೀವನವೇ ?
ನನೆಬೇಕು, ಕೊನೆಬೇಕು ನರನ ಬಾಳುವೆಗೆ,
ದಿನದ ಗೈಮೆಯ ಹೂವು ಫಲಿಸಿ ಬರುವುದಕೆ"

— ಗೋಪಾಲಕೃಷ್ಣ ಅಡಿಗ

ಇದು ಸಾವಿರಾರು ವರ್ಷಗಳ ಹಿಂದಿನ ಮಾತು. ಭೂಮಿ, ಆಕಾಶ, ಮೋಡಗಳು ಆದರ ಒಳತೋಟಿಯು ಪ್ರಕೃತಿ ಮಾಮೂಲಿಯಾಗಿತ್ತು. ಆದರೆ ಇದ್ದಕ್ಕಿದ್ದಂತೆ 'ಸಂಸ್ಕೃತಿ' ಮರುಭೂಮಿಯಲ್ಲಿ ಕೂತು ಅಳುತ್ತಿತ್ತಂತೆ. ಆಗ ಎರಡು ಪಕ್ಷಿಗಳು ಬಿಸಿಲ ಬೇಗೆಯನ್ನು, ಮರುಭೂಮಿಯ ಕಾವನ್ನು ಲೆಕ್ಕಿಸದೆ ಹಾರಿಬಂದವಂತೆ. ಸಂಸ್ಕೃತಿಯನ್ನು ಕೇಳಿದವು ಯಾಕೆ ಅಳುತ್ತಿದ್ದೀಯ? ಎಂದು. ಆಗ ಸಂಸ್ಕೃತಿ ಹೇಳಿತಂತೆ : ನಾನು ಬರಡಾಗುತ್ತಿದ್ದೇನೆ. ನಾನು ಉಳಿಯಬೇಕಾದರೆ ಭಾಷೆ ಬೇಕು ಅದಕ್ಕೊಂದು ಧ್ವನಿ ಬೇಕು ಎಂದಾಗ; ಆ ಪಕ್ಷಿಗಳು ಇಷ್ಟೇ ತಾನೇ ಎಂದು ಹಾರಿಹೋಗಿ ಎರಡು ಬೀಜ ತಂದು ಸಂಸ್ಕೃತಿಯ ಅಕ್ಕ ಪಕ್ಕ ಹಾಕಿದಾಗ ವಿಭಿನ್ನ ಮರಗಳು ಹುಟ್ಟಿಕೊಂಡವಂತೆ. ಅವುಗಳ ಮೇಲೆ ಗಾಳಿ ಬೀಸಿದಾಗ ಕೆಲವು ಮರಗಳು ನಾವು ಭಾಷೆ ಎಂದಾಗ ಮಿಕ್ಕ ಮರಗಳು ನಾವು ಸಂಗೀತ ಎಂದವಂತೆ. ಆ ಕ್ಷಣದಲ್ಲಿ ಮರುಭೂಮಿಯೆಲ್ಲ ಹಸಿರಾಯಿತು. ಭಾಷೆ ಮತ್ತು ಸಂಗೀತ ಹೆಗಲ ಮೇಲೆ ಕೈಹಾಕಿ ಧ್ವನಿ ಹರಡುತ್ತ ಸಮುದ್ರದ ದಂಡೆಯನ್ನು ಹುಡುಕುತ್ತ ನಡೆದವಂತೆ, ಸಮುದ್ರದ ದಂಡೆಗೆ ಬಂದಾಗ ಇವರ ಸುಮಧುರ ಧ್ವನಿಗೆ ಮರುಳಾಗಿ ಅಲೆಗಳು ಹುಟ್ಟಿಕೊಂಡವಂತೆ. 'ಸಂಸ್ಕೃತಿ' ಹಿಗ್ಗಿನಿಂದ ಡಯಾಸಳ ರೀತಿಯಲ್ಲಿ ಜಗತ್ತನ್ನು ಸುತ್ತತೊಡಗಿತಂತೆ.

ಇದನ್ನು ಕೆಲವು ವರ್ಷಗಳ ಹಿಂದೆ ನನ್ನ ಚೀನಿ ಗೆಳೆಯನಿಂದ ಕೇಳಿದ ಜಾನಪದ ಕಥೆ. ಯಾಂಗ್ ಎಂಬ ಆ ಗೆಳೆಯ ಹತ್ತೊಂಬತ್ತುನೂರ ಎಂಬತ್ತೈದರಲ್ಲಿ ಚೀನಿ ಗೋಡೆಯ ಮೇಲೆ ನಿಂತು ಮನುಷ್ಯನ ಸಾಹಸಗಳ ಬಗ್ಗೆ ಪುಳಕಿತನಾಗಿ ಮಾತಾಡುತ್ತಿದ್ದಾಗ ಈ ಕಥೆಯನ್ನು ಯಾಂಗ್ ಹೇಳಿದ್ದು. ಯಾಕೆಂದರೆ ಜಗತ್ತಿನ ಸಾಹಸಗಳಿಗೆಲ್ಲ

ಸಂಗೀತದ ಲಯ ಇರುತ್ತದೆ, ಮಾಧುರ್ಯ ಇರುತ್ತದೆ. ಆದ್ದರಿಂದಲೇ ಇತಿಹಾಸ ಯಾವಾಗಲೂ ಕಾಯ್ದಿಟ್ಟಿರುವುದು ಸುಖದುಃಖಗಳ ಅನ್ಯೋನ್ಯತೆಯನ್ನು. ಈ ಜಾನಪದ ಕಥೆ ಮೊನ್ನೆ ನೆನಪಾದಾಗ ಪುಳಕಿತನಾದೆ. ಪಂಚಾಕ್ಷರಿ ಗವಾಯಿಗಳ ಶತಮಾನ ಸ್ಮರಣೆಯ ಸಂಗೀತ ಕಾರ್ಯಕ್ರಮದಂತೆ ನಾದ ಹರಡತೊಡಗಿತು. ಆದರೆ ಮನುಷ್ಯನ ಸಣ್ಣತನ–ದೊಡ್ಡತನದ ಸುತ್ತ ಇರುವ ನೆಲೆ ಎಲ್ಲಿಯದು ಎಂಬ ಪ್ರಶ್ನೆ ಕಾಡತೊಡಗಿತು.

ಗದುಗಿನ ತೋಂಟದಾರ್ಯ ಸ್ವಾಮಿಗಳು ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಕಾರ್ಯಕ್ರಮವನ್ನು ಉದ್ಘಾಟಿಸುತ್ತ; ಅಮೃತ ಪ್ರೀತಮ್ ಅವರು ಜ್ಞಾನಪೀಠ ಪ್ರಶಸ್ತಿಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಆಸ್ಟ್ರೇಲಿಯದ ಒಂದು ಜಾನಪದ ಕಥೆಯನ್ನು ಹೇಳಿದ್ದನ್ನು ಧ್ವನಿಪೂರ್ಣವಾಗಿ ಪ್ರಸ್ತಾಪಿಸಿದರು : ಆಕಾಶದಲ್ಲಿ ಪಕ್ಷಿಗಳು ಸೂರ್ಯನ ಬೆಳಕಿನಿಂದ ಅದರ ಶಾಖದಿಂದ ಪುಳಕಿತಗೊಂಡು ಹಾರಾಡುತ್ತಿದ್ದವಂತೆ. ಮೋಡಗಳೆಲ್ಲ ಕೆಳಗೆ ತೇಲಾಡುತ್ತ ಇದ್ದುವಂತೆ. ಮನುಷ್ಯರು ಸರಿಯಾಗಿ ಓಡಾಡಲಾಗದಷ್ಟು ಮೋಡಗಳು ಕೆಳಕ್ಕಿದ್ದುವಂತೆ. ಆಗ ಪಕ್ಷಿಗಳಿಗೆ ಅಯ್ಯೋ ಅನ್ನಿಸಿತು. ಈ ಮನುಷ್ಯರಿಗೆ ನಮ್ಮಂತೆ ಹಾರಾಡಲಾಗುತ್ತಿಲ್ಲ. ಆದರೆ ಕೊನೆಯ ಪಕ್ಷ ಆರಾಮವಾಗಿ ನಡೆಯಬೇಕಲ್ಲವೆ ? ಇವರಿಗೆ ಸೂರ್ಯನ ಬೆಳಕು ಬೇಕಲ್ಲವೆ ಎಂದು ಪಕ್ಷಿಸಂಕುಲವೆಲ್ಲ ಸೇರಿಕೊಂಡು ತಮ್ಮ ಕೊಕ್ಕಿಗೆ ಕಡ್ಡಿಗಳನ್ನು ಸಿಕ್ಕಿಸಿಕೊಂಡು ನಿಧಾನವಾಗಿ ದಿನೇ ದಿನೇ ಮೋಡಗಳನ್ನು ಸ್ವಲ್ಪಸ್ವಲ್ಪವೇ ಮೇಲಕ್ಕೆತ್ತುತ್ತ ಹೋದುವಂತೆ. ಆಗ ಮೋಡಗಳು ಮೇಲಕ್ಕೆ ಹೋದ ಮೇಲೆ ಸೂರ್ಯನ ಬೆಳಕಿನಲ್ಲಿ ಆರಾಮವಾಗಿ ಓಡಾಡುವ ಮನುಷ್ಯರನ್ನು ಕಂಡು ಪಕ್ಷಿಗಳಿಗೆ ಹೃದಯ ತುಂಬಿಬಂತಂತೆ. ಇದನ್ನು ಹೇಳಿದ್ದು ಮನುಷ್ಯರ ಸಣ್ಣತನ ಮಿತಿ ಮೀರಿರುವುದನ್ನು ಕಂಡು. ಮನುಷ್ಯ ಸಂಗೀತದ ಹೃದಯವನ್ನು ಕಳೆದುಕೊಂಡಿದ್ದಾನೆ. ದಿನಾ ಬೆಳಗಾದರೆ ಜಾತಿ ಮತ್ತು ಮತೀಯ ಚೌಕಟ್ಟಿನಲ್ಲಿ, ಭಾಷೆ ಮತ್ತು ಬಣ್ಣದ ಚೌಕಟ್ಟಿನಲ್ಲಿ ಕುಬ್ಜರಾಗುತ್ತಿರುವುದರ ಬಗ್ಗೆ ಮಾರ್ಮಿಕವಾಗಿ ಮಾತಾಡಿದರು. ಇಡೀ ಭಾಷಣ ಭಾವನಾತ್ಮಕ ನೆಲೆಯಲ್ಲಿ ತೇಲಾಡುತ್ತಿರುವಾಗ ; ತಮಿಳರು ಇಡೀ ಕರ್ನಾಟಕವನ್ನು ಕೊಳ್ಳೆ ಹೊಡೆದಂತೆ ಮಾತಾಡಿದರು. ಮನುಷ್ಯ–ಮನುಷ್ಯರ ನಡುವೆ, ಜನಾಂಗ-ಜನಾಂಗಗಳ ನಡುವೆ ತಾರತಮ್ಯವಿರಬಾರದು ಎಂದು ಧ್ವನಿಗೂಡಿಸಿದ ತೋಂಟದಾರ್ಯರು ಬಾಳಾ ಠಕ್ರೆ ರೀತಿಯಲ್ಲಿ ಮಾತುಗಳ ಸುರಿಮಳೆ ರವೀಂದ್ರ ಕಲಾಕ್ಷೇತ್ರದ ತುಂಬ ತುಂಬಿಕೊಂಡಾಗ ಗಾಬರಿಗೊಂಡೆ. ಪಕ್ಕದಲ್ಲಿ ಕೂತಿದ್ದ ಹಿರಿಯ ಕುಟುಂಬ ಪೊಂದು ಭಾಷಣವನ್ನು ಅಲ್ಲಿಗೆಯೇ ನಿಲ್ಲಿಸಿದ್ದರೆ ಸಂಗೀತದಂತೆ ಎಷ್ಟೊಂದು ಧ್ವನಿಪೂರ್ಣವಾಗಿರುತ್ತಿತ್ತು ಎಂದು ವಿಷಾದದಿಂದ ನರಳುತ್ತಿದ್ದುದನ್ನು ಕಂಡು ಮನುಷ್ಯನ ಮಾನಸಿಕ ನೆಲೆ ಯಾವುದು? ಯಾರು ಎಲ್ಲೆಲ್ಲಿ ಬದುಕಬೇಕು? 'ಸಂಸ್ಕೃತಿ' ತಾನು ಜೀವಂತವಾಗಿರಲು

ಭಾಷೆಯನ್ನು ಮತ್ತು ಸಂಗೀತವನ್ನು ಯಾಕೆ ಕೇಳಿದ್ದು? ಹಾಗೆಯೇ ಮನುಷ್ಯರ ಭಾವನಾತ್ಮಕ ಸಂಬಂಧಗಳಂತೆ ಅಲೆಗಳು ನಾದ ತುಂಬಿಕೊಂಡಿದ್ದು, ಪಕ್ಷಿಗಳು ಮೋಡಗಳನ್ನು ಮೇಲಕ್ಕೆ ಸರಿಸಿದ್ದು ಯಾಕೆ? ಎಂದು ನರಳುತ್ತಿರುವಾಗ ಚಪ್ಪಾಳೆಯು ನಡುವೆ ತೋಂಟದಾರ್ಯರು ಮರೆಯಾದರು. ದೊಡ್ಡ ಮನುಷ್ಯರೂ ಸಹ ಸಣ್ಣವರಾಗುವುದು ಸುಲಭ ಅನ್ನಿಸಿತು. ಮರುಕ್ಷಣದಲ್ಲಿಯೇ ಪ್ರಸಿದ್ಧ ಗಾಯಕ (ಮಹಾರಾಷ್ಟ್ರ) ಪ್ರಭಾಕರ ಕಾರೇಕರ್‌ರವರ ಸಂಗೀತದ ಧ್ವನಿತರಂಗ ಕಲಾಕ್ಷೇತ್ರವನ್ನು ತುಂಬಿಕೊಂಡಿತು. ಆ ಗಾಯನದ ಮಧ್ಯೆ ತೋಂಟದಾರ್ಯರು ತಮ್ಮ ಮಾತಿನ ವೈರುಧ್ಯವನ್ನು ಅರಿತರೋ ಇಲ್ಲವೋ ಗೊತ್ತಿಲ್ಲ. ಆದರೆ ಆ ಕ್ಷಣದಲ್ಲಿ ಅವರು ಅರಿಯದಿದ್ದರೆ ತಮ್ಮ ಒಟ್ಟು ಭಾಷಣದ ಧ್ವನಿಮುದ್ರಿಕೆಯನ್ನು ತರಿಸಿ ಕೇಳಿಕೊಂಡರೆ ಸೂಕ್ತ. ಯಾಕೆಂದರೆ ಪ್ರೀತಿಯ ಬೀಜವನ್ನು ಬಿತ್ತುವ ಸಮಯದಲ್ಲಿಯೇ ವಿಷದ ಗೊಬ್ಬರವನ್ನು ತೋಂಟದಾರ್ಯರಂಥ ಪ್ರಗತಿಪರರು ಚೆಲ್ಲಬಾರದು ಅಲ್ಲವೇ?

ಕೊನೆಗೆ ರಾಮಮನೋಹರ ಲೋಹಿಯಾರವರ ಈ ಮಾತಿನಿಂದ ಇದನ್ನು ಮುಗಿಸುತ್ತೇನೆ: ಧರ್ಮ ಮತ್ತು ರಾಜಕಾರಣ, ದೇವರು ಮತ್ತು ರಾಷ್ಟ್ರ (ಅಥವಾ ಜನಾಂಗ) ಒಂದಕ್ಕೊಂದು ಮಿಶ್ರವಾಗಿಬಿಡುವುದುಂಟು, ಎಲ್ಲ ಕಡೆಗೂ ಎಲ್ಲ ಕಾಲದಲ್ಲೂ. ಇಂಥದು ಉಳಿದೆಲ್ಲ ಕಡೆಗಳಿಗಿಂತ ಇಂಡಿಯಾದಲ್ಲಿ ಹೆಚ್ಚು. ಶಿವನ ಜೀವಿತದ ಮಹತ್ ಘಟನೆಗಳಲ್ಲಿ ಒಂದು, ಪಾರ್ವತಿಯ ಮರಣಾನಂತರದ ಆತನ ದೈತ್ಯಶೋಕ. ಪಾರ್ವತಿಯ ಕಲೇವರವನ್ನು ಬೆನ್ನಿಗೂ ಹೆಗಲಿಗೂ ಚೆಲ್ಲಿಕೊಂಡು ಆತ ಇಡೀ ದೇಶದ ಒಳಗೂ ಸುತ್ತಲೂ ಧಾವಂತ ಸುತ್ತಿದ. ಈ ಧಾವಂತದಲ್ಲಿ ಪಾರ್ವತಿಯ ದೇಹದ ಅಂಗಾಂಗಗಳು ಒಂದೊಂದೇ ಕಳಚಿ ಬೀಳುತ್ತಿದ್ದವು. ಕೊನೆಯ ಚೂರು ಉದುರುವ ತನಕವೂ ಶಿವ ನಿಲ್ಲಲಿಲ್ಲ. ತೀಕ್ಷ್ಣವೂ ನಿಸ್ಸಂಕೋಚವೂ ಆದ ಮೈತ್ರಿಯ ಇಂಥ ಅವಧೂತಕಥೆಯನ್ನು ಯಾವ ಪ್ರೇಮಿಯೂ ಉಳಿಸಿ ಹೋಗಿಲ್ಲ – ದೇವಾನುದೇವತೆಗಳಲ್ಲಾಗಲಿ, ದೈತ್ಯರಲ್ಲಾಗಲಿ, ಮನುಷ್ಯರಲ್ಲಾಗಲಿ. ಅದಷ್ಟೇ ಅಲ್ಲ, ಈ ಕಥೆ ಇಂಡಿಯಾದ ಕ್ಷಯವಿಲ್ಲದಂಥ ಅಂತಃಸ್ಫೂರ್ತವಾದ ಏಕತೆಯ ಕಥೆಯನ್ನೂ ಹೇಳುತ್ತದೆ. ಪಾರ್ವತಿಯ ಒಂದೊಂದು ಅಂಗ ಕೆಳಗೆ ಬಿದ್ದಲ್ಲೂ ಒಂದೊಂದು ಯಾತ್ರಾಸ್ಥಳ ಕಲ್ಪಿತವಾಗಿದೆ.

5-11-91 — ಶೂದ್ರ ಶ್ರೀನಿವಾಸ್

●

ಎಲ್ಲಾ ಕೇವಲ 365 ದಿನಗಳಲ್ಲಿ

ತನ್ನ ಪ್ರಜೆಗಳ ಪ್ರಗತಿ ಮತ್ತು ಮುನ್ನಡೆಗಾಗಿ ಬದ್ಧವಾಗಿರುವ ಸರ್ಕಾರವೊಂದಕ್ಕೆ ಯಾವುದೇ ಪ್ರಯತ್ನವು ಕಷ್ಟವಲ್ಲ, ಯಾವುದೇ ಕೆಲಸವು ಹೆಚ್ಚಲ್ಲ.

ಪ್ರಾಥಮಿಕ ಶಿಕ್ಷಣಕ್ಕೊಂದು ಉತ್ತೇಜನ, ಬೇಸಾಯಗಾರರಿಗೊಂದು ಅಮೂಲ್ಯ ನಿಧಿ ಮತ್ತು ನೀರಾವರಿಗೊಂದು ಅಭೂತಪೂರ್ವ ಆದ್ಯತೆಯತ್ತ ಇಂದು ಸರ್ಕಾರ ಬದ್ಧವಾಗಿದೆ. ಈ ದಿಶೆಯತ್ತ ದಿಟ್ಟ ಹೆಜ್ಜೆ ಇಟ್ಟಿದೆ. ಕೋಮು ಗಲಭೆಗಳನ್ನು ಮತ್ತು ಅಪರಾಧಗಳನ್ನು ಹತ್ತಿಕ್ಕಲು ಸರ್ಕಾರವು ಕ್ರಮ ಕೈಗೊಂಡಿದೆ. ಗಲಭೆಗಳನ್ನು ತಡೆವ ಸಲುವಾಗಿ ರಾಜ್ಯ ಏಕತಾ ಸಮಿತಿಯೊಂದನ್ನು ರಚಿಸಲಾಗಿದೆ.

ಬಡಜನತೆಗಾಗಿ ಅರ್ಥಪೂರ್ಣ ಸುಧಾರಣಾ ಯೋಜನೆಗಳು

ಶುಶ್ರೂಷಾ : ಗ್ರಾಮೀಣ ಜನತೆಗೆ ಪ್ರತಿ 6 ತಿಂಗಳಿಗೊಮ್ಮೆ ಉಚಿತ ವೈದ್ಯಕೀಯ ತಪಾಸಣೆ ದುಬಾರಿ ಚಿಕಿತ್ಸೆ ನಡೆಸಬೇಕಾಗುವ ರೋಗಗಳ ಗುರುತಿಸುವಿಕೆ ಮತ್ತು ಚಿಕಿತ್ಸೆ ನೀಡುವ ಯೋಜನೆಯೇ ಈ ಶುಶ್ರೂಷಾ. ಈ ಯೋಜನೆಯಿಂದ ಬಡಜನರೂ ಕೂಡ ಬೇರಾವುದೇ ಜನರಂತೆ ಅವರ ಜೀವನ ಅಮೂಲ್ಯವೆಂಬಂತೆ ಆರೈಕೆ ಪಡೆಯಲು ಸಾಧ್ಯವಾಗುತ್ತದೆ.

ಆರಾಧನಾ : ಜನರಲ್ಲಿ ಧಾರ್ಮಿಕ ಭಾವನೆಯನ್ನು ಈ ಯೋಜನೆಯು ಬಲಪಡಿಸುತ್ತದೆ. ದುರ್ಬಲ ಜನಾಂಗಗಳ ಜನತೆಯಿರುವೆಡೆ ಅವಶ್ಯಕತೆಗಳನ್ನು ಪೂರೈಸುವ ಸದುದ್ದೇಶದಿಂದ ಅವರು ವಾಸಿಸುವ ಸ್ಥಳಗಳಲ್ಲಿಯೇ ನಿರ್ಮಿಸಲು ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ,

ವಿಶ್ವ : ಗ್ರಾಮೀಣ ಗುಡಿ ಕೈಗಾರಿಕೀಕರಣವನ್ನು ಮೇಲೆತ್ತಲು ಸಾವಿರಾರು ಗ್ರಾಮೀಣ ಜನತೆಗೆ ಸತತ ಮತ್ತು ಲಾಭಯುತ ಉದ್ಯೋಗವನ್ನೀಯುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಯೋಜಿಸಿದೆ. ಕಚ್ಚಾಸಾಮಗ್ರಿಗಳ ಪೂರೈಕೆ, ಉತ್ಪನ್ನಗಳ ಮಾರಾಟ ಮತ್ತು ಕೌಶಲ್ಯವರ್ಧನೆ ಇತ್ಯಾದಿಗಳಿಗೆ ಸರ್ಕಾರದ ಪೂರ್ಣ ಬೆಂಬಲವಿದೆ.

ಆಶ್ರಯ : ಅನುಸೂಚಿತ ಜಾತಿಯ ಮತ್ತು ಕೋಮಿನವರಿಗೆ ಇದೇ ವರ್ಷ ರಾಜ್ಯದ ಪ್ರತಿಯೊಂದು ತಾಲ್ಲೂಕುಗಳಲ್ಲಿ 1000 ಗೃಹಗಳನ್ನು ಮತ್ತು 5 ವರ್ಷಗಳಲ್ಲಿ 1 ಲಕ್ಷ ಗೃಹಗಳನ್ನೊದಗಿಸಲು ಈ ಹಿರಿದಾದ ಯೋಜನೆಯನ್ನು ಹಾಕಿಕೊಂಡಿದೆ.

ಅಕ್ಷಯ : ಸಮಾಜದ ಖರ್ಚಿನಲ್ಲಿ ಹಿಂದುಳಿದ ಬಡಮಕ್ಕಳಿಗೆ ಒಂದು ಹೊತ್ತಾದರೂ, ಪೌಷ್ಟಿಕ ಆಹಾರವನ್ನು ನೀಡಲು ಇದೊಂದು ಮಾನವೀಯ ಕಾರ್ಯಕ್ರಮ. ಎಳೆ ವಯಸ್ಸಿನಲ್ಲಾದರೂ ಮಕ್ಕಳು ಶಾಲೆಗೆ ಬರಲು ಇದೊಂದು ಪ್ರೇರಣೆ.

"ಕರ್ನಾಟಕ ವಾರ್ತೆ" ಎಸ್. ಬಂಗಾರಪ್ಪ

ಕರ್ನಾಟಕದ ಮುಖ್ಯಮಂತ್ರಿಗಳು

Central Sahitya Akademi

Some English Publications

Churning of the City by O. P. Sharma 'Sarathi' Tr. Shivanath	Rs. 10
Contemporary Indian Short Stories - Series I	Rs. 20
" " Series II	Rs. 30
" " Series III	Rs. 30
Contemporary Indian Short Stories in English	Rs. 50
Rajinder Singh Bedi : Selected Short Stories	Rs. 60
Krishan Chander : Selected Short Stories	Rs. 60
The Bird of GOLD and Other Stories by Om Goswami, Tr. Shivanath	Rs. 25
The Drought and Other Stories by S. C. Chatterjee, Tr. Sasadhar Singha	Rs. 25
The Golden Treasury of Indo-Anglian Poetry Comp. V K. Gokak	Rs. 50
History of Assamese Literature by Birinchi Kumar Barua	Rs. 12
History of Dogri Literature by Shivanath	Rs. 12
History of Gujarathi Literature by Mansukhlal Jhaveri	Rs. 25
History of Indian English Literature by M. K. Naik	Rs. 60
History of Marathi Literature by Kusumwati Deshpande and M. V. Rajadhyaksha	Rs. 40
History of Rajasthani Literature by Hiralal Maheswari	Rs. 25
History of Tamil Literature by M. Varadarajan	Rs. 60
History of Sindhi Literature by L H. Ajwani	Rs 60
Three Decades (A short history of Sahitya Akademi 1954-84) by D. S. Rao	Rs. 30
Contemporary Indian Literature forword by S. Radhakrishnan	Rs. 25
Encyclopaedia of Indian Literature-Vol.I to IV, each	Rs. 400
Fellow the Notes of the Flute Ed. V. N. Mishra	Rs. 15
India and World Culture by V. K. Gokak	Rs. 40
In Your Blossoming Flower Garden by Ketaki Kushari Dyson	Rs. 100
Rabindranath Tagore-A Centenary Volume (1861-1961)	Rs. 200
The Ramayana Tradition in Asia by V. Raghavan	Rs. 100
The Mahabharata Revisited Ed. R. N. Dandekar	Rs. 75
The Epic Beautiful by K. R. Srinivasa Iyengar	Rs. 60
The History of Indian Literature-Vol.VIII (1800-1910)- Western Impact: Indian Response Com. Sisir Kumar Das	Rs. 300
The Perennial Vivekananda: A selection Ed. Swami Lokeswarananda	Rs. 30

SAHITYA AKADEMI

New Delhi-1 Bangalore-2 Culcutta-53 Bombay-14

Southern Regional Office : 109, J. C. Road, Bangalore-560 002

FNP/KRNU/72 No. M (2) PRB 211/73/74

SHOODRA Kannada Monthly

ಜನವರಿ 1992ರ ಸಂಚಿಕೆ ಅಂಬೇಡ್ಕರ್ ವಿಶೇಷಾಂಕ. ಡಾ|| ಎಸ್. ಚಂದ್ರ
ಶೇಖರ್ ಸಂಪಾದಿಸಿಕೊಡುವರು. ಈ ಸಂಚಿಕೆ ತಡವಾಗಿದ್ದಕ್ಕೆ ಕ್ಷಮಿಸಿ. —ಸಂ.

M. Srinivas, Editor for Shoodra, Printed at :
Pallavi Printers, No. 1, 3rd Cross, Balaji Nagar,
Suddagunte Palya, D.R. College Post, Bangalore–29